ಅನ್ವೇಷಣೆ

ಸಾಹಿತ್ಯ ಸಂಸ್ಕೃತಿ ವೈಚಾರಿಕ ಸಂ : 43

ಈ ಸಂಚಿಕೆಯಲ್ಲಿ

ಬೆಲೆ : ರೂ. 5/-

ಪ್ರಗತಿಪರ ವಿಚಾರಗಳಿಗೆ

ಅನ್ವೇಷಣೆ

ಸಾಂಸ್ಕೃತಿಕ ಚಟುವಟಿಕೆಗಳಿಗೆ

ಸಂಪುಟ : 7 ಮಾರ್ಚ್–ಏಪ್ರಿಲ್–1991 ಸಂಚಿಕೆ :

- 'ಅನ್ವೇಷಣೆ' ಸಾಹಿತ್ಯ – ಸಾಂಸ್ಕೃ ಚಟುವಟಿಕೆಗಳಿಗೆ ಮೀಸಲಾದ ದ್ವೈಮಾಸಿಕ.
- ಪ್ರಕಟಣೆಗೆ ಕಳುಹಿಸುವ ಲೇಖ ವಿಮರ್ಶಾ ಬರಹ, ಕವನಗಳನ್ ಆದಷ್ಟು ಟೈಪು ಮಾಡಿ ಕಳುಹಿಸಿ.
- ಅಪ್ರಕಟಿತ ಬರಹ ವಾಪಸ್ ಬೇಕಿದ್ದರೆ ಸಾಕಷ್ಟು ಅಂಚೆ ಚೀಟಿ ಇರಿಸಿ
- ವಿಳಾಸ ಬದಲಾದರೆ ದಯವಿಟ್ಟು ತಿಳಿ
- ಚಂದಾ ಹಣವನ್ನು ಎಂ. ಓ. ಇಲ್ಲ ಡಿ. ಡಿ. ಮೂಲಕ ಕಳುಹಿಸಿ. ಚೆಕ್ ಕಳುಹಿಸುವಾಗ ರೂ. 5 ಹೆಚ್ಚು ಕಳುಹಿಸಿ.
- ವಾ. ಚಂದಾ ರೂ. 35 ವ್ಯಕ್ತಿಗಳಿಗೆ ರೂ. 50 ಸಂಸ್ಥೆ/ಗ್ರಂಥಾಲಯ
  3 ವರ್ಷಕ್ಕೆ ರೂ. 100 – ವ್ಯಕ್ತಿಗಳಿಗೆ
  ರೂ. 150-ಗ್ರಂಥಾಲಯಗಳಿಗೆ

ಆಜೀವ :
ರೂ. 500 ಸಂಸ್ಥೆ/ಗ್ರಂಥಾಲಯಗಳಿಗೆ

ಸಂಪರ್ಕ ವಿಳಾಸ

ಸಂಪಾದಕ, **"ಅನ್ವೇಷಣೆ"**
478, 11ನೇ ಮುಖ್ಯರಸ್ತೆ, ಎಂ. ಸಿ. ಬಡಾವಣೆ
ವಿಜಯನಗರ, ಬೆಂಗಳೂರು–560 040.

ಸಂಪಾದಕನ ಟಿಪ್ಪಣಿ

ಸೃಷ್ಟಿ

ಕನಸಿನ ಗರಿ, ಲಂಕೇಶ್ ಮತ್ತು ಬಂದಳಿಕೆಗಳು

Everyone speaks well of his heart, but no one dares to say it of his head

– *La Rochefoucauld*

ಗರಿ ಕೆದರಿ....

ಜೆ. ಪಿ. ಚಳವಳಿಯಿಂದ ಪ್ರೇರಣೆ ಪಡೆದು, ಅಂಥ ವಿಚಾರಗಳತ್ತ ನಾನು ಗಂಭೀರವಾಗಿ ಗಮನ ಹರಿಸಿದ್ದು ಬೆಂಗಳೂರಿಗೆ ಬಂದ ಸಂದರ್ಭದಲ್ಲೇ. ೧೯೮೧ ರಿಂದ ೮೫ರವರೆಗೆ ಕಾನೂನು ವಿದ್ಯಾರ್ಥಿಯಾಗಿದ್ದ ಸಂದರ್ಭ ಸಹಜವಾಗೇ ರಾಜಕೀಯ ಆಸಕ್ತಿ ಮೂಡಿಸಿತ್ತು. ಜೆ. ಪಿ. ವಿಚಾರಕ್ಕೆ ಸ್ಪಂದಿಸಿದ್ದ ಜನತಾದಲ್ಲಿ ಕೊಂಚ ತೊಡಗಿಸಿಕೊಂಡಿದ್ದೆ. ಪಕ್ಷದ 'ಜನತಾ' ಎಂಬ ತಿಂಗಳ ಪತ್ರಿಕೆ (ಬುಲೆಟಿನ್)ನ್ನು ಸಂಪಾದಿಸಲು ಪ್ರೊ|| ಎ. ಲಕ್ಷ್ಮೀಸಾಗರ್ (ಇವರು ಎಸ್. ಜೆ. ಆರ್. ಕಾಲೇಜಿನಲ್ಲಿ ಕಾನೂನಿನ ಒಂದು ವಿಷಯ ಬೋಧಿಸುತ್ತಿದ್ದ ಗುರುಗಳು) ಹಾಗೂ ಬಾಪು ಹೆದ್ದೂರಶೆಟ್ಟರಿಗೆ ಸಹಾಯಕನಾಗಿದ್ದೆ. ಪತ್ರಿಕೆಯಲ್ಲಿ ಸಹಾಯಕನಾಗಿ ಕೆಲಸ ಮಾಡುತ್ತಿದ್ದುದಕ್ಕಾಗಿ ತಿಂಗಳಿಗಿಷ್ಟೆಂದು ಕೊಡುತ್ತಿದ್ದ ಹಣ ನನ್ನ ಓದಿಗೆ ಸಹಾಯಕವಾಗುತ್ತಿತ್ತು. ಪ್ರತಿ ಭಾನುವಾರ ಸಮಾಜವಾದಿ ಅಧ್ಯಯನ ಕೇಂದ್ರ ನಡೆಸುತ್ತಿದ್ದ ಚರ್ಚೆಗೆ ಬಾಪು ಮನೆ ಕೇಂದ್ರವಾಗಿತ್ತು. ಬಹುತೇಕ ಅವರೇ ಅದರ ಮಾರ್ಗದರ್ಶಿಗಳು. ಆದರ್ಶಗಳ ಕನಸು ಹೊತ್ತ ಹತ್ತಾರು ಯುವಕ – ಯುವತಿಯರು ಅವರ ಜೊತೆ ಇರುತ್ತಿದ್ದರು. ನರೇಂದ್ರದೇವ, ಲೋಹಿಯಾ, ಮಾರ್ಕ್ಸ್ ಇತ್ಯಾದಿ ವಿಚಾರಗಳನ್ನು ಸಾಮಾಜಿಕ, ಆರ್ಥಿಕ ವಿಚಾರಗಳ ಹಿನ್ನೆಲೆಯಲ್ಲಿ ಚರ್ಚಿಸಿ ತಲೆ ತುಂಬಿಕೊಳ್ಳುತ್ತಿದ್ದರು. ಹಳ್ಳಿಗಾಡಿನಿಂದ ಬಂದ ನನಗೆ ಇವೆಲ್ಲಾ ಹೊಸತೇ. ಚರ್ಚೆಗಳೆಲ್ಲಾ ಇಂಗ್ಲಿಷ್‌ನಲ್ಲೇ ನಡೆಯುತ್ತಿದ್ದವಾದ್ದರಿಂದ ಎಲ್ಲವನ್ನೂ ಗ್ರಹಿಸಿಕೊಳ್ಳಲು ಚಡಪಡಿಸುತ್ತಿದ್ದೆ. ಆದರೂ ತಲೆಯಲ್ಲಿ

ಏನೆಲ್ಲಾ ವಿಚಾರ ತುರುಕಿಕೊಳ್ಳುವ ತವಕ. ದೇಶ–ವಿದೇಶದ ಆಗು ಹೋಗುಗಳ ಬಗ್ಗೆ ಅಂಥಲ್ಲಿ ನಡೆಯುತ್ತಿದ್ದ ಚರ್ಚೆಗಳಿಗೆ ಪರಿಹಾರ ಸಿಕ್ಕುತ್ತಿತ್ತೋ ಇಲ್ಲವೋ .... ಅಂತೂ ಒಂದು ಹೊಸ ಅನುಭವ ಆಗುತ್ತಿದ್ದುದು ಮಾತ್ರ ಸತ್ಯ.

ಒಂದು ರಾಜಕೀಯ ಪಕ್ಷದೊಂದಿಗಿನ ಒಡನಾಟದಿಂದಾಗಿ ಅದರ ಕಾರ್ಯ ಚಟುವಟಿಕೆಗಳಲ್ಲೂ ಅಷ್ಟಿಷ್ಟು ಭಾಗವಹಿಸುತ್ತಿದ್ದೆ. ಇದೇ ಸಂದರ್ಭ (೧೯೮೩ ಇರಬಹುದು) ಅಖಿಲ ಭಾರತ ಯುವ ಜನತಾ ಸಮ್ಮೇಳನವೊಂದು ಲಾಲ್‌ಬಾಗ್‌ನಲ್ಲಿ ಜರುಗಿತು. ದೇಶದ ಪ್ರಮುಖ ರಾಜಕಾರಣಿಗಳು ಮೇಳೈಸಿದ್ದ ಆ ಸಮಾವೇಶ ಹಲವು ಕನಸುಗಳ ಗರಿಗೆದರಿಸಿತ್ತು. ಹತ್ತಾರು ಮಿತ್ರರೊಂದಿಗೆ ಉತ್ಸಾಹದಿಂದ ಭಾಗವಹಿಸಿದ್ದ ನನಗೆ ಪೂರ್ಣ ರಾಜಕಾರಣದ ವಿಚಾರ ಪ್ರಿಯವಾಗದಿದ್ದರೂ, 'ರಾಜಕೀಯ ಬದಲಾವಣೆ'ಯ ತುಡಿತದ ಹೊಸ ಗಾಳಿಯಲ್ಲಿ ಅಭಿವ್ಯಕ್ತಿ ಕ್ರಿಯೆಯನ್ನು ಕಂಡುಕೊಳ್ಳುವ ಮಾರ್ಗವನ್ನಂತೂ ಅಲ್ಲಿ ಕಂಡಿದ್ದೆ.

ಮಾಧ್ಯಮ ಹೊಸ ಹಾದಿಯಲ್ಲಿ....

ರಾಜಕೀಯದಲ್ಲಿ ಹೇಗೋ ಸಾಮಾಜಿಕ, ಸಾಂಸ್ಕೃತಿಕ ಇತ್ಯಾದಿ ಇತರೆ ಕ್ಷೇತ್ರಗಳಲ್ಲೂ ಅಂಥದ್ದೊಂದು ಬದಲಾವಣೆಗೆ ತುಡಿಯುತ್ತಿದ್ದ ಮನಸ್ಸುಗಳಿಗೆ ಪತ್ರಿಕಾ ಮಾಧ್ಯಮದಲ್ಲಿ ಆಶಾದಾಯಕ ಸೂಚನೆಯೊಂದು ಸಿಕ್ಕಿತು. ವ್ಯಕ್ತಿಯೊಬ್ಬನ ಹೆಸರಿನ ಪತ್ರಿಕೆ ಅದಾದರೂ ಅದೊಂದು ವಿಚಿತ್ರ ಸಂವೇದನೆ ಉಂಟುಮಾಡಿ,ಜನಾಭಿಪ್ರಾಯಕ್ಕೆ ಸ್ಪಂದಿಸಿದ್ದು ಮಾತ್ರ ಸ್ವಾಗತಾರ್ಹವಾಗಿತ್ತು. ಇದು 'ಲಂಕೇಶ್ ಪತ್ರಿಕೆ'ಯೆಂದು ಬೇರೆ ಹೇಳಬೇಕಾಗಿಲ್ಲವಾದರೂ, ವ್ಯಕ್ತಿಗತ ವಿಚಾರಗಳು, 'ಅಲ್ಲಿ' ಆಗ ಕೆಲಸಮಾಡದೆ; ಬಹು ಜನಾಭಿಪ್ರಾಯಗಳ ಅಭಿವ್ಯಕ್ತಿ 'ಒಟ್ಟು ಅಭಿಪ್ರಾಯ'ವಾಗಿ ಮೂಡಿ ಬರುತ್ತಿದ್ದುದು ನಮಗೆಲ್ಲಾ ಸಂತೋಷವನ್ನುಂಟು ಮಾಡಿತ್ತು. ವಿಶಿಷ್ಟ ಶೈಲಿಯ ಬರಹಗಳಿಂದ ರೋಮಾಂಚನವನ್ನುಂಟು ಮಾಡುತ್ತಿದ್ದ ಪತ್ರಿಕೆಯೊಂದಿಗೆ ಗುರುತಿಸಿಕೊಳ್ಳುವುದೂ ಹಲವರ 'ಫ್ಯಾಷನ್' ಆಗಿತ್ತು. ಈ ಪತ್ರಿಕೆ ಮೇಲೆ ಪ್ರೀತಿ ಎಷ್ಟಿತ್ತೆಂದರೆ, ಅದನ್ನು ನೂರಾರು ಓದುಗರಿಗೆ ತಲುಪಿಸುವುದೂ ನಮ್ಮ ಕರ್ತವ್ಯವೆಂದು ಭಾವಿಸಲಾಗಿತ್ತು. ಅದರಂತೆ ಕಲಿತು ಹಳ್ಳಿಗಳಲ್ಲಿ ಸೇರಿದ್ದ ನೂರಾರು ಕನಸುಣಿಗ ಯುವಕರು ಪತ್ರಿಕೆಯಲ್ಲಿನ ತಲ್ಲಣಗೊಳ್ಳುವ ವಿಚಾರಗಳಿಗೆ ಸ್ಪಂದಿಸುತ್ತ, ನೂರಾರು ಮೈಲುಗಳ ದೂರದಿಂದ ಬಂದು ಪತ್ರಿಕಾ ಕಛೇರಿಗೆ ಎಡತಾಕಿ ಪತ್ರಿಕೆ ವಿತರಣೆಗೆ ತವಕಗೊಂಡು, ಸ್ವಯಂಸ್ಫೂರ್ತಿ ತೋರಿಸಿದ್ದು ಈಗ ಇತಿಹಾಸ.

ಇಂಥ ಹಿನ್ನೆಲೆಯಿಂದಾಗಿಯೇ ನಾನು ಕೆಲವು ವಿಚಾರಗಳನ್ನು ಮುಕ್ತವಾಗಿ ಹೇಳಬೇಕಿದೆ. ಲಾಲ್‌ಬಾಗ್‌ನ ಸಮಾವೇಶದಲ್ಲಿ ಆ ದಿನವೇ ಬಂದಿದ್ದ ಲಂ. ಪ. ಮಾರಾಟ ಮಾಡುವ ಇಚ್ಛೆಯಿಂದ ಕಛೇರಿಗೆ ತೆರಳಿ ಪರಿಚಯದ ವ್ಯವಸ್ಥಾಪಕರಿಗೆ ಹೇಳಿ ಸುಮಾರು ಇನ್ನೂರು ಪ್ರತಿಗಳನ್ನು ತಂದು ಸಂಜೆ ಒಳಗೆ ನೂರಕ್ಕೂ ಹೆಚ್ಚು ಪ್ರತಿಗಳನ್ನು ಮಾರಾಟ ಮಾಡಿ, ಸ್ನೇಹಿತರು ಅಸೂಯೆಪಟ್ಟುಕೊಳ್ಳುವಂತೆ ಸುಮಾರು ನಲವತ್ತು ರೂ. ಸಂಪಾದಿಸಿದ್ದೆ. ಹೆಮ್ಮೆಯಿಂದ ಬೀಗಿ ಖುಷಿಗೊಂಡಿದ್ದ ನನಗೆ ಲಂಕೇಶ್ ಪತ್ರಿಕೆ ಮಾರಾಟ ಮಾಡಿದ್ದು ಅವಮಾನ ಅನ್ನಿಸಲಿಲ್ಲ.

ರಾಜಕೀಯ ಪಕ್ಷದ ಒಡನಾಟವಿದ್ದರೂ, (ಮುಂದೆ) ರಾಜಕೀಯ ನನ್ನಂಥವನಿಗಲ್ಲವೆಂದು ದೂರ ಸರಿದೆ. ಈ ನಡುವೆ ಸಾಹಿತ್ಯ–ಸಾಂಸ್ಕೃತಿಕ ವಿಚಾರಗಳಲ್ಲಿ ಗಮನ ಹರಿಸಿದ್ದಾಗಲೇ ಜಿಡ್ಡು ಕೃಷ್ಣಮೂರ್ತಿ (ಜೆ.ಕೆ.) ಫೌಂಡೇಷನ್ ಆಫ್ ಇಂಡಿಯಾ ಸಂಸ್ಥೆಯ ವ್ಯಾಲಿ ಶಾಲೆಯಲ್ಲಿ ಭಾಷಾಶಾಸ್ತ್ರ ಬೋಧಿಸುವ ಮೇಸ್ಟ್ರಾಗಿ ಕೆಲಸಕ್ಕೆ ಸೇರಿಕೊಂಡೆ. ಕೆಲವರ್ಷಗಳ ವಿಶೇಷ ಅನುಭವದೊಂದಿಗೆ ಹೊರಬಂದಾಗ 'ಅನ್ವೇಷಣೆ' ಹುಟ್ಟಿಕೊಂಡಿತು. ಬದುಕಿನ ಹೋರಾಟದೊಂದಿಗೆ ಇದನ್ನೂ ಉಳಿಸಿ, ಬೆಳೆಸತೊಡಗಿದೆ. ಇಂಥ ಸಂದರ್ಭದಲ್ಲೂ ಲಂಕೇಶ್ ಪತ್ರಿಕೆ ವಿಶೇಷ ಅನುಭವವನ್ನೇ ಕೊಡುತ್ತಿತ್ತು. ರಾಜಕೀಯ ವ್ಯಕ್ತಿಗಳ ತಿಕ್ಕಲುತನಗಳು ಜನತೆಗೆ ರೋಸಿ ಹೋಗಿದ್ದಾಗ ಲಂ. ಪ. ಮಾರ್ಗಸೂಚಿಯಂತೆ ಕಂಡಿದ್ದರಿಂದ ಭಾರೀ ಬದಲಾವಣೆಯೇ ಆಗುತ್ತದೆಂಬ ನಿರೀಕ್ಷೆ ಇಲ್ಲಿತ್ತು. ಅದರಂತೆ ಕರ್ನಾಟಕದ ಮಟ್ಟಿಗೆ ರಾಜಕೀಯದಲ್ಲಾದ ಹೊಸ ಬದಲಾವಣೆಗೆ ಪತ್ರಿಕೆ ಪಾತ್ರವೂ ಮಹತ್ವದ ಪಾತ್ರ ವಹಿಸಿತ್ತು.

ಆದರೆ ಈ ಹೊಸ ಬದಲಾವಣೆಗೆ ಜನತೆಯ ಜಾಗೃತಿಯನ್ನು ಪರಿಗಣಿಸದೆ "ನನ್ನಿಂದ"ಆಯಿತೆಂಬ ಲಂಕೇಶ್‌ರ 'ಅಹಂ'ಗೆ ಇತರ ಜನಪರ ಸಂಘಟನೆಗಳೂ ಬಲಿಆಗಬೇಕಾಯಿತು. ಸಮಾಜವಾದಿ ವಿಚಾರಗಳಲ್ಲಿ ಒಂದಾಗಿದ್ದರೂ ವ್ಯಕ್ತಿಗಳಲ್ಲಿನ ವೈಯಕ್ತಿಕ ಘರ್ಷಣೆಯಿಂದಾಗಿ ರೈತಸಂಘದಂಥ ಪ್ರಬಲ ಸಂಘಟನೆಯನ್ನು ಮೂದಲಿಸುವ, ದಾರಿ ತಪ್ಪಿಸುವ ಮಟ್ಟಿಗೆ ಲಂಕೇಶ್ ವರ್ತಿಸತೊಡಗಿದ್ದು....ಭಾಷಾ ಚಳುವಳಿಯಲ್ಲಿ ಮುಂಚೂಣಿಯಲ್ಲಿದ್ದವರ ಬಗ್ಗೆ ಇಲ್ಲಸಲ್ಲದ ಟೀಕೆ ಮಾಡಿದ್ದು ; ಇವರಿಂದ ಪ್ರಬಲ ಪ್ರತಿಭಟನೆ ಎದುರಿಸಿದ್ದು.... ಯಾವಾಗಲಾದರೊಮ್ಮೆ ದಲಿತರ ಹಾಗೂ ಒಂದಿಬ್ಬರು ಮುಂದಾಳುಗಳ ಬಗ್ಗೆ ಸಹಾನುಭೂತಿ ತೋರಿಸುತ್ತಲೇ ಇಲ್ಲೂ ಒಡಕು ದನಿ ಎತ್ತಿ ಮುಂದೆ ನಿಜ ಬಣ್ಣ ಬಯಲು ಮಾಡಿಕೊಂಡಿದ್ದು ಇತ್ಯಾದಿ ಮರೆಯುವಂತಿಲ್ಲ.

ಪ್ರಗತಿ ರಂಗವೆಂಬ ಕನಸಿನ ರಾಜ್ಯ....

ಹಣದ ಹೊಳೆ ಹರಿದಂತೆ, ಪ್ರಸಿದ್ಧಿ ನೆತ್ತಿಗೇರಿದಂತೆ ಹಲವರು ನಡೆದುಬಂದ ದಾರಿಯತ್ತ ತಿರುಗಿ ನೋಡಲಾರರು, ನಡೆದು ಬಂದ ದಾರಿಯ ನೆನಪುಗಳನ್ನು ಸಾಯಿಸಿ, ಕರ್ನಾಟಕದ ಸರ್ವತೋಮುಖ ಬೆಳವಣಿಗೆಗೆ ವೇದಿಕೆ ಕಟ್ಟಿಕೊಂಡು ತನ್ನ ಪತ್ರಿಕೆಯಲ್ಲೇ ಸಭೆ–ಸಮಾರಂಭಗಳ ಸುಳ್ಳು ಬರಹಗಳನ್ನು ಸೃಷ್ಟಿಸಿ, ಸಾವಿರಾರು ಯುವಕ, ಯುವತಿಯರಿಗೆ ಪ್ರಗತಿಯ ಹೆಸರಿನಲ್ಲಿ ಕನಸು ಕೊಟ್ಟು ಮುಂದೊಂದು ದಿನ ತನ್ನ ಪ್ರಗತಿರಂಗ ರಾಜಕೀಯ ಪಕ್ಷವಾಗಲು, ತಾನು ವಿಧಾನಸೌಧದ 'ಆಳುವ ದೊರೆ' ಆಗುವ ಕನಸು ಕಟ್ಟಿಕೊಂಡದ್ದು ಲಂಕೇಶ್ ಹಿಡಿದ ಅವನತಿಯ ಹೆಜ್ಜೆಗಳಲ್ಲೊಂದು. ಸೈದ್ಧಾಂತಿಕವಾಗಿ ಯಾವುದೇ ಜನಪರ ಸಂಘಟನೆಗಳೊಂದಿಗೂ ಹೊಂದಾಣಿಕೆ ಇಲ್ಲದ ಪ್ರತಿಷ್ಠೆಯ' ಅಹಂನ ವ್ಯಕ್ತಿಯೊಬ್ಬ ರಾಜಕಾರಣದಲ್ಲಿ ಧೂಮಕೇತು ಆಗುವ ಸೂಚನೆಗೆ ಬೇಗ ಕಲ್ಲು ಬಿದ್ದುದಕ್ಕೆ ಜನತೆಗೆ ಸಂತೋಷವಂತೂ ಆಗಿದೆ.

ಪ್ರಗತಿರಂಗಕ್ಕೆ ಗುದ್ದು ತೋಡಿ ಉಸುಕು ಮಣ್ಣು ಮುಚ್ಚಿದ ನಂತರ ಲಂಕೇಶ್ ವರ್ತನೆಯಲ್ಲಿ ಹಲವಾರು ವಿಚಿತ್ರಗಳು ಕಾಣಿಸಿಕೊಂಡವು. ಸರಿ ಸುಮಾರು ಪತ್ರಿಕೆ ಹುಟ್ಟಿ ಒಂಬತ್ತು ವರ್ಷಗಳವರೆಗೂ ಸಾಹಿತ್ಯದ ವಿಚಾರಗಳ ಬಗ್ಗೆ ಅಷ್ಟಾಗಿ ತಲೆಕೆಡಿಸಿಕೊಳ್ಳಲಾರದ ಈತ, 'ಸಾಹಿತ್ಯದಲ್ಲಿ

ಶ್ರೇಷ್ಠತೆ ಹುಡುಕುವ ನೆಪ ಮಾಡಿಕೊಂಡವರಿಗೆ ಗಾದಿ ಕೊಟ್ಟು ತಾನೇ 'ಮುಂದಾಳು' ಆಗಿ ಈಗಾಗಲೇ ಚಾಲ್ತಿಯಲ್ಲಿದ್ದ ಸಾಹಿತ್ಯ ವಿಚಾರಗಳನ್ನು ಹೀಗಳೆಯುವ **ಪಟಾಲಂ ಗುಂಪು** ಕಟ್ಟಿಕೊಳ್ಳಬೇಕಾಯಿತು. ರಾಜಧಾನಿಯ ಈ ಪಟಾಲಂಗಳು ತುಂಡು, ಗುಂಡು ಮೂಳೆ, ಇತ್ಯಾದಿ ಖಯಾಲಿಗಳವರಾದ್ದರಿಂದ ಇವರಿಗೆ **ಲಂ. ಪ. ವೇದಿಕೆಯಾಯಿತು,** ಸಾಹಿತ್ಯದಲ್ಲಿ ಹೊಸ ಪ್ರಕಾರ ವನ್ನೇ ಸೃಷ್ಟಿಸಿ, ಗುರ್ತಿಸುತ್ತೇವೆಂಬ ಬೊಬ್ಬೆ ಮುಂದಿಗೆ ಮತ್ತಷ್ಟು ಉಪ್ಪು, ಹುಳಿ, ಉರಿ ಹಚ್ಚಿ 'ಗಾಯ' ಮಾಡಿದ ಕೀರ್ತಿಯೂ ಲಂಕೇಶ್‌ರಿಗೆ ಸಲ್ಲಬೇಕು. ಈಗಿದು 'ಕೀವು' ತುಂಬಿಕೊಂಡ 'ಜಾಗೃತ' ಅವಸ್ಥೆ ತಲುಪಿದೆ...

ಜಾಗೃತಕ್ಕೆ ವಿರೋಧ ತನ್ನ ಪತ್ರಿಕಾ ಸಿಬ್ಬಂದಿಯಲ್ಲೇ ಶುರುವಾಯಿತು. ಮುಂದೆ ಈ ವಿರೋಧಿಗಳಿಗೆ ಕಿರುಕುಳ ಅತಿಯಾದಾಗ ಪತ್ರಿಕೆ ಬಿಡುವ ಅನಿವಾರ್ಯ ನಿರ್ಮಾಣ ಮಾಡಿ, ದುಡಿವ ಕೈಗಳ ಅನ್ನ ಕಿತ್ತುಕೊಂಡು, ನ್ಯಾಯಾಲಯದ ಮೆಟ್ಟಿಲು ಹತ್ತುವ ಸ್ಥಿತಿ 'ಲಂ'ಗೆ ಬಂದಿದ್ದರೂ, ತಾನು ಮಾತ್ರ ಸಭ್ಯನಂತೆ ಮೋಸದ ಬರಹ ಗಳನ್ನು ನೀಡುತ್ತಿರುವುದನ್ನು ಕಾಣಬಹುದು. ಪತ್ರಿಕೆ ಹುಟ್ಟಿನಿಂದ ಜೊತೆಗಿದ್ದ ಕಂಪೋ-ಸಿಟರ್‌ಗಳನ್ನು ಬೀದಿಪಾಲು ಮಾಡಿದ್ದು, ಸ್ಥಾನ ಭದ್ರತೆಯಿಲ್ಲದೆ ಯೌವನವನ್ನು ಕರಗಿಸುತ್ತ ಸಾಗಿದ್ದ ವರದಿಗಾರರು, ಕಲಾವಿದರಿಗೆ ಯಾವ ಮುನ್ಸೂಚನೆಯಿಲ್ಲದೆ ಕೆಲಸದಿಂದ ತೆಗೆದದ್ದು ಅಲ್ಲೇ ಬಂಡಾಯ ಹೇಳಲು ಕಾರಣವಾಯಿತು. ಸತ್ಯಮೂರ್ತಿ, ಚಂದ್ರು ಅಂಥ ಉತ್ತಮ ವರದಿಗಾರರು ; ಪಂಜು ಗಂಗುಲಿ, ಗುಬ್ಬಿಯಂಥ ಪ್ರಖ್ಯಾತ ವ್ಯಂಗ್ಯ ಚಿತ್ರಗಾರರು ಪತ್ರಿಕೆಯಿಂದ ಹೊರ ಬಂದಮೇಲೆ ಪತ್ರಿಕೆ ಜಾಳು ಜಾಳಾಗಿ ಬರ ತೊಡಗಿತು. ಪತ್ರಿಕೆ ಪ್ರಸಾರ ಅರ್ಧದಷ್ಟು ಕುಸಿದಾಗ ಕೆಟ್ಟ ವರದಿಗಳನ್ನು, ನಗ್ನ ಚಿತ್ರಗಳನ್ನು ಹಾಕುವ ಮೂಲಕ ಪತ್ರಿಕೆಯನ್ನು 'ಜೀವಂತ' ಎಂದು ತೋರಿಸಿ ಕೊಳ್ಳುವ ನಾಟಕ ಶುರುವಾಗಿ, ಸಾಹಿತ್ಯ ಪುಟದ ಹೆಸರಿನಲ್ಲಿ ಪ್ರಮುಖ ಬರಹಗಾರ ರನ್ನು (ಜಾಗೃತ–ಸಾಹಿತ್ಯಕ್ಕೆ ವಿರೋಧ ಇದ್ದವರನ್ನು) ಅವಮಾನಿಸತೊಡಗಿದ ಲಂಕೇಶ್‌ಗೆ ಬೆನ್ನೆಲುಬಾದವರು ಸಾಹಿತ್ಯ ಪುಢಾರಿ ಶೂದ್ರ ಶ್ರೀನಿವಾಸ್ ಹಾಗೂ ಡಿ. ಆರ್. ನಾಗರಾಜ್ ಮುಂತಾದ ಪಟಾಲಂ ಬರಹಗಾರರು. ಈ ಶೂದ್ರನ ಬರಹ ಗಳನ್ನು ಓದಿದವರು ಯಾರೂ ಆತನ ಬೆನ್ನು ತಟ್ಟಬೇಕಿಲ್ಲ–ಏಕೆಂದರೆ 'ಲಂ' ಈ ಕೆಲಸ ಮಾಡಿರುವುದರಿಂದಲೇ ಈತ ಎಗ್ಗಿಲ್ಲದೆ ಬಂಡವಾಳಶಾಹಿ 'ಲಂ'ನ ತೋಟದಲ್ಲಿ ಕಳೆದ ರಾತ್ರಿಯನ್ನು ರಂಜಕವಾಗಿ ಬರೆಯಬಲ್ಲ, ವರದಿಯ ಹೆಸರಲ್ಲಿ ಬೇಡವಾದವರನ್ನು ತುಚ್ಛೀ ಕರಿಸಬಲ್ಲ. 'ಲಂ' ಮುಂದೆ ಹಲ್ಲುಗಿಂಜುವ ಇವರೆಲ್ಲಾ ಎಂದೋ ಸ್ವಂತಿಕೆ ಕಳೆದುಕೊಂಡ ಬಂದಳಿಕೆಗಳಾಗಿರುವುದರಿಂದ ಉಸಿರು, ಬಸಿರು ಎಲ್ಲಾ 'ಲಂ'ನಿಂದಲೇ ಪಡೆಯುವುದರಿಂದ ಸಾಹಿತ್ಯ–ಸಾಂಸ್ಕೃತಿಕ ಕ್ಷೇತ್ರದಲ್ಲಿ ಆರೋಗ್ಯಕರ ದೃಷ್ಟಿ ಹೇಗೆ ತಾನೆ ಬಂದೀತು.

ಈಚೆಗಂತೂ ಭೈರಪ್ಪ, ಶಿವಪ್ರಕಾಶ್, ಬರಗೂರು, ಕಾಳೇಗೌಡ, ದರ್ಗಾ ಮುಂತಾದವರನ್ನು ವಿಮರ್ಶೆಯ ಹೆಸರಲ್ಲಿ ಅನಾವಶ್ಯಕ ಅವಮಾನ ಮಾಡುವುದನ್ನು ಕಂಡರೆ ಲಂಕೇಶ್ ಮಾತಿನ (ಬರಹದ) ಹಿಂದೆ ಯಾರ ಕೈವಾಡ ಇದೆಯೆಂದು

(8ನೇ ಪುಟ ನೋಡಿ...)

ಕುಸುಮಬಾಲೆಯ ಓದು, ಚೆಂಪಾ ...ಇತ್ಯಾದಿ

—ಡಾ॥ ಪೋಲಂಕಿ ರಾಮಮೂರ್ತಿ

'**ಕುಸುಮ ಬಾಲೆ**'ಯಂತಹ ಒಂದು ಕತೆ ಹೊರ ಬಿದ್ದಾಗ ಅದನ್ನು ಕಂಡು ಕೊಳ್ಳುವ ಭಾಗ್ಯ ಓದುಗನದಾಗುತ್ತದೆ.

'ಕುಸುಮ ಬಾಲೆ'ಯನ್ನು ಬರೆದವನೂ ಅದನ್ನು ಕಂಡುಕೊಳ್ಳಬೇಕಾದರೆ ಅವನೂ ಒಬ್ಬ ಓದುಗನಾಗುವ ಚೈತನ್ಯವನ್ನು ಗಳಿಸಿಕೊಳ್ಳಬೇಕಾಗುತ್ತದೆ. '**ಕುಸುಮ ಬಾಲೆ**'ಯಂತಹ ಕತೆ ಕೇವಲ ಒಬ್ಬ ವ್ಯಕ್ತಿಯಿಂದ ಸೃಷ್ಟಿಯಾಗುವುದಿಲ್ಲ. '**ಕೆರೆಗೆ ಹಾರ**'ದಂತಹ ಜಾನಪದ ಕತೆಯಂತೆ ಇಡಿಯ ಜನಾಂಗದಿಂದ ಸೃಷ್ಟಿಯಾಗುತ್ತದೆ.

'**ಕೆರೆಗೆ ಹಾರ**'ದ ಜಾನಪದ ಕವಿ,ಅಕ್ಷರ ಬಾರದವನಾಗಿ ಇರಬಹುದು,ಹೆಣ್ಣು ಆಗಿರಬಹುದು. ಆದರೆ **ಕೆರೆಗೆ ಹಾರ**ದಲ್ಲಿ ನಡೆದಿರುವ ಪವಾಡ, ಅದು ತೋರಿಸಿರುವ ಅದ್ಭುತ ಕಂಡುಕೊಂಡ ಕಾಣ್ಕೆ ದಕ್ಕಬೇಕಾದರೆ ಓದುಗನೆನ್ನುವ ಪ್ರಾಜ್ಞನಿಗೆ ಮಾತ್ರ. ಆದರೆ ಈ ಪವಾಡಗಳನ್ನು, ಅದ್ಭುತಗಳನ್ನು, ಕಾಣ್ಕೆಗಳನ್ನು **ಕೆರೆಗೆ ಹಾರದ** ಕವಿಗೆ ತೋರಿಸಿದರೆ ಆ ಕವಿ ಕಕ್ಕಾಬಿಕ್ಕಿಯಾದರೆ ಆಶ್ಚರ್ಯವಿಲ್ಲ.

ಉದಾಹರಣೆಗೆ ಷೇಕ್ಸ್‌ಪಿಯರ್‌ನ ಕೃತಿಗಳ ಮೇಲೆ ಬರೆದ ವಿಮರ್ಶೆ ಎಷ್ಟಿದೆಯೆಂದರೆ ಆ ವಿಮರ್ಶೆಯ ಪುಟಗಳನ್ನು ಒಂದರ ಪಕ್ಕದಲ್ಲೊಂದು ಇಡುತ್ತ ಹೋದರೆ, ನಾವು ಅದರ ಮೇಲೆ ಚಂದ್ರನ ಹತ್ತಿರಕ್ಕೆ ನಡೆದು ಹೋಗಬಹುದು ! ಅಂದರೆ ಇಷ್ಟೆಲ್ಲಾ ಷೇಕ್ಸ್‌ಪಿಯರ್‌ಗೆ ಗೊತ್ತಿತ್ತೆ ? ಖಂಡಿತಾ ಇಲ್ಲ,ಯಾಕೆಂದರೆ ಷೇಕ್ಸ್‌ಪಿಯರ್‌ನ ಹಿಂದೆ ಜನಾಂಗದ **ಪ್ರಜ್ಞೆ**ಯೇ ಕೆಲಸ ಮಾಡುತ್ತಿತ್ತು ! ಅದಕ್ಕೇ ಒಬ್ಬ ವಿಮರ್ಶಕ ಈ ಮಾತನ್ನು ಹೇಳುತ್ತಾನೆ; "who is Lear, asked Bradley and Shakespeare answered him badly" ಅಂದರೆ ಬ್ರ್ಯಾಡ್ಲಿ ಎನ್ನುವ ವಿಮರ್ಶಕನಿಗೆ ಗೊತ್ತಿರುವ ಒಳನೋಟಗಳು ಷೇಕ್ಸ್‌ಪಿಯರ್‌ಗೆ ಗೊತ್ತಿರಲಿಲ್ಲ ಎಂದರ್ಥ.

ಒಮ್ಮೆ ಡಿ. ಎಚ್. ಲಾರೆನ್ಸನು ತನ್ನ "**ಲೇಡಿ ಛಾಟರ್ಲೀಸ್ ಲವರ್**" ನಲ್ಲಿನ ಒಂದು ಸಂಕೇತವನ್ನು ತೋರಿಸಿದ ವಿಮರ್ಶಕನಿಗೆ ಕೃತಜ್ಞತೆಯನ್ನು ಹೇಳುತ್ತಾ, ತನಗೆ ಅದು ಬರೆಯುವಾಗ ಹೊಳೆದಿರಲಿಲ್ಲವೆನ್ನುತ್ತಾನೆ.

ಆದ್ದರಿಂದ **ರವಿ ಕಾಣದ್ದು ಕವಿ ಕಂಡ ; ಕವಿ ಕಾಣದ್ದು ವಿಮರ್ಶಕ ಕಂಡ** ಅನ್ನುವ ಮಾತು ಬಹಳ ಗಂಭೀರವಾದದ್ದು .

ಷೇಕ್ಸ್‌ಪಿಯರನು ಕಾಮದ ಬಗ್ಗೆ ಬರೆದ ಈ 129ನೇ ಸಾನೆಟ್ಟಿನ ಒಂದೇ ಒಂದ ಸಾಲು ಎಷ್ಟು ಸತ್ಯಗಳನ್ನು ಬಿಚ್ಚುತ್ತದೆ ನೋಡುವ, ಉದಾಹರಣೆಗೆ—**Expens of spirit in a waste of shame/Is lust in action.**

ಇಲ್ಲಿ ಇದರರ್ಥ ''**ಕಾಮೋನ್ಮಾದದ ಕ್ರಿಯೆಯಲ್ಲಿ, ಬೆದೆಯಲ್ಲಿ, ಅಂದರೆ ಸಂಭೋಗದಲ್ಲಿ ನಮ ಸತ್ವವೇ ಪೋಲಾಗಿಬಿಡುತ್ತದೆ, ಅದರಿಂದಾಗಿ ನಾವು ನಾಚಿಕೆಯ ಬೆಂಗಾಡಿನಲ್ಲಿ ಕಂಗಾಲಾಗಿಬಿಡುತ್ತೇವೆ ಎಂದು. ಇಲ್ಲಿ spirit ಅನ್ನುವ ಪದಕ್ಕೆ ಕನಿಷ್ಟ ನಾಲ್ಕು ಮುಖ್ಯವಾದ ಅರ್ಥಗಳನ್ನು ವಿಮರ್ಶಕರ ಕಾಣುತ್ತಾರೆ. ಆ ಅರ್ಥಗಳು ಯಾವ ಇಂಗ್ಲಿಷ್‌ನ ಶಬ್ಧಕೋಶದಲ್ಲೂ ಸಿಗುತ್ತವೆ.**

ಇಲ್ಲಿ spirit ಅಂದರೆ ೧) ರೇತಸ್ಸು, ೨) ಉಸಿರು, ೩) ಸತ್ವ ೪) ಅಧ್ಯಾತ್ಮಿಕತೆ ಎಂದು. ಅಂದರೆ ಲೈಂಗಿಕ ಕ್ರಿಯೆಯಲ್ಲಿ ಈ ಎಲ್ಲಾ ಪೋಲಾಗುತ್ತವೆ. ನಮ್ಮ ಧಾತು ವ್ಯಯವಾಗುತ್ತದೆ, ನಮ್ಮ ಉಸಿರು ಹೊರಟುಹೋಗುತ್ತದೆ, ನಮ ಸತ್ವ ಹಾಳಾಗುತ್ತದೆ, ನಮ್ಮ ಅಧ್ಯಾತ್ಮಿಕ ಮೌಲ್ಯ ನಮ್ಮ ಬ್ರಹ್ಮಚರ್ಯದಂಥಾ ತಪ ಶ್ಶಕ್ತಿ ನಾಶವಾಗುತ್ತದೆ.

ಹಾಗೆಯೇ "**ಕುಸುಮ ಬಾಲೆ**"ಯಲ್ಲಿನ ಮದುವೆಯಾಗದೇ ನಿಂತ ಬ್ರಾಹ್ಮ ಹೆಣ್ಣು ಭಗವತಿ ಹೊಲೆಯನಾದ ಅಮಾಸನನ್ನು ಬೆಳಗಿನಝಾವದ ಮಂಪರಿನಲ್ಲಿ ಕೂ "ಕುಪಿತ"ಳೂ ಏಕಕಾಲದಲ್ಲಿ "ಪುಳಕಿತ"ಳೂ ಆಗುತ್ತಾಳೆ. ಕೂಡಿಕೆ ಮುಗಿದ ಕೂಡಲೆ ಅವಳಿಗೆ ಕಾಣುವುದು ಶುಕ್ರಾ ನಕ್ಷತ್ರ. ಇಲ್ಲಿ ಈ "ಶುಕ್ರ" ಎನ್ನುವ ಪದಕ್ಕೆ ಕನಿಷ್ಟ ೪ ಮುಖ್ಯಾರ್ಥಗಳು ನಮ್ಮ ನಿಘಂಟುವಿನಲ್ಲೇ ಇವೆ. ಇವೆಲ್ಲ ಒಂದಕ್ಕೊಂದು ಪೂರ ವಾದ ಅರ್ಥ ವಿಶೇಷಗಳು—ಈ ಕತೆಯ ಸಂದರ್ಭದಲ್ಲಿ. "ಶುಕ್ರ"ಎಂದರೆ ೧. ರೇತಸ್ಸು ೨. ಬಿಳಿ, ಬೆಳಕು ೩. ಅರಿವು ೪. ರಾಕ್ಷಸತ್ವ ಹಾಗೂ ರಕ್ಷಣೆ (ಯಾಕೆಂದರೆ ಶುಕ್ರಾ ಚಾರಿ ರಾಕ್ಷಸರ ಗುರುವು ಮತ್ತು ರಾಕ್ಷಸನೆಂದರೆ ರಕ್ಷಣೆ ಮಾಡುವವನೆಂದು. ಹೀ ಭಗವತಿ "ಕುಪಿತ"ಳಾದರೆ, ಭಗವು "ಪುಳಕಿತ"ವಾಗುತ್ತದೆ ; ಆದರಿಂದಾಗಿ "ಶುಕ್ರ ಅವಳಿಗೆ "ರೇತಸ್ಸಿ"ನ ಭಾಗ್ಯದಾತನಾಗಿಯೂ ಅವಳಿಗೆ ಹೆಣ್ಣುತನದ ಸಾಫಲ್ಯವನ್ನಿತ್ತ "ಬೆಳ"ಕಾಗಿಯೂ, "ಅರಿವಾ"ಗಿಯೂ, "ರಕ್ಷೆ"ಯಾಗಿಯೂ ಮತ್ತೂ ಒಂದು"ರಾಕ್ಷಸ ಭಯವಾಗಿಯೂ ಏಕಕಾಲದಲ್ಲಿ ಅವಳಲ್ಲಿ ಸಂಕೀರ್ಣ ಭಾವಗಳನ್ನು ಹುಟ್ಟಿಸುತ್ತದೆ.

ಇಲ್ಲಿ ಈ ಅರ್ಥ ಸಂಪತ್ತು, ಒಂದನ್ನೊಂದು ಪುಷ್ಟೀಕರಿಸುತ್ತಾ, ಒಟ್ಟು ಅನುಭವವನ ಸಂಕೀರ್ಣಗೊಳಿಸಿ ಓದುಗನೆನ್ನುವ, ಸಹೃದಯನೆನ್ನುವ, ವಿಮರ್ಶಕನೆನ್ನುವ ಪ್ರಾಜ್ಞನಿಗೆ ರಸಾನ ಭಾವದಲ್ಲಿ ಅನುಭಾವದ ದರ್ಶನವನ್ನು ತಂದುಕೊಡುತ್ತದೆ.

ಇಲ್ಲಿ ಷೇಕ್ಸ್‌ಪಿಯರಿಗೆ ಅವನ ಪದ್ಯದ ಒಳನೋಟಗಳು ಅವನಿಗೇ ಬೆರಗಾ ಕಾಣುವಂತೆ ; ದೇವನೂರ ಮಹಾದೇವನಿಗೆ ಈ ಗ್ರಹಿಕೆಗಳು ಬೆಕ್ಕಸಬೆರಗಾಗಿ ಕಾಣ ವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಮಹಾದೇವಗೆ **ಕುಸುಮ ಬಾಲೆ**ಯ ನನ್ನ ಕೆಲ ಒಳ ನೋಟಗಳು ಎಷ್ಟು ದಂಗು ಬಡಿಯುವಂತಾಗಿವೆಯೆಂದರೆ, ಅವನು "ಛೇ,ಎಲ್ಲಾದರೂ ಉಂಟೇ, ನನ್ನನ್ನು ಷೇಕ್ಸ್‌ಪಿಯರ್‌ಗೆ ಹೋಲಿಸುವಷ್ಟು ಅಸಂಬದ್ಧ ಮಾಡಿದ್ದಾರೆ" ಎಂದು ಕಂಡಲ್ಲೆಲ್ಲಾ ಹೇಳುತ್ತಾ, "ನನಗೇನೋ ಸಾರ್, ನೀವು ಹಾಗೆಲ್ಲಾ ಬರೆದರೆ ನಿಮ್ಮ **ಕ್ರೆಡಿಬಿಲಿಟಿ** ಹೋಗುತ್ತದೆ, ಹುಷಾರ್ !" ಎಂತಿದ್ದಾನೆ.

ಮಹಾದೇವನಂತಹವರು ಕುವೆಂಪು ಅವರ "ತಾ ಮಾಡಿದಾ ಕೃತಿಗೆ ತಾಂ ಮಹಾಕವಿ ಮಣಿವಂತೆ" ಎನ್ನುವ ಮಾತಿನ ಅರ್ಥ ಮಾಡಿಕೊಂಡಿದ್ದರೆ, ಅವರು ತಾವು ತಮ್ಮ ಕೃತಿಗಳನ್ನು ಸೃಷ್ಟಿಸಿದ ಸೃಷ್ಟಿಕರ್ತರೆಂದು ಬೀಗುತ್ತಿರಲಿಲ್ಲ. "ದ್ಯಾವನೂರ ಕತೆಗಳು" ಬರೆದ "ದ್ಯಾವನೂರ ಮಂದ"ರು "ದೇವನೂರು ಮಹಾದೇವ" ಎಂದು ಸಂಸ್ಕೃತೀಕರಣಗೊಂಡು ನನ್ನಂಥಾ ವಿಮರ್ಶಕರಿಗೆ ಸಂಸ್ಕೃತಿಯನ್ನು ಬೋಧಿಸುವ "**ಕ್ರೆಡಿಬಿಲಿಟಿ**"ಯ ಪಾಠ ಹೇಳಿಕೊಡುವ ಆಚಾರ್ಯರಾಗುತ್ತಿರಲಿಲ್ಲ !

ಇದೀಗ ನಮ್ಮ ವಿಮರ್ಶಾ ಲೋಕದ ವೈಚಿತ್ರ್ಯ : ಕೆಲವರಿಗೆ **ಕುಸುಮ ಬಾಲೆ** ಓದಲಾಗಿಲ್ಲ, ಕೆಲವರು ಓದಿದವರೂ ಅವರಿಗೆ ಅದರ ಗ್ರಹಿಕೆಯಾಗಿಲ್ಲ.

ಕುಸುಮ ಬಾಲೆಗೆ ಬ್ಲರ್ಬ್ ಬರೆದು,ಅಭಿಪ್ರಾಯಕೊಟ್ಟ ಜಿ. ಎಚ್. ನಾಯಕ್‌ರು ಹೀಗೆನ್ನುತ್ತಾರೆ "....ಕಾದಂಬರಿಯೊಳಗಿನ ವಿವರಗಳನ್ನು ಹಿಡಿದಿಡುವ ಕೇಂದ್ರ ಮೊದಲ ಓದಿಗೆ ಧಕ್ಕಲಿಲ್ಲ ಅಥವಾ ನಮ್ಮ ವಿಮರ್ಶೆಯ ಮಾನದಂಡಗಳನ್ನೇ ಮರು ಪರಿಶೀಲಿಸಬೇಕೋ ಏನೋ"

ಎಲಿಯೆಟ್‌ನು 'ವಿಮರ್ಶಕನ ಸತ್ವ ಪರೀಕ್ಷೆ, ಬರೀ ವಿಮರ್ಶೆ ಬರೆಯುವುದರಲ್ಲಿಲ್ಲ ; ಒಂದು ಹೊಸ ಕೃತಿಯನ್ನು ಕಂಡುಕೊಳ್ಳುವ ಚೈತನ್ಯದಲ್ಲಿದೆ' ಎನ್ನುತ್ತಾನೆ. ಜಿ. ಎಚ್. ನಾಯಕರಿಗೆ **ಕುಸುಮ ಬಾಲೆ** ;ಎಷ್ಟು ತಬ್ಬಿಬ್ಬುಗೊಳಿಸಿದೆಯೆಂದರೆ ಅವರು ತಮ್ಮ ಲಾಗಾಯಿತು ವಿಮರ್ಶೆಯ ದೃಷ್ಟಿಯನ್ನೇ ಬದಲಾಯಿಸಬೇಕೇನೋ ಎನ್ನುತ್ತಾರೆ.

ಜಿ. ಎಚ್. ನಾಯಕರಂತೆ ಅನೇಕರಿಗೆ ಒಂದು ಹೊಸ ಕೃತಿಗೆ ಮುಕ್ತವಾಗಿ ಬಿಚ್ಚಿಕೊಳ್ಳುವುದಕ್ಕಾಗಲಿಕ್ಕಿಲ್ಲ. ಆದರೆ ಅವರ ಹಾಗೆ ತಮಗೆ ಗೊತ್ತಾಗಿಲ್ಲವೆನ್ನುವುದನ್ನ ಅವರ ಹಾಗೆ ಹೇಳುವ ಒಂದು ಮಟ್ಟದ ಪ್ರಾಮಾಣಿಕತೆ ವಿಮರ್ಶಕನೆನಿಸಿಕೊಂಡವನಿಗೆ ಮೂಲಭೂತವಾಗಿ ಇರಬೇಕಾಗುತ್ತದೆ.

ಉದಾಹರಣೆಗೆ **ಚಂದ್ರಶೇಖರಪಾಟೀಲ** ಅವರಿಗೆ **ಕುಸುಮ ಬಾಲೆ** ಓದಲಾಗಿಲ್ಲ. ಬಂಡಾಯ ಸಾಹಿತ್ಯದ ಉಸಿರೇ ಆಗಿರುವ ಜನರ ಆಡು ಭಾಷೆ ಅವರಿಗೆ ಅರ್ಥವಾಗಿಲ್ಲ, ಅರ್ಥವಾಗಿಸಿಕೊಳ್ಳುವ ಜವಾಬ್ದಾರಿಯನ್ನು ಅವರು ತೋರಿಲ್ಲ. ಆದರೆ

ಅವರ ಬಗ್ಗೆ ಸಿಕ್ಕಾಪಟ್ಟೆ ಬಾಯಾಡಿದ್ದಾರೆ. ಮಹಾದೇವರ ಬಗ್ಗೆ ಸಲ್ಲದ ನಾನಾ ರಾಪಟೀಯುವ "ಚಂಪಾ ಮಾತು" ಆಡಿದ್ದಾರೆ. ಅವರು ತಮಗೆ ಗೊತ್ತಿಲ್ಲವೆಂದು ಸುಮ್ಮನಿರುವ ಮೂಲಭೂತ ಸಭ್ಯತೆ ತೋರಿಲ್ಲ. ದುರಂತ, ಚಂದ್ರಶೇಖರ ಪಾಟೀಲರಿಗೆ ಗೊತ್ತಿಲ್ಲವೆನ್ನುವುದಲ್ಲ – ಅವರಿಗೆ ಗೊತ್ತಿಲ್ಲವೆನ್ನುವುದು ಗೊತ್ತಿಲ್ಲವೆನ್ನುವುದು.

ನಮಗೆ ಗೊತ್ತಿಲ್ಲದವರಿಂದ ತೊಂದರೆಯಾಗುತ್ತದೆ, ನಿಜ : ಆದರೆ ಗೊತ್ತಿಲ್ಲವೆನ್ನುವುದು ಗೊತ್ತಿಲ್ಲದ ವಿದ್ಯಾವಂತ ಅನಕ್ಷರಿ (educated illiterate)ಗಳಿಂದ ಆಗುವ ತೊಂದರೆ ಅಪಾರವಾದದ್ದು, ಕೆಲವೊಮ್ಮೆ ಪ್ರಳಯಾಂತಕವಾದದ್ದು.

ಚಂದ್ರಶೇಖರ ಪಾಟೀಲರು ತಮ್ಮ ಕಾಲು ಶತಮಾನದ **ಸಂಕ್ರಮಣ**ದಲ್ಲಿ ವಿಮರ್ಶಕರಾಗಿ ಅವರು ಏನೂ ಆಗಿಲ್ಲವಾದರೂ, ಚಳುವಳಿಗಾರರಾಗಿ ಬಹಳಾ ಮುಖ್ಯರಾಗಿದ್ದಾರೆ. ವಿಮರ್ಶೆ ಅವರ ಜಾಯಮಾನವಲ್ಲ. ಅವರು ಈಗೀಗ ಗುರುತಿಸಿಕೊಂಡಿರುವಂತೆ ಅವರ "ಚಂಪಾ ಕಾಲಂ" ಎನ್ನುವ ಕಾಲಮಿಸ್ಟ್ ಎನಿಸಿಕೊಳ್ಳುವ ಜರ್ನಲಿಸ್ಟಿಕ್ ಬರೆತ, ಹಾಗೂ ನಾನು, '**ಸಂಸ್ಕೃತಿಯೋ, ಜಾನಪದವೋ**' ಎನ್ನುವ ಸಂಕ್ರಮಣ ಲೇಖನದಲ್ಲಿ ಪ್ರಸ್ತಾಪಿಸಿರುವ, ಸಂಕ್ರಮಣದಲ್ಲೇ ಮುಂಬರುವ **ಬಂಡಾಯ ಸಾಹಿತ್ಯ :ಅಸಲಿ ನಕಲಿ**ಯಲ್ಲಿ ಪ್ರಸ್ತಾಪಿಸಲಿರುವ ೧. ಪೌರೋಹಿತ್ಯದ ಪ್ರೀತಿಯ ೨. ವ್ಯಕ್ತಿತ್ವವನ್ನು ಹಿಂಗಿಸಿಕೊಂಡ ೩. ವಯಸ್ಸಾಗುತ್ತಿರುವ ಬರಹಗಾರನ ಬೃಹನ್ನಳಾವಸ್ಥೆಯನ್ನು ಪುಷ್ಟೀಕರಿಸುವ, ಅವರೇ ಇಟ್ಟುಕೊಂಡ "ಚಂಪಾ" ನಾಮಾಂಕಿತ —ಇವೀಗ ಅವರ ಜಾಯಮಾನ.

ನಮಗೆ ಬೇಕಾದ್ದು, **ಕುಸುಮಬಾಲೆ**ಯ ಬಗ್ಗೆ ಗಂಭೀರವಾದ ವಿಮರ್ಶೆ : ಚಂಪಾ ಬೃಹನ್ನಳೆಯರುಗಳ ಬಾಯಾಡಿಕೆಯಲ್ಲ, ಅವರು ಬರೆಯುತ್ತಿರುವ ಕಾಲಮಿಸ್ಟ್ ಕಾಲಮ್ಮಗಿರಿಯಲ್ಲ.

ಲಂಕೇಶ್ ಮತ್ತು ಬಂದಳಿಕೆಗಳು (4ನೇ ಪುಟದಿಂದ)

ಯೋಚಿಸಬೇಕಿದೆ. ವಿಮರ್ಶೆಯ ಜೊತೆಗೆ ಪುಸ್ತಕ ಸ್ವೀಕಾರ ಹಾಕುವ ಈ ತಂತ್ರ ಹತ್ತು ವರ್ಷಗಳ ನಂತರ ಲಂಕೇಶ್ ಯೋಚನೆಗೆ ಬಂದದ್ದು ಹಲವು ಸಾಹಿತಿಗಳನ್ನಾದರೂ ತಾನು ತಲುಪಬೇಕೆಂಬ ಆಸೆಯಿಂದಲೇ ಇರಬಹುದಾದರೂ, ಸ್ವೀಕಾರದ ಪುಸ್ತಕಗಳ ಪ್ರಕಾರವೇ ಬೇಜವಾಬ್ದಾರಿಯಿಂದ ಬರುತ್ತದೆ. ಒಂದು ಕೃತಿ ಒಬ್ಬನೇ ಬರೆದಿದ್ದರೂ ಬೇಕೆಂದೇ ಪ್ರಕಾಶಕ,ಸಹಾಯ ಎಲ್ಲರನ್ನೂ ಸೇರಿಸುವುದು, ನಾಟಕವನ್ನು ಕಾದಂಬರಿ ಪ್ರಕಾರಕ್ಕೆ, ಸಣ್ಣಕತೆಯನ್ನು ಕವಿತೆಗೆ ಇತ್ಯಾದಿ ಸೇರಿಸಿ ಗೊಂದಲ ಹುಟ್ಟಿಸಿ, ಪ್ರಕಾಶನದ ಸ್ಥಳವನ್ನೇ ಬಿಟ್ಟುಬಿಡುವ ಮರೆವು ಜಾಣತನ ತೋರಿಸುವುದನ್ನು ಕಾಣಬಹುದು.

ಲಂಕೇಶ್ ಸ್ವರತಿ ಬರಹದಿಂದ ಇಂದು ಒಂಟಿಯಾಗಿ ತನ್ನ ಆಲಾಪನೆಯನ್ನು ತನ್ನ "ಮಾಧ್ಯಮ"ದಲ್ಲಿ ತುತ್ತೂರಿಗೊಳಿಸಿಕೊಳ್ಳಲು ಹೊರಟಿರುವುದು ಮಾತ್ರ ಈಗ ಆತ ಪಾತಾಳಕ್ಕಿಳಿದಿರುವುದನ್ನು ಸ್ಪಷ್ಟವಾಗಿ ಗುರ್ತಿಸಬಹುದಾಗಿದೆ.

೧. ೨೯. ೪. ೧೯೯೧

—ಆರ್.ಜಿ. ಹಳ್ಳಿ ನಾಗರಾಜ್

ಬೆಂಗಳೂರು-೫೬೦ ೦೪೦.

ಸಾಹಿತ್ಯದಲ್ಲಿ ವಸ್ತು ಮತ್ತು ವಿನ್ಯಾಸದ ಸಮಸ್ಯೆ

—ಡಾ|| ಕೆ. ಕೇಶವಶರ್ಮ

1

ಸಾಹಿತ್ಯದಲ್ಲಿ ವಸ್ತು ಯಾವುದು ? ಅದು ಪಡೆದುಕೊಳ್ಳುವ ವಿನ್ಯಾಸವೇನು ? ಇವರ ಬಗ್ಗೆ ನಡೆದಿರುವ ಚರ್ಚೆಗೆ ದೊಡ್ಡ ಇತಿಹಾಸವೊಂದಿದೆ. ಬಹಳಷ್ಟು ಮಟ್ಟಿಗೆ ಈ ಚರ್ಚೆಯು ಸಾಹಿತ್ಯದ ಮೂಲ ಪ್ರಕ್ರಿಯೆಯನ್ನು ಅವಲಂಬಿಸಿಕೊಂಡಿರುವುದರಿಂದ ಕಾಲ–ಕಾಲಕ್ಕೆ ಇದರ ಬಗೆಗೆ ಬೇರೆ ಬೇರೆ ವ್ಯಾಖ್ಯಾನಗಳು ಸಿದ್ಧವಾಗಿವೆ. ಇಡಿಯ ಜಗತ್ತು ತನ್ನ ದೇಶದ ಮೂಲದನಿಗಳಿಗೆ ಅನುಸಾರವಾಗಿ ವಸ್ತು ಮತ್ತು ವಿನ್ಯಾಸವನ್ನು ಚರ್ಚೆಗೆ ಒಳಪಡಿಸಿದರೂ ಅನೇಕ ದೇಶಗಳ ಪರಂಪರೆಯ ಬೇರು ಎರಡನೆಯ ಮಹಾ ಯುದ್ಧದ ತರುವಾಯ ಛೇದಿಸಿ ಹೋಗಿದೆ. ಇದರ ಪರಿಣಾಮವಾಗಿ ಸದ್ಯದ ಸ್ಥಿತಿಯಲ್ಲಿ ಯಾವುದೇ ದೇಶದಲ್ಲಿ ನಡೆಯುತ್ತಿರುವ ಚರ್ಚೆಯು ಬಹಳ ಬೇಗನೆ ಇನ್ನೊಂದೆಡೆಗೆ ಹಸರಿಸಿಕೊಳ್ಳುತ್ತದೆ. ಪೂರ್ವದ ಜಗತ್ತು ಮತ್ತು ಪಶ್ಚಿಮದ ಜಗತ್ತು ಪ್ರತ್ಯೇಕವಾದ ಖಂಡಗಳಾಗಿ ಉಳಿದಿಲ್ಲ. ಹೀಗಾಗಿ ವೈಚಾರಿಕ ವಲಯವು ಒಂದು ಕೇಂದ್ರವನ್ನು ರೂಪಿಸಿಕೊಳ್ಳಲು ಪ್ರಯತ್ನಿಸುತ್ತಿರುವುದು ನಿಜವಾದರೂ, ಇನ್ನೊಂದು ಬದಿಯಿಂದ ವಸಾಹತು ಆಡಳಿತಕ್ಕೆ ಒಳಗಾದ ದೇಶಗಳು ಈಗ ಚರಿತ್ರೆಯ ಜೊತೆಗೆ ಅನನ್ಯತೆಯನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತವೆ.

ಪಶ್ಚಿಮದ ಜಗತ್ತಿನಲ್ಲಿ ಸಾಹಿತ್ಯಕ್ಕೂ ವಸ್ತುವಿಗೂ, ವಸ್ತುವಿಗೂ ವಿನ್ಯಾಸಕ್ಕೂ ಇರುವ ಸಂಬಂಧವನ್ನು ಚರ್ಚಿಸುವಾಗ ಸಾಹಿತ್ಯ ಮೀಮಾಂಸಾಕಾರರು ಅರಿಸ್ಟಾಟಲನ ವಾದಗಳನ್ನು ಲಕ್ಷಿಸುತ್ತಾರೆ. ಮತ್ತು ಅದನ್ನು ತಮ್ಮ ವಾದಗಳಿಗೆ ಅನುಸಾರವಾಗಿ ಮುಂದಿಡುತ್ತಾರೆ.

ಈಚೆಗೆ ಪೂರ್ವದ ಜಗತ್ತಿನಲ್ಲಿಯೂ ವಸ್ತುವಿನ ಕುರಿತಂತೆ ವಾಗ್ವಾದವನ್ನು ಈ ನೆಲೆಯಿಂದಲೇ ಪ್ರಾರಂಭಿಸಿರುವುದು ಗಮನಾರ್ಹ. ಅದರಲ್ಲಿ ಭಾರತೀಯ ಸನ್ನಿವೇಶದಲ್ಲಿ ವಸ್ತು ಮತ್ತು ವಿನ್ಯಾಸದ ಚರ್ಚೆಯನ್ನು ಭರತನ ಕೃತಿಯಲ್ಲಿಯೇ ಕಾಣಬಹುದು. ಕಾವ್ಯದ ಒಟ್ಟು ನೆಲೆಗಳು ಸಹೃದಯ ಹಿನ್ನೆಲೆಯಲ್ಲಿ ರೂಪಿತವಾಗಿದ್ದರೂ ಕಾವ್ಯದ ವಸ್ತು ವಿಶೇಷವಾಗಿ ಜಡ ಎನ್ನುವ ಗ್ರಹಿಕೆಯು ಬ್ರಿಟೀಶ್ ಪೂರ್ವದ ಭಾರತೀಯ ಚಿಂತನೆಯಲ್ಲಿದೆ. ಕ್ಷುದ್ರತೆಯು ಕಾವ್ಯದ ವಸ್ತುವಾಗಲಾರದು ಎಂದು ಭಾವಿಸುವ ಭಾರತೀಯ ಕಾವ್ಯಮೀಮಾಂಸೆಯು ಕಾವ್ಯದ ಆಂತರಿಕ ಸಂಗತಿಗಳು ಮುಖ್ಯ

ನೆಂದು ಭಾವಿಸಿದ ಹಾಗಿದೆ. ಅದರೆ, ಇಲ್ಲಿಗೆ ಬ್ರಿಟೀಷರು ಬಂದು ಹೋದ ಮೇಲೆ ನಮ್ಮ ಸಾಮಾಜಿಕ ಸಂರಚನೆಯ ಒಟ್ಟು ಕೇಂದ್ರವೇ ಒಡೆದುಹೋಯಿತು ತಾನೆ ? ನಮ್ಮ ಸಾಂಪ್ರದಾಯಿಕ, ನಿರ್ದಿಷ್ಟ ಕೇಂದ್ರ ಕ್ರಿಯಾಚಿಂತನಾಕ್ರಮವು ಒಡೆದು ಹೋದು ದರ ಪರಿಣಾಮವೇ ಈಗ ನಾವು ಇಂಗ್ಲೀಷ್ ಚಿಂತನೆಗಳನ್ನು ಆಶ್ರಯಿಸಬೇಕಾಗಿರು ವುದು. ಭಾರತೀಯ ಸಮಾಜಕ್ಕೆ ಇದ್ದ ಕೇಂದ್ರ ತಪ್ಪಿ ಹೋಗಿ ಲಂಡನ್ ಕೇಂದ್ರ ವಾದುದರ ಪರಿಣಾಮ ಕೇವಲ ಸಾಮಾನ್ಯವಾದುದಲ್ಲ. ಈ ಆಶ್ರಿತ ಪರಿಸ್ಥಿತಿಯ ನಾಲ್ಕು ಮುಖ್ಯ ಸಂಗತಿಗಳನ್ನು ನಮ್ಮ ಸಾಹಿತ್ಯ ಪ್ರಕ್ರಿಯೆಯ ಹಿನ್ನೆಲೆಯಲ್ಲಿ ಗ್ರಹಿಸ ಬೇಕಾಗಿದೆ. ವಸಾಹತುಶಾಹಿ ಮನಸ್ಸಿನ ಜೊತೆಗೆ ಬಂದ ಶಾಪದಲ್ಲಿರುವ ನಾಲ್ಕು ಪ್ರಸಕ್ತಿಗಳು ಹೀಗಿವೆ : ರಾಜಕಾರಣದ ಮುಖ, ಆರ್ಥಿಕ ಮುಖ, ತಾತ್ತ್ವಿಕ ಮುಖ ಮತ್ತು ಸಾಮಾಜಿಕ ಮುಖ. ಸಾಮಾಜಿಕ ಹೊರ ರಚನೆಯನ್ನು ವ್ಯಾಪಿಸಿಕೊಳ್ಳುವ ಸಂಗತಿಗಳು ಇವು ವಸಾಹತು ಪೂರ್ವದ ಸಮಾಜದಲ್ಲಿ ರಾಜಕೀಯ ಕೇಂದ್ರವಿದ್ದುದು ನಮ್ಮ ಪರಂಪರೆಯ ಅರಸೊತ್ತಿಗೆಯ ಕ್ರಮದಲ್ಲಿ ತಾನೆ ? ಇಲ್ಲಿಯ ರಾಜರು ಮಣ್ಣು ಮುಕ್ಕಿ ಹೋದಾಗ ಉಂಟಾದ ಮೊದಲ ಪರಿಸ್ಥಿತಿಯೆಂದರೆ ಸಾಮಾಜಿಕರಿಗೆ ಉದ್ಭವಿ ಸಿದ ಅಸ್ಥಿರತೆಯ ಭಯ. ಈ ಅಸ್ಥಿರತೆಯ ಭಯವೇ ಬ್ರಿಟಿಷ್ಯನ ರಾಣಿಯನ್ನು ಹೊಗಳುವಂತೆ ಮಾಡಿತು. ಈ ಕಾರಣದಿಂದಲೇ ರಾಜಕಾರಣದ ನಮೂನೆಯ ಅಲ್ಲಿಯ ಅನುಕರಣೆಯನ್ನು ಮಾಡುವಂತೆ ಪ್ರೇರಿಸಿತು. ಈಗಲೂ ಈ ಪರಿಸ್ಥಿತಿ ಯೇನೂ ಸುಧಾರಿಸಿಲ್ಲ. ನಮ್ಮ ಸಂವಿಧಾನದ ಸ್ವರೂಪವೇ ಬೇರೊಂದರ ಅನುಕರಣೆ ಯಿಂದ ಹುಟ್ಟಿಕೊಂಡವೇನೋ ? ಬ್ರಿಟೀಷರು ಇದ್ದಾಗ ಇದ್ದ (ಮೌಲಿಕ ಸ್ವರೂಪ) ಅನೇಕ ಕಾನೂನುಗಳು ನಮ್ಮ ಸಂವಿಧಾನದಲ್ಲಿವೆ. ಜಾಗತಿಕ ರಂಗದಲ್ಲಿ ನಡೆಯುವ ರಾಜಕೀಯ ಪ್ರಕ್ರಿಯೆಗಳಂತೂ ಈಗಿನ ಭಾರತೀಯ ಸಮಾಜದ ಮೇಲೆ ಪ್ರಭಾವ ವನ್ನು ಬೀರುತ್ತವೆ.

ಆರ್ಥಿಕ ಮುಖದ ಅನೇಕ ಸಂಗತಿಗಳು ಈಗಾಗಲೇ ನಮ್ಮ ಸಾಹಿತ್ಯ ವಿಮರ್ಶೆ ಯಲ್ಲಿ ಅನೇಕ ಬಾರಿ ಚರ್ಚೆಯಾಗಿವೆ. ಇಂಗ್ಲೆಂಡ್ ನಮ್ಮನ್ನು ಒಮ್ಮೆ ಹೀರಿ ಬಿಟ್ಟಿದೆ. ಈಗ ಅನ್ಯದೇಶಗಳ ಸಾಲದ ಹೊರೆ ನಮ್ಮ ಪ್ರತಿಯೊಬ್ಬನ ಜೀವನ ಕ್ರಮದ ಮೇಲೆ ಗಾಢವಾದ ಪರಿಣಾಮ ಬೀರುತ್ತಿದೆ. ನಮ್ಮ ದೇಶ ಆಯಾಸದಿಂದ ಏದುಸಿರು ಬಿಡುತ್ತಿರುವುದರ ಸ್ಪಷ್ಟತೆಯಂತೂ ಈಗ ನಮಗೆ ಗೊತ್ತಾಗುತ್ತಿದೆ. ಒಂದು ರೀತಿ ಯಲ್ಲಿ ಈ ರೀತಿಯ ಚಾರಿತ್ರಿಕ ಒತ್ತಡ ನಮ್ಮ ಕವಿತೆಗಳ ನಿಟ್ಟುಸಿರಲ್ಲಿ ಹೊರ ಹೊಮ್ಮುತ್ತಿದೆ.

ತಾತ್ತ್ವಿಕ ಮುಖವಂತೂ ಇದರಿಂದ ರೂಪುಗೊಂಡಿದೆ. ಈ ಮೇಲೆ ಸೂಚಿಸಿ ದಂತೆ ಅನುಕರಣೆಯ ತಾತ್ತ್ವಿಕತೆಯು ಈಗ ತನ್ನ ಸ್ವಂತ ನೆಲೆಯನ್ನು [illegible]

ಕೊಂಡು ಬಿಟ್ಟಿದೆ. ಅನುಕರಣೆಯು ಈಗ ಸಂದರ್ಭದಲ್ಲಿ ಪಶ್ಚಿಮದಿಂದ ಬಿಡುಗಡೆಯಾಗಲು ಯತ್ನಿಸುತ್ತಿದೆ. ಆದರೆ ಇದು ಚರಿತ್ರೆಯಲ್ಲಿ ಅರ್ಥವನ್ನು ಹುಡುಕಿಕೊಳ್ಳುತ್ತಿವೆಯೋ ಇಲ್ಲವೆ ಎಂದು ಹೇಳುವುದು ಕಷ್ಟ. ಈ ಮೂರು ಅಂಶಗಳಿಂದ ನಮ್ಮ ಸಾಮಾಜಿಕ ಮುಖವೊಂದು ಬಣ್ಣಗಟ್ಟಿಂತೆ ಇದೆ. ನಿಜವಾದ ಅರ್ಥದಲ್ಲಿ ಸಾಮಾಜಿಕ ಕೇಂದ್ರ, ಐಕ್ಯ ಮತ್ತು ಸಂವಾದ ಮೂರು ಕೂಡಾ ಬಿರುಕಿನ ಧ್ವನಿಯನ್ನು ಸೂಚಿಸುತ್ತಿದೆ. ಪ್ರಾಯಶಃ ಜಾತಿಯನ್ನು ಇಡಿಯ ಸಾಮಾಜಿಕ ಕೇಂದ್ರವೆಂದು ಭಾವಿಸುವವರು ಈ ಬಿರುಕಿನಿಂದಲೇ ಹೊರಡುತ್ತಾರೆ. ಇಲ್ಲಿನ ಸಂಸ್ಕೃತವನ್ನು ಕನ್ನಡವನ್ನು ನಿರಾಕರಿಸುತ್ತಾ ಇಂಗ್ಲೀಷನ್ನು ಒಪ್ಪುವವರ ಮನಸ್ಸು ಇಂಗ್ಲೀಷ್ ಸಂಸ್ಕೃತಿಯನ್ನು ಒಂದು ಕೇಂದ್ರವೆಂದು ಭಾವಿಸಿಬಿಡುತ್ತದೆ. ಹೀಗೆ ಅಂಟಿದ ನಂಟು ಎಲ್ಲಿ ಕೊನೆಯಾಗುತ್ತದೆ ಎಂದು ಯೋಚಿಸಬೇಕಾಗಿದೆ. ಪ್ರಭು ಸಂಸ್ಕೃತಿಯನ್ನು ಒಪ್ಪಿಕೊಂಡ ದೀನವಾದ ಭಾರತೀಯ ಮನಸ್ಸು ಒಡೆದ ಕನ್ನಡಿಯಲ್ಲಿ ಮುಖ ನೋಡಲು ಶುರುಮಾಡಿದ್ದೊಂದು ದುರಂತ. ಆದರೆ ಇದು ಈ ಸಾಂಸ್ಕೃತಿಕ ರಂಗದಲ್ಲಿ ನುಂಗಲಾರದ ತುತ್ತು. ಹಾಗೆಂದು ಉಗುಳುವಂತೆಯು ಇಲ್ಲ.

ಈ ಮೇಲಿನ ವಾದಗಳ ಮುಖಾಂತರ ಹೇಳಬಹುದಾದ್ದು ಮುಖ್ಯವಾದದಿಷ್ಟು:

1) ನಮ್ಮ ಸಾಮಾಜಿಕ ಸಂಸ್ಕೃತಿಯು ವಿವಿಧ ದೆಸೆಗಳಿಂದ ಅನೇಕ ರೂಪಾಂತರಗಳನ್ನು ಕಂಡುಕೊಳ್ಳುತ್ತಿದೆ.
2) ಭಾರತೀಯ ನಮೂನೆಯ ಸಾಮಾಜಿಕ ಸ್ವರೂಪ ಒಡೆದು ಹೋಗಿದೆ.
3) ಓದಿದ ಕೆಲವರು ಧರ್ಮದಲ್ಲಿ ಅರ್ಥವನ್ನು ಕಳಕೊಂಡಿದ್ದಾರೆ. ವಿಜ್ಞಾನವನ್ನು ಒಪ್ಪಿಕೊಳ್ಳಲಾಗಿಲ್ಲ. ಈ ದ್ವಂದ್ವ ನಮ್ಮನ್ನು ಕಾಡುತ್ತಿದೆ.
4) ಚರಿತ್ರೆಯ ಜೊತೆಗೆ ನಿಜವಾದ ಬೆಲೆಯಲಾಗದ ಆಮದು ತಾತ್ತ್ವಿಕತೆಯನ್ನು ಸ್ವೀಕರಿಸಿಕೊಂಡು ಒದ್ದಾಡುವ ಸ್ಥಿತಿಗೆ ತಲುಪಿದ್ದೇವೆ.
5) ಇಂಗ್ಲೀಷನ ಪ್ರಭು ಸಂಸ್ಕೃತಿ ಕೊಟ್ಟ ಬಳುವಳಿಯಿಂದಾಗಿ ಅಲ್ಲಿನ ಎಲ್ಲವನ್ನು ಸಂದರ್ಭ ಬಿಟ್ಟು ಸ್ವೀಕರಿಸುವ ಹಂತಕ್ಕೆ ತಲುಪಿದ್ದೇವೆ.[1]

ಈಗಾಗಲೇ ಸೂಚಿಸಲಾಗಿರುವ ಈ ಟಿಪ್ಪಣಿಗಳ ಆಧಾರದಲ್ಲಿ ಸಾಹಿತ್ಯದಲ್ಲಿ ವಸ್ತು ಮತ್ತು ವಿನ್ಯಾಸದ ಚರ್ಚೆಯನ್ನು ಪ್ರಾರಂಭಿಸಬಹುದು.

2

ಸಾಹಿತ್ಯ ವಸ್ತು ಯಾವುದು ? ತೀರಾ ಸರಳವಾದ ಅರ್ಥದಲ್ಲಿ ಎಲ್ಲವೂ ಸಾಹಿತ್ಯಕ್ಕೆ ವಸ್ತುವಾಗುತ್ತದೆ. ನಾಯಿಮರಿ, ಬೆಕ್ಕು, ಮರಗಿಡಬಳ್ಳಿ, ಗಂಡ–ಹೆಂಡತಿ, ಮಗು ಎಲ್ಲವನ್ನೂ ಸಾಹಿತ್ಯದಲ್ಲಿ ಕವಿಯು ವಸ್ತುವಾಗಿ ಬಳಸುತ್ತಾನೆ. ಹೀಗಾಗಿ, ಸಾಹಿತ್ಯದಲ್ಲಿ ಎಲ್ಲಾ ವಸ್ತುವೂ ಕವಿತೆಯ ಕಣ್ಣಿಗೆ ಮೂಲವಾಗುತ್ತದೆ. ವಾಸ್ತವವಾಗಿ

ಭಾರತೀಯ ಮುಖ್ಯ ಸಂಸ್ಕೃತಿಯು ಕಾವ್ಯದಲ್ಲಿ ಎಲ್ಲವೂ ವಸ್ತುವಾಗಲಾರದು ಎಂದು ಭಾವಿಸಿತ್ತು. ಸಾಂಪ್ರದಾಯಿಕ ಸೌಂದರ್ಯ ಶಾಸ್ತ್ರಜ್ಞರಿಗೆ ಕಾವ್ಯದ ವಸ್ತು ಸೌಂದರ್ಯದ ಆರಾಧನೆಗೆ ಸಂಬಂಧಿಸಿದ್ದು. ಮಲಿನವಾದದ್ದು ಕಾವ್ಯಕ್ಕೆ ಪ್ರವೇಶಿಸಿದರೆ ಅದು ಕೇವಲ ಕೇಡಿಗೆ, ವಿಕಾರಕ್ಕೆ ಪಾತ್ರ ಸೂಚನೆಯಾಗುತ್ತದೆ ಎಂದು ಭಾವಿಸಿದ ಸೌಂದರ್ಯ ಶಾಸ್ತ್ರಜ್ಞರಿಗೆ ವಸ್ತು ಆನಂದದ ಪ್ರತೀಕ ಮಾತ್ರ. ಭಾರತೀಯ ಮೂಲದ ಸೃಜನಶೀಲತೆಯು ಆನಂದದ ಮೂಲವಾದ್ದರಿಂದ ಸಹಜವಾಗಿಯೇ ಆನಂದವನ್ನು ಅಧ್ಯಾತ್ಮಿಕ ಅರ್ಥವಂತಿಕೆಯಲ್ಲಿ ಕಂಡುಕೊಳ್ಳುತ್ತದೆ. ಮೂಲತಃ ಪ್ರಾಚೀನ ಕವಿಗಳಿಗೆ ಲೌಕಿಕದ ಜಂಜಾಟಗಳು ವಿರಾಗಕ್ಕೆ ಹೇತುವಾದವುಗಳು ಮಾತ್ರ. ಬಹುಶಃ ಈ ತಿಳುವಳಿಕೆಯು ಬ್ರಿಟೀಶ್ ಪ್ರವೇಶಕ್ಕಿಂತ ಮೊದಲಿನ ಭಾರತೀಯ ಪರಿಸರದಲ್ಲಿ ಪ್ರಚಲಿತವಿದ್ದುದರಿಂದಲೇ ಕಾವ್ಯದ ವಸ್ತು, ಶಿಲ್ಪಕಲೆಯ ವಸ್ತು, ಕರಕುಶಲತೆಯ ವಸ್ತು ಎಲ್ಲದರಲ್ಲಿಯೂ ಆನಂದ ಮತ್ತು ಬ್ರಹ್ಮನ ನೆಲೆಯನ್ನು ಕಲಾವಿದರು ಕಂಡುಕೊಂಡಿದ್ದರೂ, ಬೇಲೂರಿನ ಶಿಲ್ಪಕಲೆಯು ಆನಂದದಿಂದ ಬ್ರಹ್ಮನ ಕಡೆಗೆ ನೋಡುತ್ತದೆ. ಕುಂಬಾರ ಗುಂಡಯ್ಯನ ಕವಿತೆಯಲ್ಲಿ ಮಡಿಕೆ ಮಾಡುತ್ತಾ ಗುಂಡಯ್ಯನು ಶಿವನ ಕಡೆಗೆ ನೋಡುತ್ತಾನೆ. ಇದನ್ನು ಸೂಚಿಸಲು ಕಾರಣವಿಷ್ಟೆ : ಭಾರತೀಯ ಮೂಲದಲ್ಲಿ ಸೃಜನಾತ್ಮಕ ಪ್ರಕ್ರಿಯೆಯು ವಸ್ತುವನ್ನು ಗ್ರಹಿಸುವಾಗಲೇ ಬ್ರಹತ್ವದ ದೃಷ್ಟಿಯನ್ನು ಪಡೆದುಕೊಂಡಿದೆ.[2] ಈ ಸಂದರ್ಭದಲ್ಲಿ ಇನ್ನೊಂದು ಅಂಶವನ್ನು ಉಲ್ಲೇಖಿಸಬಹುದು. ನವೋದಯದ ಹಿರಿಯ ಕವಿಯೊಬ್ಬರು ನವ್ಯ ಕವಿಗಳನ್ನು ಟೀಕಿಸುತ್ತಾ ಇವರೆಲ್ಲಾ ಗಟಾರದ ಹುಳಗಳನ್ನು ಕವಿತೆಯಲ್ಲಿ ಬರೆಯುತ್ತಿದ್ದಾರೆ. ಸೌಂದರ್ಯವನ್ನು ನೋಡುವ ದೃಷ್ಟಿಯೂ ಇವರಿಗಿಲ್ಲ ಎಂದು ಹೇಳಿದ್ದರು. ಹಾಗಿದ್ದರೂ ಇದು ಕೇವಲ ಸ್ಥೂಲ ವಿವರ ಮಾತ್ರ : ವಸ್ತುವನ್ನು ಗ್ರಹಿಸುವ ವಿಧಾನದಲ್ಲಿ ಭಾರತೀಯರು ಅದಕ್ಕೆ ಅಧ್ಯಾತ್ಮಿಕ, ಸೌಂದರ್ಯಾತ್ಮಕ ಆಯಾಮ ಕಲ್ಪಿಸಿದ್ದರಿಂದ ಸಹಜವಾಗಿಯೇ ಅದು ಕೆಳಗಿನಿಂದ ಮೇಲಕ್ಕೆ ಹೋಗುತ್ತದೆಯೆಂಬುದು ನಿಜ. ಆದರೆ, ಎಲ್ಲರೂ ವಸ್ತುವನ್ನು ಗ್ರಹಿಸುವಾಗ ಒಂದೇ ರೀತಿಯಲ್ಲಿ ಗ್ರಹಿಸಿದರೆಂದು ಇದರರ್ಥವಲ್ಲ, ವಸ್ತುವನ್ನು ಕೇವಲ ಭೌತಿಕದ ನೆಲೆಯಲ್ಲಿ ಮಾತ್ರ ಕಾಣಬೇಕೆಂಬ ಹಟಯೋಗವನ್ನು ತೊಟ್ಟ ಭೌತಿಕವಾದಿಗಳು ಕೊಳಕಲ್ಲಿಯೂ ಸುಖವನ್ನು ಕಂಡವರು. ಸಾಲ ಪಡೆದು ತುಪ್ಪವನ್ನು ಉಂಡವರು. ಆದರೆ ಈ ಭೌತಿಕವಾದಿಗಳ ಪ್ರಭಾವ ಮುಖ್ಯಸೆಲೆಯಾಗಿ ಅಥವಾ ಪ್ರವಾಹವಾಗಿ ಬಂದಿಲ್ಲ. ಇನ್ನೊಂದು ಅಂಶವೆಂದರೆ, ವಸ್ತುವನ್ನು ಅಧ್ಯಾತ್ಮಿಕವಾಗಿ, ವಿಶೇಷವಾಗಿ ಕಂಡ ಕವಿಗಳು ಒಂದೇ ಸಾಲಿನಲ್ಲಿ ಬಂದವರೂ ಅಲ್ಲ. ಅಂದರೆ : ಸರತಿಯ ಸಾಲಿನಲ್ಲಿ ನಿಂತುಕೊಂಡು ವಸ್ತುವನ್ನು ವೀಕ್ಷಿಸುವ ಪರಿಪಾಠವಿಲ್ಲ. ಚರಿತ್ರೆಯ ಒತ್ತಡವು ಈ ನೋಟಗಳ ಮೇಲೆ ಪ್ರಭಾವವನ್ನು ಬೀರಿದೆ. ಇದನ್ನು ಒಂದು ಉದಾಹರಣೆಯ ಮೂಲಕ ಸ್ಪಷ್ಟಪಡಿಸಬಹುದು : ಪಂಪನ ಆದಿಪುರಾಣ

ಕೃತಿಯಲ್ಲಿ "ಪ್ರೇಮ"ದ ವಸ್ತುವು ಭಾವಾವಳಿಯ ಅರ್ಥಾಂತರದ ಪ್ರತಿಕ್ರಿಯೆಯನ್ನು ಒಳಗೊಂಡಿದೆ. ಅಕ್ಕಮಹಾದೇವಿಯ ವಚನಗಳಲ್ಲಿ ಪ್ರೇಮವೆಂಬ ವಸ್ತುವು ಏಕ ಕೇಂದ್ರವಾಗಿರುವಂಥದ್ದು. ಕೆ. ಎಸ್. ನರಸಿಂಹಸ್ವಾಮಿಯವರು 'ಪ್ರೇಮ'ವನ್ನು ಕವಿತೆಯಲ್ಲಿ ಕಿತ್ತುವ ಬಗೆ ಬೇರೆ. ಚಾರಿತ್ರಿಕವಾಗಿ ಉಂಟಾದ ಬದಲಾವಣೆಯು ಈ ಕವಿಗಳ ಮನಸ್ಸಿನ ಮೇಲೆ ಪ್ರಭಾವವನ್ನು ಬೀರಿದೆ. ಇಷ್ಟೆಲ್ಲಕ್ಕೂ ಮನುಷ್ಯನ ಮನಸ್ಸು ಪ್ರತ್ಯೇಕವಾದ ಅವಸ್ಥೆಯಲ್ಲಿದ್ದದ್ದು ತಾನೆ ? ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳುವ ಸಾಮಾಜಿಕ, ಆರ್ಥಿಕ, ಚಾರಿತ್ರಿಕ ಆಯಾಮಗಳು ಮನಸ್ಸಿನ ಮೇಲೆ ಪ್ರಭಾವ ಬೀರುವುದರಿಂದ ಕಾಲಕ್ಕೆ ಅನುಗುಣವಾಗಿ ವಸ್ತುವನ್ನು ನೋಡುವ ಕ್ರಮವೂ ಬದಲಾಗುತ್ತದೆ. ಪಂಪನು ಪ್ರೇಮವನ್ನು ಉಲ್ಲೇಖಿಸುವ ಕ್ರಮಕ್ಕೂ ಕೆ. ಎಸ್. ನರಸಿಂಹಸ್ವಾಮಿಯವರು ಪ್ರೇಮವನ್ನು ಉಲ್ಲೇಖಿಸುವ ಕ್ರಮಕ್ಕೂ ವ್ಯತ್ಯಾಸ ಕಂಡುಬರುವುದು ಇಲ್ಲಿ. ಆದರೆ, ಈ ಎಲ್ಲಾ ಕವಿಗಳಲ್ಲಿ ಭಾರತೀಯ ಸಮಾಜದ ಮನೋಭಾವವೊಂದು ಕೆಲಸ ಮಾಡಿದೆ. ಈ ಮಾತುಗಳನ್ನು ಹೇಳಲು ಕಾರಣವಿಷ್ಟೆ : ಕವಿಗಳು ವಸ್ತುವನ್ನು ನೋಡುವಾಗಲೇ ಅದರ ಮೇಲೆ ಸಾಮಾಜಿಕ ಆಯಾಮವೊಂದು ಕೆಲಸ ಮಾಡುತ್ತದೆ. ಕವಿಯು ವಸ್ತುವನ್ನು ನೋಡುವ ಕ್ರಮವೇ ಕೇವಲ ವೈಯಕ್ತಿಕ ಅಲ್ಲ, ಅದರ ಬದಲು ಸಾಮಾಜಿಕ ನಿರುಕ್ತಿಯು ಅಲ್ಲಿರುತ್ತದೆ. ಇಲ್ಲಿ ಬರುವ ಪ್ರಶ್ನೆಯೆಂದರೆ ಕವಿಗಳು ನೋಡುವ ವಸ್ತು ಒಂದೇ ಅಥವಾ 'ವಸ್ತು'ವಿಗೂ ಚಲನಶೀಲತೆಯು ಇದೆಯೆ ? ಈ ಪ್ರಶ್ನೆಗೆ ಒಂದು ಉದಾಹರಣೆಯ ಮೂಲಕ ಉತ್ತರಿಸಬಹುದು. ಒಂದೇ ಕಾಲದ ಒಂದು ಮರವನ್ನು ಬೇರೆ ಬೇರೆ ಕವಿಗಳು ವರ್ಣಿಸಿದರೆ ಆಗ ವಸ್ತುವು ಚರವಲ್ಲ. ಆದರೆ ಬೇರೆ ಬೇರೆ ಕಾಲದ ಬೇರೆ ಬೇರೆ ಕವಿಗಳು ಬೇರೆ ಬೇರೆ ಹಿನ್ನೆಲೆಯಿಂದ ವರ್ಣಿಸಿದರೆ ವಸ್ತುವು ಚಲನಶೀಲತೆಯನ್ನು ಪಡೆದುಕೊಳ್ಳುತ್ತದೆ. ಕನ್ನಡ ಕಾವ್ಯಗಳಲ್ಲಿ ಪದೇ ಪದೇ ಬಳಕೆಯಾದ ಗಿಳಿಯ ವರ್ಣನೆಯನ್ನು ಇಲ್ಲಿ ಗಮನಿಸಬಹುದು. 'ಕಾದಂಬರಿ ಕಾವ್ಯ'ದಲ್ಲಿ ಬರುವ ಗಿಳಿಗೆ ಮಾತು ಬರುತ್ತದೆ. ಅಕ್ಕನ ವಚನದಲ್ಲಿ ಬರುವ ಗಿಳಿಗೆ ಮಾತಿಲ್ಲ. ಹೀಗೆ ಜಗತ್ತಿನ ಪ್ರತಿಯೊಂದು ವಸ್ತುವು ಕೂಡ ಚಲನಶೀಲತೆಯನ್ನು ಪಡೆದುಕೊಳ್ಳುತ್ತದೆಯೆಂಬ ಮಾತೊಂದಿದೆ. ಚಿರಸಂಸ್ಥೆಗಳಲ್ಲಿ ಒಂದಾದ ಕುಟುಂಬವೂ ಕೂಡಾ ಬೇರೆ ಬೇರೆ ಸಂದರ್ಭಕ್ಕೆ ಅನುಸಾರವಾಗಿ ಬದಲಾಗುತ್ತದೆ. ಸಾಹಿತ್ಯಚರಿತ್ರೆಯಲ್ಲಿ ಕುಟುಂಬ ಸ್ವರೂಪದ ವಸ್ತುವು ಬದಲಾದುದನ್ನು ನಾವು ಕಾಣುತ್ತೇವೆ.

ಸಾಮಾಜಿಕ ವಸ್ತುವಿಗೂ ಸಾಹಿತ್ಯ ವಸ್ತುವಿಗೂ ಇರುವ ವ್ಯತ್ಯಾಸವೇನು ? ಸಾಮಾಜಿಕ ವಸ್ತುವು ಸಾಹಿತ್ಯ ವಸ್ತುವಾಗಿ ಮಾರ್ಪಾಡು ಹೊಂದುವಾಗ ವಿಶಿಷ್ಟ ರೂಪವನ್ನು ಧರಿಸುತ್ತದೆ. ಕವಿಯು ವೈಯಕ್ತಿಕ ಸಾಮಾಜಿಕ ಅನುಭವದ ಹಿನ್ನೆಲೆಯಿಂದ ಬರಹದಲ್ಲಿ ಹೊರರೂಪದ ವಸ್ತುವು ಒಳರೂಪಕ್ಕೆ ಪ್ರವೇಶಿಸುತ್ತದೆ. ನಿರ್ದಿಷ್ಟ

ಸಾಮಾಜಿಕ ಸಂರಚನೆಯ ಸ್ವರೂಪದಿಂದ ಹುಟ್ಟುವ ಸಾಹಿತ್ಯ ವಿನ್ಯಾಸವು ಹೊರಗಿನ ರೂಪದಿಂದ ಒಳರೂಪಕ್ಕೆ ಪರಿವರ್ತಿತವಾಗುತ್ತದೆ, ಇದಕ್ಕೊಂದು ಉದಾಹರಣೆಯನ್ನು ಕೊಟ್ಟು ಮುಂದುವರಿಯಬಹುದು :

"ನಾವು ದುಡಿಯುವ ಜನ
ನಮ್ಮ ಅಧಿಕಾರ ಬಂದಾಗ
ಪೋಲಿಸರನ್ನು ನ್ಯಾಯಾಧೀಶರನ್ನು
ಮನುಷ್ಯರನ್ನಾಗಿ ಮಾಡುತ್ತೇವೆ

(ಪ್ರಣಾಳಿಕೆ–ರಮಜಾನ ದರ್ಗಾ)

ಸಾಮಾಜಿಕ ಸಂರಚನೆಯ ಹಿನ್ನೆಲೆಯಲ್ಲಿರುವ ಹೊರ ರೂಪದ ವಸ್ತು ಹೀಗಿದೆ: ಈ ದೇಶದಲ್ಲಿ ದುಡಿಯುವ ಜನಕ್ಕೆ ಅಧಿಕಾರವಿಲ್ಲ. ಪೋಲಿಸರ ದೌರ್ಜನ್ಯ ಹೆಚ್ಚುತ್ತಿದೆ. ನ್ಯಾಯಾಧೀಶರು ಬಂಡವಾಳಶಾಹಿಗಳ ಕೈಯೊಳಗೆ ಇದ್ದಾರೆ. "ಇದೇ ವಸ್ತು ಕವಿತೆಯೊಳಕ್ಕೆ ಪ್ರವೇಶಿಸಿದಾಗ ಮೇಲಿನ ಕವಿತೆಯ ವಸ್ತು ದೊರೆಯುತ್ತದೆ. ಸಾಮಾಜಿಕ ಬದಲಾವಣೆಯ ಆಸೆಯು ಕವಿತೆಗೆ ದನಿ ಕೊಡುತ್ತದೆ.

ವಸ್ತುವನ್ನು ನೋಡುವ ಕ್ರಮವೇ ಬರಹಗಾರನ ತಾತ್ವಿಕತೆಯನ್ನು ಸೂಚಿಸುತ್ತದೆಯೆನ್ನುವ ಮಾತೊಂದಿದೆಯಲ್ಲವೆ? ಇಬ್ಬರು ಕವಿಗಳ ಕವಿತೆಗಳನ್ನು ಕೈಗೆತ್ತಿಕೊಂಡು ಈ ಚರ್ಚೆಯನ್ನು ಮಾಡಬಹುದು : ಬೇಂದ್ರೆಯವರ ಕವಿತೆಗಳಲ್ಲಿ ಬರುವ ಪ್ರೇಮದ ಪರಿಕಲ್ಪನೆಯು ಭಾರತೀಯ ಕುಟುಂಬದ ಸಕ್ರಮಗಳಿಂದ ಪ್ರೇರಿತವಾದುದು. ಇದರಿಂದಾಗಿ ಬೇಂದ್ರೆಯವರ ಕವಿತೆಗಳಲ್ಲಿ ಬರುವ ಪ್ರೇಮವು ತ್ಯಾಗದ ಗಂಡು ಹೆಣ್ಣಿನ ನೈತಿಕ ಅಸ್ತಿತ್ವಿಕ ಸ್ವರೂಪಗಳಿಂದ ಉದ್ಭೂತವಾಗಿದೆ. ಆದರೆ ಪ್ರೇಮವನ್ನು ಬದಲಾವಣೆಯ ಸ್ವರೂಪದಲ್ಲಿ ಸಿದ್ಧಲಿಂಗಯ್ಯ ಕಂಡುಕೊಳ್ಳುತ್ತಾರೆ. ಇಲ್ಲಿ ಸೂಚಿಸಬಹುದಾದ ಅಂಶವೆಂದರೆ ಹೊರ ರೂಪದ ವಸ್ತುವಿನ ಮೇಲೆ ಹೇಗೆ ಸಾಮಾಜಿಕ ಆರ್ಥಿಕ ಪರಿಸರದ ಪ್ರಭಾವ ಇರುತ್ತದೋ ಅದೇ ರೀತಿಯಲ್ಲಿ ಬರಹಗಾರನ ಮೇಲೆಯೂ ಸಾಮಾಜಿಕ ಆರ್ಥಿಕ ಸಂಗತಿಗಳ ಪ್ರಭಾವ ಇರುತ್ತದೆ. ತನ್ನ ಕಾಲದ ತನ್ನ ಮನಸ್ಸಿನ ಹಿನ್ನೆಲೆಯಿಂದ ಬರಹಗಾರನು ವಸ್ತುವನ್ನು ನೋಡುವಾಗಲೇ ಅದಕ್ಕೆ ತನ್ನ ಕೃತಿಯಲ್ಲಿ ಯಾವ ಆಕಾರವನ್ನು ಕೊಡಬಹುದು ಎಂದು ಯೋಚಿಸುತ್ತಾನೆ. ಸಾಹಿತ್ಯ ಕೃತಿಯಲ್ಲಿ ವಸ್ತುವಿಗೆ ಆಕಾರ ಕೊಡುವುದೆಂದರೆ ಭಾಷೆಯ ಜೊತೆಗೆ ಒಪ್ಪಂದ. ಸಂಗೀತದಲ್ಲಿ ಧ್ವನಿ, ಚಿತ್ರದಲ್ಲಿ ಬಣ್ಣ, ಶಿಲ್ಪ ಕಲೆಯಲ್ಲಿ ಕೆತ್ತನೆಯು ಅಭಿವ್ಯಕ್ತಿಯ ಮೂಲಧಾತು ಇರುವ ಹಾಗೆ ಸಾಹಿತ್ಯದಲ್ಲಿ ಭಾಷೆಯು ಇರುತ್ತದೆ. ಈ ಭಾಷಿಕ ನೆಲೆಯಿಂದಲೇ ಕೃತಿ ಸಂಯೋಜನೆಯ ಕೆಲಸವು ನಡೆಯುತ್ತದೆ. ಇಲ್ಲಿಂದಲೆ ಒಂದು ದೊಡ್ಡ ಸಮಸ್ಯೆಯು ಎದುರಾಗುತ್ತದೆ: ಪ್ರಾಯೋಗಿಕ ವಿಮರ್ಶಕರು ಭಾಷೆಯ ಚರ್ಚೆಯನ್ನು

ಮಾಡುತ್ತಾರೆ. ಸಾಹಿತ್ಯ ಕೃತಿಯ ವಿವೇಚನೆಗೆ ಶೈಲಿಶಾಸ್ತ್ರಜ್ಞರು ಕೂಡಾ ಭಾಷೆಯನ್ನು ಮೂಲ ಆಕಾರವಾಗಿ ಇಟ್ಟುಕೊಳ್ಳುತ್ತಾರೆ. ನಿರಚನ ಸಿದ್ಧಾಂತಿಗಳಿಗೂ ಭಾಷೆಯು ಗ್ರಾಸವನ್ನು ಒದಗಿಸುತ್ತದೆ. ಆದರೆ, ಇವರೆಲ್ಲರ ಚರ್ಚೆಯು ಬೇರೆ ಬೇರೆ ನೆಲೆಗಳಿಂದ ಬಲೆಗಳನ್ನು ಒಡ್ಡುತ್ತವೆ. ಪ್ರಾಯೋಗಿಕ ವಿಮರ್ಶಕರು ಮತ್ತು ರೂಪನಿಷ್ಠರು ಭಾಷಿಕ ವಿವರಗಳನ್ನು ಗಮನಿಸುತ್ತಾರೆ. ಇವರಿಗೆ ಭಾಷೆಯೆಂದರೆ ವಿನ್ಯಾಸದೊಳಗಿನ ಅಂತಿಮ ತೀರ್ಮಾನ. ಹಾಗೆಯೇ ಭಾಷೆಯ ಕಸುಬುಗಾರಿಕೆಯನ್ನು ಅವರು ಕಂಡುಕೊಳ್ಳುವುದು ಭಾವನಾತ್ಮಕ ವಲಯದಲ್ಲಿ. ಪ್ರಾಯೋಗಿಕ ವಿಮರ್ಶಕರು ಕವಿತೆಯಲ್ಲಿ ಭಾಷೆಯು ವ್ಯವಹಾರದ ಭಾಷೆಯಲ್ಲವೆಂದು ತಿಳಿದು ಬಿಡುತ್ತಾರೆ. ಹೀಗಾಗಿ ಪ್ರಾಯೋಗಿಕ ವಿಮರ್ಶೆಯಲ್ಲಿ ಭಾಷೆಯು ನಿಘಂಟಿನ ಅರ್ಥಗಳನ್ನು ಒಳಗೊಳ್ಳುತ್ತದೆ. ಸಾಂಪ್ರದಾಯಿಕ ಶೈಲಿಶಾಸ್ತ್ರಜ್ಞನರು ಭಾಷೆಯ ಸಂಯೋಜನೆಯನ್ನು ಅಲಂಕಾರದ, ಲಯದ ಹಿನ್ನೆಲೆಯಲ್ಲಿ ಕಂಡುಕೊಳ್ಳುತ್ತಾರೆ. ಇವುಗಳಲ್ಲಿಯೇ ಇನ್ನೊಂದು ಅತಿಯಾಗಿ ಹೊರಡುವ ನಿರಚನ ಸಿದ್ಧಾಂತಿಗಳು ಕೂಡಾ ಚರ್ಚೆಗೆ ಭಾಷೆಯನ್ನು ಅರ್ಥವಂತಿಕೆಯ ಹಿನ್ನೆಲೆಯಲ್ಲಿ ಕಂಡುಕೊಳ್ಳುತ್ತಾರೆ. ಅರ್ಥಕ್ಕಿಂತ ಅರ್ಥವಂತಿಕೆಯು ಮುಖ್ಯವೆಂದು ಭಾವಿಸುವ ನಿರಚನ ಸಿದ್ಧಾಂತಿಗಳು ಓದುಗನ ಗ್ರಹಿಕೆಯ ಹಿನ್ನೆಲೆಯಲ್ಲಿ ಭಾಷೆಯ ಚರ್ಚೆಯೆತ್ತುತ್ತಾರೆ. ಮೊದಲನೆಯದು ಅತಿ ತಾಂತ್ರಿಕ ಸ್ವಭಾವದಿಂದ ಹುಟ್ಟಿರುವ ಚರ್ಚೆಯಾದರೆ, ಎರಡನೆಯದು ಕಾವ್ಯ ಕಲೆಗಾರಿಕೆಯ ಕಡೆಗೆ ಒತ್ತುಕೊಡುತ್ತದೆ. ಮೂರನೆಯದು ಅತಿ ಅರಾಜಕತೆಯ ಸ್ವಭಾವದಿಂದ ಹುಟ್ಟಿರುವಂಥದ್ದು. ಮೊದಲು ಉಲ್ಲೇಖಿಸಲಾದ ಭಾಷೆಗೂ ವಸ್ತುವಿಗೂ ಇರುವ ಸಂಬಂಧಕ್ಕೆ ಒಂದು ನಿರ್ಣಾಯಕ ಹಂತವಿದೆ ಎಂದು ಹೇಳುವುದಕ್ಕೆ ಈ ಮಾತನ್ನು ಹೇಳಲಾಯಿತು. ಚರಿತ್ರೆಗೂ ಭಾಷೆಗೂ ಸಂಬಂಧವಿದೆ ತಾನೆ ? ಸಾಹಿತ್ಯ ಕೃತಿಯಲ್ಲಿ ಬರುವ ಭಾಷೆಯು ಕೂಡಾ ಪ್ರತ್ಯೇಕಿತ ಜಗತ್ತಿನ ಪ್ರತೀಕವಲ್ಲ. ಬರೆದ ತಕ್ಷಣವೇ ಕವಿತೆಯಲ್ಲಿ ಬರುವ ಭಾಷಿಕ ಸ್ವರೂಪವು ಹೊಕ್ಕುಳಬಳ್ಳಿಯನ್ನು ಕಳಚಿಕೊಂಡಿರುವುದಿಲ್ಲ.[5] ಹೀಗಾಗಿ ಕೃತಿಯಲ್ಲಿ ಬರುವ ಭಾಷೆಗೂ ಕೃತಿಕಾರನ ಮನಸ್ಸಿಗೂ ಸಂಬಂಧ ಇರುತ್ತದೆ. ಕೃತಿಕಾರನ ಮನಸ್ಸಿಗೂ ಹೊರ ವಸ್ತುವಿಗೂ ಇರುವ ಸಂಬಂಧದ ದೆಸೆಯಿಂದ ಕೃತಿಯಲ್ಲಿ ಭಾಷೆಯ ರೂಪವು ಆಕಾರಪಡೆಯುತ್ತಾ, ಭಾಷಿಕ ವಲಯದ ಮುಖಾಂತರ ಕೃತಿಯಲ್ಲಿ ವಸ್ತುವನ್ನು ಕೆತ್ತಿ ನಿಲ್ಲಿಸುತ್ತದೆ.

ಕೃತಿಕಾರನು ಭಾಷೆಯ ಮುಖಾಂತರ ವಸ್ತುವಿನ ವಿವರವನ್ನು ಕೆತ್ತುವಾಗ ಸಹಜವಾಗಿ ಕೃತಿಕಾರನ ಸಾಮಾಜಿಕ ಸಂದರ್ಭವು ಕೆಲಸ ಮಾಡುತ್ತದೆ. ಹೀಗಾಗಿ ಕೃತಿಯ ಭಾಷೆಯು ತೀರಾ ಪ್ರತ್ಯೇಕವಾದುದೇನಲ್ಲ. ಕೃತಿಕಾರನ ಅಭಿವ್ಯಕ್ತಿಯ ಸ್ವರೂಪವಾದ ಭಾಷೆಯು ಹೊರರೂಪದ ವಸ್ತುವಿಗೆ ಒಂದು ಪ್ರತಿಕ್ರಿಯೆ ಅಷ್ಟೆ.

ಸೂಚಕನಾಗಿ ಕೆಲಸ ನಿರ್ವಹಿಸುವ ಬರಹಗಾರ ತನ್ನ ಸೂಚನೆಗಳನ್ನು ಬರಹದ ಮುಖಾಂತರ ಸೂಚಿಕ ವರ್ಗ (ಓದುಗ ವರ್ಗ)ಕ್ಕೆ ಕೊಡುವಾಗ ತನ್ನ ತಾತ್ತ್ವಿಕ ಸಂಗತಿಗಳನ್ನು ಸೂಚನೆಗಳಲ್ಲಿ ಮಿಶ್ರಣ ಮಾಡುತ್ತಾನೆ. ಒಂದು ನಿರ್ದಿಷ್ಟ ಕಾಲಕ್ಕೆ ಕವಿ (ಸೂಚಕ) ಕಾವ್ಯದ ಮುಖಾಂತರ ಅದೇ ನಿರ್ದಿಷ್ಟ ಕಾಲಕ್ಕೆ ಸೇರಿದ ಓದುಗ ವರ್ಗಕ್ಕೆ ತಲುಪುವುದು ಒಂದು ಬಗೆ. ಆದರೆ ಅದೇ ಕವಿತೆ ತನ್ನ ಕಾಲದ ಚೌಕಟ್ಟನ್ನು ಮೀರಿ ನಡೆದಾಗ ಕವಿತೆಯು ನಿರ್ಮಿಸುವ ಸಂವಾದವು ಬೇರೆ ಬಗೆ. ಹೀಗಾಗಿ ಕೃತಿಕಾರನು ಭಾಷೆಯನ್ನು ಬಳಸುವ ಕ್ರಮವೇ ಕೃತಿಕಾರನಿಗೂ ಹೊರವಸ್ತುವಿಗೂ ಇರುವ ಸಂಬಂಧವನ್ನು ಸೂಚಿಸುತ್ತದೆ. ವಸ್ತುವನ್ನು ಕೃತಿಕಾರನು ಕೃತಿಯಲ್ಲಿ ಹೇಗೆ ನಿರೂಪಿಸುತ್ತಾನೆ ಎನ್ನುವುದನ್ನು ಭಾಷೆಯು ಸೂಚಿಸುತ್ತದೆ. ಭಾಷೆಯು ಮುಖಾಂತರ ಸಾಹಿತ್ಯದ ಕ್ಷೇತ್ರಕ್ಕೆ ವರ್ಗಾಂತರ ಹೊಂದುವ ವಸ್ತುವು ಪ್ರತ್ಯೇಕವಾದ ಸ್ಥಾನವನ್ನು ಪಡೆದುಕೊಳ್ಳುವ ಪ್ರಮೇಯವನ್ನು ಒಡ್ಡುತ್ತದೆ. 'ಸಾಹಿತ್ಯ ಎನ್ನುವುದು ಒಂದು ವಸ್ತುವಿನ ಕಲಾತ್ಮಕ ಅನುಭವ ಮಾತ್ರ' ಹಾಗಾಗಿ ಸಾಹಿತ್ಯ ಕೃತಿಯಲ್ಲಿ ವಸ್ತುವು ಮುಖ್ಯ ಅಲ್ಲವೇ ಅಲ್ಲ ಎಂದು ವಸ್ತುವನ್ನು ಸಾಹಿತ್ಯ ಚರ್ಚೆಯಲ್ಲಿ ತಿರಸ್ಕರಿಸುವ ಶ್ಕ್ಲೋವಸ್ಕಿಯ ಮಾತು ಇಲ್ಲಿ ಗಮನಾರ್ಹ. (Viktor shklovsky 1917.)[6] ಸಾಹಿತ್ಯದ ಅನುಭವವಾಗಿ ವಸ್ತುವಿಗೆ ಪ್ರತ್ಯೇಕವಾದ ಅಸ್ತಿತ್ವವೊಂದಿಲ್ಲ. ಅದು ಹೊಂದಾಣಿಕೆ ಮಾಡಿಕೊಳ್ಳುತ್ತದೆ ಎನ್ನುವುದು ನಿಜ. ವಸ್ತುವಿನ ದಾಸ್ತಾನು ಕೋಣೆಯೇ ರೂಪವೆಂದು ಭಾವಿಸುವ ವಿಮರ್ಶಕರು ಸಾಹಿತ್ಯ ಕೃತಿಯಲ್ಲಿ ವಸ್ತುವಿಗೆ ಪ್ರತ್ಯೇಕವಾದ ಸ್ಥಾನವನ್ನು ಕಲ್ಪಿಸಿಕೊಡುತ್ತಾರೆ.

ವಸ್ತು ಹೀಗೆ ವರ್ಗಾಂತರವಾಗುವ ಹೊತ್ತಿಗೆ ಸಾಹಿತ್ಯದಲ್ಲಿ ಅದಕ್ಕೊಂದು ವಿನ್ಯಾಸವು ಬರುತ್ತದೆ.

ಈಚಿನ ದಿನಗಳಲ್ಲಿ ವಿನ್ಯಾಸದ ಚರ್ಚೆಯು ಕೇವಲ ಒಂದು ಭಾವನಾತ್ಮಕವಾದ ಪ್ರತಿಕ್ರಿಯೆಯಲ್ಲ. ಮಾನವಶಾಸ್ತ್ರ, ಭಾಷಾಶಾಸ್ತ್ರ, ಸಾಹಿತ್ಯ ವಿಮರ್ಶೆಗಳಲ್ಲಿ ವಿನ್ಯಾಸದ ಚರ್ಚೆಯು ವಿಶೇಷವಾಗಿ ನಡೆದಿದೆ. ವಿನ್ಯಾಸವನ್ನು ಚರ್ಚೆಯನ್ನು 'ಹೊಸ ವಿಜ್ಞಾನ'ವೆಂದು ಕರೆದ ಆಲ್ತೂಸರ್ ಸಾಮಾಜಿಕ ಐಕ್ಯತೆಯ ಪ್ರತೀಕವಾದ ವಿನ್ಯಾಸದಲ್ಲಿ ಆರ್ಥಿಕ ರಾಜಕೀಯ, ತಾತ್ತ್ವಿಕ, ವೈಜ್ಞಾನಿಕ ಅಂಶಗಳು ಅಂತಸ್ಥವಾಗಿರುತ್ತದೆ ಎಂದು ಪ್ರತಿಪಾದಿಸಿದ (Althusser 1969, 1970) ಸಾಹಿತ್ಯದ ಸಂದರ್ಭದಲ್ಲಿಯೂ ಈ ಅಂಶವು ನಮಗೆ ಸ್ಪಷ್ಟವಾಗಿ ತಿಳಿಯುತ್ತದೆ. ಉತ್ಪಾದನಾ ಸಂಬಂಧಗಳು ಬದಲಾವಣೆಯಾದಾಗ ಬರಹಗಾರನ ಪ್ರಜ್ಞೆಯಲ್ಲಿಯೂ ಬದಲಾವಣೆಯು ಕಾಣಿಸಿಕೊಳ್ಳುತ್ತದೆ. ಆಲೋಚನೆಗಳು ಹೊಸದಾಗಿ ಹುಟ್ಟಿಕೊಳ್ಳುತ್ತವೆ. ಹೊಸ ಆಲೋಚನೆಯಲ್ಲಿ ಕೃತಿಯು ರೂಪತಳೆಯುತ್ತದೆ. ಹೀಗಾಗಿ ಹೊಸ ವಿನ್ಯಾಸವು

ಹಳೆಯ ವಿನ್ಯಾಸವನ್ನು ಭಂಜನಗೊಳಿಸುತ್ತದೆ. ಸಾಹಿತ್ಯದಲ್ಲಿ ಹಳೆಯ ವಿನ್ಯಾಸವು ಅರ್ಥಹೀನವಾಗಿ ಹೊಸ ವಿನ್ಯಾಸವು ಹುಟ್ಟಿಕೊಳ್ಳುವುದು ಹೊಸ ಪ್ರಜ್ಞೆಯ, ಆಲೋಚನಾ ಕ್ರಮದ ಪ್ರತೀಕವಾಗಿ. ಇಲ್ಲಿ ಹಳೆಯದರ ನಿರಾಕರಣೆ ಮತ್ತು ಹೊಸದರ ಸ್ಥಾಪನೆಯ ಅಂಶಗಳಿರುತ್ತವೆ. ಹೊಸದರ ಸ್ಥಾಪನೆಯು ಸಾಹಿತ್ಯದಲ್ಲಿ ಆದರ್ಶೀಕೃತ ಪ್ರತಿಕ್ರಿಯೆಗಳಲ್ಲಿ ಒಂದಂಶ. ವಾಸ್ತವವಾಗಿ ಸಾಹಿತ್ಯದ ಪ್ರಕ್ರಿಯೆ ಆದರ್ಶವಾದುದು ತಾನೆ ? ಈ ಮಾತನ್ನು ವಿವರಿಸುವುದಾದರೆ ಬಂಡಾಯದ ಕಾವ್ಯವು ಹುಟ್ಟಿಕೊಂಡದ್ದು ನವ್ಯದ ನಿರಾಕರಣೆಯಲ್ಲ, ಇದರಿಂದಾಗ ಹೊಸ ವಿನ್ಯಾಸವು ಬಂಡಾಯದ ಚಳುವಳಿಯ ಸಂದರ್ಭದಲ್ಲಿ ಕೆಲ ಕವಿಗಳಲ್ಲಾದರೂ ಕಾಣಬಹುದು. ಸಿದ್ಧಲಿಂಗಯ್ಯ ಅವರ ಕಥನ ಕಾವ್ಯಗಳು, ಬರಗೂರರ ಕಥನ ಕಾವ್ಯಗಳು ಹಳೆಯ ನವ್ಯ ಕಾವ್ಯದ ನಮೂನೆಗಳನ್ನು ತಿರಸ್ಕರಿಸುವುದು ಕೇವಲ ಭಾವುಕತೆಯ ದೆಸೆಯಿಂದಲ್ಲ. ಇವರು ವಸ್ತುವನ್ನು ನೋಡುವ ಕ್ರಮದಲ್ಲಿಯೇ ಉಂಟಾದ ಬದಲಾವಣೆಯ ದೆಸೆಯಿಂದಲಲ್ಲಿ.

ಸಾಹಿತ್ಯದ ವಸ್ತು ಮತ್ತು ವಿನ್ಯಾಸವನ್ನು ಸಾಹಿತ್ಯದ ಪಠ್ಯದ ಮೂಲಕ ಗ್ರಹಿಸುವ ವಿಧಾನ ಒಂದು ಬಗೆಯಾದರೆ, ಸಾಂಸ್ಕೃತಿಕ ಅನನ್ಯತೆಯ ಹಿನ್ನೆಲೆಯಲ್ಲಿ ಗ್ರಹಿಸುವುದು ಇನ್ನೊಂದು ಬಗೆ. ಸಾಹಿತ್ಯದ ವಸ್ತು ಮತ್ತು ವಿನ್ಯಾಸವನ್ನು ಸಾಹಿತ್ಯದ ಪಠ್ಯದ ಮೂಲಕ ಗ್ರಹಿಸುವ ವಿಧಾನದಲ್ಲಿ ಕೊಡು ಹುಬ್ಬಿಸ ಓದು ಸಂಪ್ರಾಪ್ತವಾಗುತ್ತದೆ. ಈ ರೀತಿಯ ಓದಿನ ಕ್ರಮ ಸಾಹಿತ್ಯದಲ್ಲಿ ವಸ್ತುವಾಗಿ ಐಕ್ಯ ಹೊಂದುತ್ತದೆಯೆಂದು ಭಾವಿಸುತ್ತದೆ. ಇದರೊಂದಿಗೆ ಸಾಹಿತ್ಯದ ಸಮಗ್ರೀಕರಣದ ಪ್ರಶ್ನೆಯು ತಳಕು ಹಾಕಿಕೊಳ್ಳುತ್ತದೆ. ಸಾಹಿತ್ಯದಲ್ಲಿ ವಿನ್ಯಾಸಕ್ಕೆ ವಸ್ತುವೇ ಕೇಂದ್ರವೆಂದು ರೂಪನಿಷ್ಠರು ಗಂಭೀರವಾಗಿ ನಂಬಿದರೆ, ಅದನ್ನೇ ವಿರೋಧಿಸುವ ಡೆರಿಡಾ ಬೇರೆ ಚರ್ಚೆಯನ್ನು ಪ್ರಾರಂಭಿಸುತ್ತಾನೆ ; ಸಾಹಿತ್ಯದ ಸಮಗ್ರೀಕರಣದ ಕಲ್ಪನೆಯೇ ಸಾಹಿತ್ಯದ ಸಂದರ್ಭಗಳಲ್ಲಿ ಅರ್ಥಹೀನ ಮತ್ತು ಕೆಲ ಸಂದರ್ಭಗಳಲ್ಲಿ ಅಸಾಧ್ಯವೆಂದು ಡೆರಿಡಾ ವಾದಿಸುತ್ತಾನೆ. ಪ್ರಗತಿಪರ ವಿಚಾರಧಾರೆಯ ವಿಮರ್ಶಕರು ಮಾತ್ರ ಈ ಸಂದರ್ಭದಲ್ಲಿ ಬೇರೆ ಪರಿಭಾಷೆಯ ಮೂಲಕ ಇದರ ಬಗ್ಗೆ ವೈಜ್ಞಾನಿಕ ನಿಲುವನ್ನು ವ್ಯಕ್ತಪಡಿಸುತ್ತಾನೆ. ಮಾರ್ಕೂಸನ ಪ್ರತಿಪಾದನೆಯು ಈ ಬಗೆಯದು : ಕಲೆಯು ಹುಟ್ಟಿಕೊಳ್ಳುವುದೇ ಆದರ್ಶ ಮತ್ತು ವಾಸ್ತವದ ಸಂಘರ್ಷದಲ್ಲಿ. ಕಲೆ ಮತ್ತು ಜೀವನ ಕ್ರಮಕ್ಕೆ ದ್ವಂದ್ವ ವಿನ್ಯಾಸದ ಪರಿಭಾಷೆಯಿದೆ. ಅಂದರೆ : ಕಾವ್ಯವನ್ನು ಪ್ರಾತಿನಿಧಿಕ ಅಥವಾ ಅಭಿವ್ಯಕ್ತ್ಯಾತ್ಮಕವೆನ್ನುವುದನ್ನು ಒಪ್ಪಿಕೊಂಡರೆ ಕಾವ್ಯದಲ್ಲಿ ಇರುವ ಕೇಂದ್ರಕ್ಕೂ ಸಮಾಜಕ್ಕೂ ಅಂತರ ಸಂಬಂಧವಿದ್ದೇ ಇರುತ್ತದೆ. ಈ ಮಾತನ್ನು ಸಮರ್ಥಿಸಲೆಂದೇ ಒಂದು ಉದಾಹರಣೆಯನ್ನು ಕೊಡಬಹುದು : ಸಿದ್ಧಲಿಂಗಯ್ಯನವರ 'ಹೊಲೆ ಮಾದಿಗರ ಹಾಡು' ತೀರಾ ನಯ ನಾಜೂಕಿನ, ಮಧ್ಯಮ ವರ್ಗದ

ಕನಸುಗಾರಿಕೆಯ ವಿಮರ್ಶಕರಿಗೆ ಕಾವ್ಯವೇ ಅಲ್ಲ. ಅವರ ಪ್ರಕಾರ, ಕಾವ್ಯಕ್ಕೆ ಇರಬೇಕಾದ ಸೌಂದರ್ಯದ ಕನಿಷ್ಠ ಅಂಶವೂ ಸಿದ್ಧಲಿಂಗಯ್ಯನವರ ಈ ಕವಿತೆಯಲ್ಲಿಲ್ಲ. ಈ ನಯ ನಾಜೂಕಿನ ವಿಮರ್ಶಕರು 'ಹೊಲೆ ಮಾದಿಗರಹಾಡು' ಕವಿತೆಯ ಕುರಿತು ವ್ಯಕ್ತಪಡಿಸಿದ ಮುಖ್ಯ ಅಭಿಪ್ರಾಯಗಳಲ್ಲಿ ಒಂದು: ಈ ಕವಿತೆಯಲ್ಲಿ ಸಿಟ್ಟಿದೆ. ಕವಿತೆಯ ವಸ್ತು (ಕೇಂದ್ರ) ಇದು. ಕವಿತೆಯಲ್ಲಿರುವ ಸಿಟ್ಟಿನ ಗುಣವನ್ನು ಗ್ರಹಿಸಲಾಗದ ನಮ್ಮ ಗುಣಗ್ರಾಹಿ ವಿಮರ್ಶಕರು ಇದಕ್ಕೆ ಬೇರೆ ಅರ್ಥವನ್ನು ಕೊಟ್ಟರು. ಸಾಮಾಜಿಕ-ಚಾರಿತ್ರಿಕ ಹಿನ್ನೆಲೆಯನ್ನು ದ್ವಂದ್ವ ವಿನ್ಯಾಸದ ತಾತ್ತ್ವಿಕತೆಯ ಮುಖಾಂತರ ಗ್ರಹಿಸುವ ವಿಮರ್ಶಕರು ಕೂಡಾ ಈ ಕವಿತೆಯ ಚರ್ಚೆಯನ್ನು ಬೌದ್ಧಿಕತೆಯೊಂದಿಗೆ ತುಲನೆ ಮಾಡಿರುವುದು ಗಮನಾರ್ಹ. ದ್ವಂದ್ವ ವಿನ್ಯಾಸವನ್ನು ಚರಿತ್ರೆ-ಕೃತಿ-ವಸ್ತು-ವಿನ್ಯಾಸದ ಜೊತೆಗೆ ಇಟ್ಟು ನೋಡಿದರೆ ಈ ಕವಿತೆಯಲ್ಲಿನ ಕ್ರಾಂತಿಕಾರಕ ಗುಣ ಮಹತ್ತ್ವದ್ದೆಂದು ಅನಿಸುವುದಿಲ್ಲವೆ. ಅತಿ ಬುದ್ಧಿವಂತಿಕೆಯ, ಕನಸುಗಾರಿಕೆಯ ವಿಮರ್ಶೆ ಕೂಡಾ ನಮ್ಮ ಸಂದರ್ಭದಲ್ಲಿ ಕ್ರಿಯೆಯನ್ನು ಬರೆಯುತ್ತಲೇ ಇರುತ್ತದೆ ಎನ್ನುವುದಕ್ಕೆ ಇದೊಂದು ಉದಾಹರಣೆ ಮಾತ್ರ. ಹೀಗೆ ನೋಡುವುದಿದ್ದರೆ ನಮ್ಮ ವಿಮರ್ಶಕರ ಮನಸ್ಸಿನ ಮೇಲೆಯೂ ವರ್ಗದ ಪ್ರಭಾವವು ನಿಚ್ಚಳವಾಗಿ ಗೋಚರವಾಗುತ್ತದೆ. ಪೂರ್ವ ಪ್ರಜ್ಞೆಗೂ ವಿಮರ್ಶಕನು ಕಾವ್ಯದಲ್ಲಿ ಬಯಸುವುದಕ್ಕೂ ಸಂಬಂಧವಿರುತ್ತದೆ. ಬಂಡಾಯದ ಚಳುವಳಿಯ ಸಂದರ್ಭದಲ್ಲಿ ಬಂದ ಅನೇಕ ಕವಿತೆಗಳನ್ನು ನಿರಾಕರಿಸುವ ವಿಮರ್ಶಕರು ಹೋರಾಟದ ಅರ್ಥವಂತಿಕೆಯನ್ನು, ಅವರ ಜೊತೆಗಿರುವ ಹೋರಾಟ ಮತ್ತು ಕಾವ್ಯದ ದ್ವಂದ್ವವನ್ನು ನಿರಾಕರಿಸಿ ಕೇವಲ ಅಕಾಡೆಮಿಕ್ ವಿಮರ್ಶೆಯನ್ನೇ ಮಾಡುತ್ತಾರೆಯೆ ? ಮತ್ತು ಅದರ ನೇತಿ, ನೇತಿ.... ವಾದವನ್ನೇ ಪುನರುಚ್ಚಿಸುತ್ತಿದ್ದಾರೆಯೇ ಎನ್ನುವುದನ್ನು ಚರ್ಚಿಸಬೇಕಾಗಿದೆ. ಈಗ ಮತ್ತೆ 'ಹೊಲೆ ಮಾದಿಗರ ಹಾಡು' ಕೃತಿಯ ಕೇಂದ್ರಕ್ಕೂ ನಮ್ಮ ಚಾರಿತ್ರಿಕ ಅವಶ್ಯಕತೆಯಾದ ಸಾಮಾಜಿಕ ಕೇಂದ್ರಕ್ಕೂ ಒಂದು ಸಂಬಂಧವಿದೆ ಎನ್ನುವುದನ್ನು ಪ್ರಗತಿಪರ ಧೋರಣೆಯ ವಿಮರ್ಶಕರು ಗುರುತಿಸಬಲ್ಲರು.

ಪರಶುರಾಮನು ತನ್ನ ತಂದೆಯಾದ ಜಮದಗ್ನಿಯ ಅಪ್ಪಣೆಯ ಮೇರೆಗೆ ತಾಯಿಯ ತಲೆಯನ್ನು ಕಡಿದ ಕತೆಯು ನಮ್ಮಲ್ಲಿ ಪ್ರಚಲಿತವಿದೆ. ಈ ಕತೆಯನ್ನು ಒಬ್ಬೊಬ್ಬ ವಿಮರ್ಶಕರು ತಮ್ಮ ತಮ್ಮ ಆಲೋಚನಾ ಪಂಥಕ್ಕೆ ಅನುಸಾರವಾಗಿ ಚರ್ಚಿಸಬಹುದು. ಪಿತೃ ಸಂಸ್ಕೃತಿಯ ಪ್ರಾಬಲ್ಯ ಈ ಕತೆಯಲ್ಲಿ ಪಿತೃಸಂಸ್ಕೃತಿಯ ಪ್ರಾಬಲ್ಯವಿದೆಯೆಂದು, ಮಾತೃ ಮಾಲೀಯ ಮತ್ತು ಪಿತೃ ಮಾಲೀಯ ವಿಚಾರಗಳ ಸಂಘರ್ಷವನ್ನು ಈ ಕತೆಯು ಹೇಳುತ್ತದೆಯೆಂದು ಮಾನವಶಾಸ್ತ್ರಜ್ಞರು ಹೇಳಬಹುದು. ತಂದೆ ಬಗೆಗೆ ಮಗನಿಗೆ ಭಯವಿದೆಯೆಂದು ಮನಶ್ಶಾಸ್ತ್ರಜ್ಞರು ವಾದಿಸಬಹುದು. ಇದು ಕೇವಲ ಎರಡು ನಮೂನೆ. ಕತೆಯ ವಸ್ತುವನ್ನು ವಿಶ್ಲೇಷಿಸುವಾಗ

ಇಲ್ಲಿ ವಿಮರ್ಶನ ಪ್ರಜ್ಞೆಯು ಕೆಲಸ ಮಾಡುತ್ತದೆ. ವಿಮರ್ಶಕನು ಕೃತಿಯ ವಸ್ತುವನ್ನು ಬೇರೆ ಬೇರೆ ಕೋನಗಳಿಂದ ಚರ್ಚೆ ಮಾಡಲು ಹೊರಟಾಗ ಕೃತಿಯ ವಸ್ತುವು ಸಂಪಾದಿಸು ರೂಪವನ್ನು ಧರಿಸುತ್ತದೆ ಎಂದು ಸೂಚಿಸುವುದಕ್ಕೆ ಈ ಮಾತನ್ನು ಹೇಳಲಾಗಿದೆ. ವಿಮರ್ಶಕನ ಪ್ರಜ್ಞೆಯ ಹಿನ್ನೆಲೆಯಲ್ಲಿ ಚರ್ಚೆಯಾಗುವ ಕೃತಿಯು ಸದಾ ಜೀವಂತವಾಗಿರುತ್ತದೆ ಎನ್ನುವುದನ್ನು ಅಲ್ಲಗಳೆಯುವುದಿಲ್ಲ, ಆದರೆ, ವಿಮರ್ಶಕನು ಕೃತಿಯ ವಸ್ತುವನ್ನು ನೋಡುವಾಗ ಬಳಸುವ ಪರಿಕರಗಳು ಆತನ ರಾಜಕೀಯ ಬದ್ಧತೆಯನ್ನು ಕೂಡಾ ಸೂಚಿಸುತ್ತಿರುತ್ತದೆ.

ಎಲ್ಲೆಲ್ಲಾ ಸುತ್ತಾಡುತ್ತಾ ಬಂದ ಮೇಲೆ ಚರ್ಚೆಯನ್ನು ಕೇಂದ್ರಸ್ಥಗೊಳಿಸಬಹುದು : ಸಾಹಿತ್ಯವನ್ನು ಚಳುವಳಿಯು ಅರ್ಥಮಾಡಿಕೊಳ್ಳುವ ಬಗೆ, ಈ ಸಂದರ್ಭದಲ್ಲಿ ಚಳುವಳಿಯಲ್ಲಿ ಮುಖ್ಯವಾಗಿ ಸಾಹಿತ್ಯವು ಎರಡನೆಯದು ಕಳೆದ ಒಂದು ದಶಕದ ಇತಿಹಾಸವುಳ್ಳ ಬಂಡಾಯ ಚಳುವಳಿಯು ಸಾಹಿತ್ಯೇತರವಾಗಿ ಮುಖ್ಯವಾದ ಕೆಲಸವನ್ನು ಮಾಡಿದೆ. ಸಮಾಜವು ನಿಯಂತ್ರಿಸುವ ವ್ಯಕ್ತಿವಾದಿ ಪ್ರಜ್ಞೆಯ ಗಡಿಯನ್ನು ದಾಟುವ ಪ್ರಯತ್ನವನ್ನು ಮಾಡಿದೆ. ಬಂಡವಾಳಶಾಹಿ ವ್ಯವಸ್ಥೆಯು, ಆಧುನಿಕ ನಾಗರಿಕನನ್ನು ಕೊಲ್ಲುವವರ ನಡುವೆ ಮನುಷ್ಯನ ಹತಾಶ ಕ್ಷಣಗಳಿಗೆ ಭರವಸೆಯ ಸಾಂತ್ವನವನ್ನು ಕೊಟ್ಟ ಬಂಡಾಯ ಚಳುವಳಿಯು ಸಾಮಾಜಿಕ ಚಳುವಳಿಯಾಗಿ ಅರ್ಥವಂತಿಕೆಯ ಕ್ಷಣಗಳನ್ನು ಬೊಗಸೆಗಳಿಗೆ ಎರೆದುಕೊಟ್ಟಿದೆ. ಒಂದು ಚಳುವಳಿಯು ತುಂಬಿಕೊಡುವ ಸಾರ್ಥಕ ಕ್ಷಣವಿದು. ಆದರೆ, ಚಳುವಳಿಯು ಮನುಷ್ಯನ ಆಲೋಚನಾ ಕ್ರಮವನ್ನು ಬದಲಾಯಿಸಿದ್ದರಿಂದ ನಮ್ಮ ಸೌಂದರ್ಯಾತ್ಮಕ ಪರಿಕಲ್ಪನೆಯು ಬದಲಾಗಿದೆ.

ನಮ್ಮ ಸಾಮಾಜಿಕ ವಿನ್ಯಾಸವನ್ನು ನೋಡಿಕೊಂಡು ಮುಂದುವರಿಯಬಹುದು: ಸಾಮಾಜಿಕವಾಗಿ ತಲ್ಲಣವೊಂದು ಪ್ರಾರಂಭವಾಗಿದೆ. ಸಾಂಸ್ಕೃತಿಕ ಅನನ್ಯತೆಯ ವಾಗ್ವಾದವು ಶುರುವಾದ ಸನ್ನಿವೇಶವಿದು. ಈ ಪರಿಣಾಮಗಳಿಂದ ಸಾಹಿತ್ಯ ಕೃತಿಗೆ ಆಯ್ಕೆ ಮಾಡಿಕೊಳ್ಳುವ ವಸ್ತು ಮತ್ತು ಆಲೋಚನಾ ಕ್ರಮವು ಎರವಲು ಸಾಮಗ್ರಿಯನ್ನು ಹೊರತುಪಡಿಸಿಕೊಳ್ಳುತ್ತಿದೆ. ಈಗ ಬರೆಯುತ್ತಿರುವ ಅನೇಕ ಜನ ಬರಹಗಾರರು ಈ ಬೇರು ಹಿಡಿಯುವ ಪ್ರಯತ್ನದಲ್ಲಿದ್ದಾರೆ. ಸಾಂಸ್ಕೃತಿಕ ಕಾಳಜಿಯು ಇಲ್ಲಿಂದ ಪ್ರಾರಂಭವಾಗಿದೆ. ವಿಶ್ವದ ಪರಿಕ್ರಮಗಳನ್ನು ಸೂಕ್ಷ್ಮ ಅವಲೋಕನದಿಂದ ಪರಿಭಾವಿಸುವ ಮತ್ತು ವಸಾಹತು ಮನಸ್ಸಿನ ಉಲ್ಬಣವನ್ನು ತೊಡೆಯುವ ಪ್ರಯತ್ನದ ಹಾದಿ ಶುರುವಾಗಿದೆ. ವಿಘಟಿತ ಸಮಾಜದ ಅನೇಕ ಅನುಮಾನಗಳ ಮಧ್ಯೆ ಕನ್ನಡ ಸಾಹಿತ್ಯವು ಅವತರಣಿಯನ್ನು ಪಡೆದುಕೊಳ್ಳುತ್ತಿದೆ. ಜಾತಿ–ಜಾತಿಯ ನಡುವಿನ ಅನುಮಾನಗಳು ಸೃಜನಶೀಲತೆಗೆ ಚೌಕಟ್ಟು ರೂಪಿಸುತ್ತಿರುವುದು ಈ ವಾದಕ್ಕೆ ಪುಷ್ಟಿ

ಕೊಡುತ್ತದೆ, ಈ ಎಲ್ಲಾ ಕಾರಣಗಳಿಂದ ವಸ್ತು ಮತ್ತು ವಿನ್ಯಾಸದ ಚರ್ಚೆಯು ಚರಿತ್ರೆಯ ಜೊತೆಗೆ ಸಂಬಂಧ ಕಲಿಸುತ್ತದೆ.

(ಚರ್ಚಿಸಿದ ಶ್ರೀ ಎಸ್. ಶಿವಾನಂದ ಮತ್ತು ಡಾ. ರಾಜಾರಾಂ ಹೆಗ್ಗಡೆ ಅವರಿಗೆ ಕೃತಜ್ಞತೆಗಳು)

ಅಡಿ ಟಿಪ್ಪಣಿಗಳು

1. ಇಂಗ್ಲಿಷ್‌ನ ವಾದ-ವಿವಾದಗಳನ್ನು ಪೂರ್ತಿ ನಿರಾಕರಿಸಬೇಕೆಂದು ಇದರರ್ಥವಲ್ಲ ಆದರೆ, ಇಂಗ್ಲೀಷಿನಲ್ಲಿ ಬಂದಿರುವ ಅನೇಕ ವಾದ-ವಿವಾದಗಳಿಗೆ ಒಂದು ಚರಿತ್ರೆಯಿದೆ. ಆ ಚರಿತ್ರೆಯನ್ನು ಗಮನಿಸುವುದು ಅವಶ್ಯ. ಸೀದಾ-ಸಾದಾ ಒಪ್ಪಿಕೊಳ್ಳುವುದೂ ಕಷ್ಟ ಮನಸ್ಸಿನ ತೀರಾ ಸಾಹಸ ವ್ಯಾಪಾರವಿದು. ಹಾಗಿದ್ದೂ ಸದ್ಯ ಹೊಸ ಆಲೋಚನಾಕ್ರಮ ಮತ್ತು ಪರ್ಯಾಯ ಹುಟ್ಟಿಕೊಳ್ಳದೆ ಈ ಗುಂಗಿನಿಂದ ಹೊರಬರುವುದು ಕಷ್ಟ. ಇದು ಎಲ್ಲರನ್ನೂ ವ್ಯಾಪಿಸಿದೆ. ಇದರ ಬಗೆಗೆ ಚರ್ಚೆ ಅವಶ್ಯವೋ ಏನೋ ?

2. ಬಹುಶಃ ಬೇಂದ್ರೆಯವರು ಈ ನಾಡಿ ಬಡಿತವನ್ನು ಕಂಡು ಕೊಂಡಿರಬೇಕು. ಹೀಗಾಗಿ ಅವರ ವಿಮರ್ಶೆಯ ಪರಿಭಾಷೆಗಳಲ್ಲಿ ಪ್ರಸ್ತಾಪಗೊಂಡ ಕಾವ್ಯ ಯೋಗದ ಪರಿಕಲ್ಪನೆಯೂ ಕುತೂಹಲ ಕೆರಳಿಸುವಂತಹುದೇ ಆಗಿದೆ.

3. ತುಂಬಾ ಹಳೆಯ.ಪ್ರಜಾಮತ ಪತ್ರಿಕೆಯೊಂದರಲ್ಲಿ ಕುವೆಂಪು ಅವರ ಭಾಷಣದ ವರದಿಯೊಂದರಲ್ಲಿ ಈ ರೀತಿಯ ಓದಿದ ನೆನಪು-ಸ್ಪಷ್ಟ ನೆನಪಿಲ್ಲ.

4. ನಿರಚನ ಸಿದ್ಧಾಂತಿಗಳು-ಬರಹಗಾರನಿಗೂ ಬರಹಕ್ಕೂ ಬರೆದ ತಕ್ಷಣವೇ ಸಂಬಂಧ ಕಳೆದು ಹೋಗುತ್ತದೆಯೆಂದು ಭಾವಿಸುತ್ತಾರೆ. ಅದರಲ್ಲೂ ಮುಖ್ಯವಾಗಿ ರೊಲಾಂಡಬಾರ್ತಸ ಈ ಕುರಿತಂತೆ ಭಾರಿ ಚರ್ಚೆಯನ್ನು ಮಾಡುತ್ತಾನೆ.

ವಿವರಗಳಿಗೆ ನೋಡಿ : Josui. V. Harari (Ed :) 1979.

TEXTUAL STRATEGIES, Methuen. London

Roland Barthes From Work to text P. 73-81.

5. David Lodge (Ed :) 1988 Modern Literary criticism. Longman.

ಹಳೆಮನೆಯವರ ಐತಿಹಾಸಿಕ ನಾಟಕಗಳಲ್ಲಿ ಸಮಕಾಲೀನ ಪ್ರಜ್ಞೆ

—ಡಾ|| ಬಸವರಾಜ ಸಬರದ

ಇತಿಹಾಸವನ್ನು ವೈಭವೀಕರಿಸಿ ವರ್ಣಿಸುವುದೇ ಕೆಲವು ಲೇಖಕರ ಉದ್ದೇಶವಾದರೆ, ಇತಿಹಾಸವನ್ನು ತಿರುಚಿ, ಅದರ ಒಳನೋಟಗಳನ್ನರಿಯದೆ ಅದಕ್ಕೆ ಅಪಚಾರ ಮಾಡುವಂತವರೂ ಕೆಲವು ಲೇಖಕರಿದ್ದಾರೆ. ಇವೆರಡೂ ತುಂಬಾ ಅಪಾಯಕಾರಿ ದೃಷ್ಟಿಕೋನಗಳು. ಮೊದಲೇ ನಮ್ಮಲ್ಲಿ ಅಥೆಂಟಿಕ್ ಆದ ಇತಿಹಾಸ ಸಿಗುವುದು ಅಪರೂಪ. ಇದ್ದ ಎಳೆಗಳನ್ನೇ ತೊಟ್ಟುಕೊಂಡು ನಿಂತ ಕಣ್ಣೆದುರಿಗಿನ ಇತಿಹಾಸ ಇಂದಿನ ಚಲನಶೀಲ ಬದುಕಿಗೆ ತುಂಬಾ ಸಹಾಯಕಾರಿಯಾಗಬಲ್ಲದು. ವರ್ತಮಾನವೆಂಬುದು ಭೂತ ಮತ್ತು ಭವಿಷತ್‌ಗಳ ನಡುವೆ ಇರುವ ಒಂದು ಅರ್ಥಪೂರ್ಣ ಕೊಂಡಿ. ಭೂತ ಕಾಲದ ಎದೆಯ ಮೇಲೆ ವರ್ತಮಾನದ ಸವಾರಿ ನಡೆದಿರುತ್ತದೆ. ಆದ್ದರಿಂದ ವರ್ತಮಾನದ ಲೇಖಕರಿಗೆ ಇತಿಹಾಸ ಚಲನಶೀಲವಾದದ್ದೆಂಬುದು ಸ್ಪಷ್ಟವಾಗಬೇಕಾಗುತ್ತದೆ.

ಇತಿಹಾಸದುದ್ದಕ್ಕೂ ಮಾನವನ ವೈವಿಧ್ಯಮಯ ಬದುಕು ಹಾಸು ಹೊಕ್ಕಾಗಿದೆ. ಚಿರಂತನ ಮೌಲ್ಯಗಳಾದ ಪ್ರೀತಿ–ವಾತ್ಸಲ್ಯ, ದಯೆ, ಅನುಕಂಪಗಳ ಜತೆಗೆ ದ್ವೇಷ, ಮತ್ಸರ, ಸ್ವಾರ್ಥದಂತಹ ಭಾವನೆಗಳು ಮನುಷ್ಯ ಹುಟ್ಟಿದಾಗಿನಿಂದಲೂ ಕಾಡುತ್ತಲೇ ಬಂದಿವೆ. ಕಾಲ–ದೇಶ–ಭಾಷೆ–ಸಂದರ್ಭ ಬೇರೆ ಬೇರೆಯಾದರೂ ಕೂಡ ಮನುಷ್ಯನ ಬದುಕಿನ ನೆಲೆಗಳು ಸಾಮಾನ್ಯವಾಗಿ ಒಂದೇ ರೀತಿಯಾಗಿರುತ್ತವೆ. ಇತಿಹಾಸವನ್ನು ಅದರ ಕಾಲ, ಸಂಸ್ಕೃತಿಯ ಹಿನ್ನೆಲೆಯಲ್ಲಿ ಅರ್ಥೈಸಿಕೊಳ್ಳುತ್ತಾ, ಸಮಕಾಲೀನ ಸಮಸ್ಯೆಗಳೊಂದಿಗೆ ತೂಗಿ ನೋಡಿದಾಗ, ಇತಿಹಾಸದ ಅನೇಕ ಸಂದರ್ಭಗಳೂ ಕೂಡ ಪ್ರಸ್ತುತವೆನಿಸುತ್ತವೆ. ಇಂತಹ ಒಂದು ದೃಷ್ಟಿಕೋನ ಐತಿಹಾಸಿಕ ಸಾಹಿತ್ಯ ಕೃತಿಗಳಲ್ಲಿ ಬೆಳೆಯಬೇಕಾಗಿದೆ.

ಈಗಾಗಲೇ ನಾಟಕ ಸಾಹಿತ್ಯದಲ್ಲಿ ತಮ್ಮನ್ನು ಸ್ಪಷ್ಟವಾಗಿ ಗುರುತಿಸಿಕೊಂಡಿರುವ **ಲಿಂಗದೇವರು ಹಳೆಮನೆ**ಯವರ ಎರಡು ಐತಿಹಾಸಿಕ ನಾಟಕಗಳಲ್ಲಿ ಇಂತಹ ಒಂದು ದೃಷ್ಟಿಕೋನವಿರುವುದರಿಂದ ಆ ಕೃತಿಗಳು ಇಂದಿನ ಸಾಹಿತ್ಯ ಮತ್ತು ಸಾಮಾಜಿಕ ಸಂದರ್ಭದಲ್ಲಿ ಬಹಳ ಮುಖ್ಯವಾಗುತ್ತವೆ.

೧೯೮೨ರಲ್ಲಿ ಪ್ರಕಟವಾದ ಹಳೆಮನೆಯವರ ಪ್ರಥಮ ನಾಟಕ 'ಚಿಕ್ಕದೇವಭೂಪ'. ೧೯೮೯ರಲ್ಲಿ ಪ್ರಕಟವಾದ ಎರಡನೇ ನಾಟಕ 'ಹೈದರ' ಈ ಎರಡೂ ನಾಟಕಗಳಲ್ಲಿ ಐತಿಹಾಸಿಕ ಘಟನೆಗಳೊಂದಿಗೆ ಸಮಕಾಲೀನ ಕಾಳಜಿಗಳು ಎದ್ದು ಕಾಣುತ್ತವೆ. ಈ ಕಾರಣದಿಂದಲೇ ಹಳೆಮನೆ ಗಮನಾರ್ಹ ನಾಟಕಕಾರರಾಗಿ ಕಾಣಿಸುತ್ತಾರೆ. ಇವೆರಡೂ ನಾಟಕಗಳು ಈಗಾಗಲೇ ಅನೇಕ ಪ್ರಯೋಗಗಳನ್ನು ಕಂಡು ಜನಪ್ರಿಯತೆಯನ್ನು ಕೂಡ ಪಡೆದಿವೆ.

"ಇತಿಹಾಸ ಸೃಷ್ಟಿಸುವದಕ್ಕಲ್ಲ. ಪುನರ್ ಪ್ರತಿಪಾದಿಸುವುದಕ್ಕೆ ಎಂದು ನಾನು ನಂಬಿದವನು" ಎಂದು 'ಚಿಕ್ಕದೇವಭೂಪ' ನಾಟಕದ ಪ್ರಾರಂಭದಲ್ಲಿ ಹೇಳುವ ಹಳೆಮನೆಯವರ ಬರಹದಲ್ಲಿ ಇಂತಹ ಒಂದು ಸ್ಪಷ್ಟತೆ ಇದೆ.

'ಚಿಕ್ಕದೇವಭೂಪ' ಮೈಸೂರ ಅರಸರ ಚರಿತ್ರೆಗೆ ಸಂಬಂಧಿಸಿದ್ದಾಗಿದೆ. ೧೬೭೨ರಲ್ಲಿ ಅಧಿಕಾರಕ್ಕೆ ಬಂದ ಚಿಕ್ಕದೇವರಾಜ ಅರಸರ ಕಾಲದ ಆಡಳಿತ ಮತ್ತು ಅಂದಿನ ಸಾಮಾಜಿಕ ಸಂದರ್ಭವನ್ನು ಈ ನಾಟಕ ಹೇಳುತ್ತದೆ. ಪ್ರಾರಂಭದಲ್ಲಿಯೇ ನಾಟಕಕಾರರು ಸ್ಪಷ್ಟಪಡಿಸುವಂತೆ ಇಲ್ಲಿಯ ಪ್ರಧಾನ ವಸ್ತು ರೈತರ ಬಂಡಾಯವಾಗಿದೆ.

ನಾಟಕಕಾರ ಹಳೆಮನೆಯವರು ಅಧಿಕೃತ ದಾಖಲೆಗಳನ್ನೆಲ್ಲ ಸಂಗ್ರಹಿಸಿ ಈ ಐತಿಹಾಸಿಕ ನಾಟಕಗಳನ್ನು ರಚಿಸಿದ್ದಾರೆ. 'ಚಿಕ್ಕದೇವಭೂಪ' ನಾಟಕದ ವಸ್ತುವಿಗೆ ಸಂಬಂಧಿಸಿದಂತೆ ಇತಿಹಾಸಕಾರರಲ್ಲಿ ಎರಡು ರೀತಿಯ ಅಭಿಪ್ರಾಯಗಳಿರುವುದನ್ನು ಸ್ಪಷ್ಟಪಡಿಸಿಕೊಂಡ ಹಳೆಮನೆಯವರು ಮೈಸೂರು ಗೆಜೆಟಿಯರ್, ದೇವಚಂದ್ರನ ರಾಜಾವಳಿ ಕಥೆ (೧೬೭೦) ಕರ್ನಲ್ ಮಾರ್ಕ್‌ವಿಲ್ಕ್ಸ್‌ನ **Historical Sketch of South India** (೧೮೧೦) ಈ ಮುಂತಾದ ಅಧಿಕೃತ ದಾಖಲೆಗಳ ಜತೆಗೆ, ಮ. ನ. ಮೂರ್ತಿಯವರ 'ಚಿಕ್ಕದೇವರಾಜ' ಕಾದಂಬರಿ, ತಿರುಮಲಾರ್ಯನ 'ಗ್ರಂಥಗಳು' ಮಾಸ್ತಿಯವರ 'ಪಂಡಿತನ ಮರಣ ಶಾಸನ'ವೆಂಬ ಕಥೆಯಂತಹ ಸೃಜನಶೀಲ ಸಾಹಿತ್ಯದ ಕೃತಿಗಳನ್ನೂ ಗಮನಿಸಿದ್ದಾರೆ.

ಚಿಕ್ಕದೇವರಾಜ ಅಧಿಕಾರಕ್ಕೆ ಬಂದಾಗ ಪರಿಸ್ಥಿತಿ ತುಂಬಾ ಕಠಿಣವಾಗಿತ್ತು. ಉತ್ತರದಲ್ಲಿ ಔರಂಗಜೇಬನಂತಹ ಅರಸನು ಆಳುತ್ತಿದ್ದರೆ ; ಕರ್ನಾಟಕದಲ್ಲಿ ವಿಜಯನಗರ ಸಾಮ್ರಾಜ್ಯ ಪತನವಾಗಿ ಬಿದನೂರಿನ ಶಿವಪ್ಪನಾಯಕ ಅಧಿಕಾರದಲ್ಲಿದ್ದ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಎರಡು ಸಮಸ್ಯೆಗಳನ್ನೆದುರಿಸಬೇಕಾಗಿತ್ತು. ಒಂದು, 'ದಂಗೆ'ಯೇಳಲು ಪ್ರಯತ್ನಿಸುತ್ತಿದ್ದ ಪಾಳೇಗಾರರನ್ನು ಹತ್ತಿಕ್ಕುವುದು : ಇನ್ನೊಂದು ಹೊರಗಿನ ಶತ್ರುಗಳ ಧಾಳಿಗಳನ್ನೆದುರಿಸಲು ಸಿದ್ಧವಾಗುವುದು. ಇವಕ್ಕೆಲ್ಲ ಬೊಕ್ಕಸ ತುಂಬಿಸಬೇಕಾದದ್ದು ಅಗತ್ಯವಾಗಿತ್ತು. ಹೀಗಾಗಿ ಚಿಕ್ಕದೇವರಾಜ ರೈತರ ಮೇಲೆ ಕೂಲಿಕಾರ್ಮಿಕರ ಮೇಲೆ, ಅವಶ್ಯಕ ವಸ್ತುಗಳ ಮೇಲೆ ಹೆಚ್ಚಿನ ಕರಭಾರ ಹೇರಿದಾಗ ರೈತ

ರೆಲ್ಲಾ ಒಗ್ಗಟ್ಟಾಗಿ ನಿಂತು ಈ ಕರಭಾರದ ವಿರುದ್ಧ ಬಂಡೇಳುತ್ತಾರೆ. ಅರಸರ ಅಧಿಕಾರಶಾಹಿಯನ್ನು ಪ್ರಶ್ನಿಸುತ್ತಾರೆ. (ಇದು ಕರ್ನಾಟಕದಲ್ಲಿಯೇ ನಡೆದ ಪ್ರಥಮ ರೈತ ಬಂಡಾಯದೆಂದು ಲೇಖಕರು ಹೇಳುತ್ತಾರೆ.)

ಮೂರು ನೂರು ವರ್ಷಗಳ ಹಿಂದೆ ನಡೆದ ರೈತ ಬಂಡಾಯದ ಆಶಯವನ್ನು ಹಳೆಮನೆ ಸಮಕಾಲೀನ ಚಳುವಳಿಗಳ ಹಿನ್ನೆಲೆಯಲ್ಲಿ ಸೂಕ್ಷ್ಮವಾಗಿ ಗ್ರಹಿಸುತ್ತಾರೆ. ಅಂದು ನಡೆದ ಹೋರಾಟಕ್ಕೂ ಇಂದು ನಡೆಯುವ ಹೋರಾಟಗಳಿಗೂ ಇರುವ ಸಮಾನ ಅಂಶಗಳನ್ನು ಗುರುತಿಸಿ ರೈತರ ಬಂಡಾಯಕ್ಕೆ ಒಂದು ಪರಂಪರೆಯನ್ನು ಕಟ್ಟಿ ಕೊಡುತ್ತಾರೆ. ಚಿಕ್ಕದೇವರಾಜ ತನ್ನ ಬೊಕ್ಕಸ ತುಂಬಿಸಲು ರೈತರ ಮೇಲೆ ವಿವಿಧ ರೀತಿಯ ಸುಂಕಗಳನ್ನು ಹೇರಿದಾಗ ರೈತರೆಲ್ಲಾ ಜಾಗೃತರಾಗಿ ಇದರ ವಿರುದ್ಧ ಬಂಡೇಳು ವುದು, ರಾಜಸತ್ತೆಯ ಸಂದರ್ಭದಲ್ಲಿ ನಡೆದ ತುಂಬಾ ಮುಖ್ಯವಾದ ಸಂಗತಿಯಾಗು ತ್ತದೆ.

ಈ ನಾಟಕದ ಆಶಯದ ಸ್ಪಷ್ಟತೆಗಾಗಿ ನಾಟಕಕಾರ ಇಲ್ಲಿ ಎರಡು ಪಾತ್ರಗಳ ಮೂಲಕ ಪ್ರಮುಖ ಘರ್ಷಣೆಯನ್ನುಂಟು ಮಾಡುತ್ತಾನೆ. ಆ ಎರಡು ಪಾತ್ರ ಗಳೆಂದರೆ ಸೂತ್ರಧಾರ ಮತ್ತು ಲಾವಣಿಕಾರ. ಚಿಕ್ಕದೇವರಾಜ ಅರಸ ತನ್ನ ಕಾಲ ದಲ್ಲಿ ತನ್ನ ಚರಿತ್ರೆಯನ್ನು ಆಡಳಿತಾಧಿಕಾರವನ್ನು ವೈಭವೀಕರಿಸಿ ಚರಿತ್ರೆ ಬರೆಸಿರು ತ್ತಾನೆ. ಕೆಲವು ಆಸ್ಥಾನ ಕವಿಗಳು ಇವನನ್ನೇ ಇಂದ್ರ–ಚಂದ್ರ ಎಂದು ಹೊಗಳಿ ವರ್ಣನಾಕೃತವಾದ ಕಾವ್ಯವನ್ನೂ ರಚಿಸುತ್ತಾರೆ. ಇಂತಹ ಚರಿತ್ರೆ–ಕಾವ್ಯವನ್ನು ನಂಬಿ ಅರಸನ ಬಗೆಗೆ ಅತ್ಯಂತ ಗೌರವವನ್ನಿಟ್ಟುಕೊಂಡು 'ಚಿಕ್ಕದೇವರಾಜ ವಿಜಯ' ವನ್ನು ನಟರಿಗೆ ಕಲಿಸಿ ನಾಟಕವಾಡಿಸಲು ಸೂತ್ರಧಾರ ಪ್ರಯತ್ನಿಸಿದರೆ ; ಅದಕ್ಕೆ ತುಂಬಾ ಭಿನ್ನವಾದ ಅಭಿಪ್ರಾಯಗಳೊಂದಿಗೆ, ಇತಿಹಾಸವನ್ನು ಸತ್ಯದ ಹಿನ್ನೆಲೆಯಲ್ಲಿ ಗಮನಿಸಿದ ಲಾವಣಿಕಾರ ಚಿಕ್ಕದೇವರಾಜನನ್ನು ವೈಭವೀಕರಿಸದೆ, ಚರಿತ್ರೆಯನ್ನೂ ವಿಕೃತಗೊಳಿಸದೆ, ನಡೆದಿರಬಹುದಾದ ಘಟನೆಗಳನ್ನು ಆಧಾರಗಳೊಂದಿಗೆ ಅದೇ ನಟರ ಮೂಲಕ ದಾಖಲಿಸುತ್ತಾನೆ. ಪ್ರಾರಂಭದಲ್ಲಿ ವೈಭವೀಕರಣವನ್ನೇ ಸತ್ಯವೆಂದು ನಂಬಿದ್ದ ಸೂತ್ರಧಾರ, ಲಾವಣಿಕಾರನ ಆಧಾರ ಸಾಮಗ್ರಿಗಳು ಪರಿಣಾಮ ಬೀರಿ, ವಿಷಯ ಮನದಟ್ಟಾದಾಗ ತನ್ನ ನಂಬಿಕೆಗಳನ್ನು ಕೈಬಿಟ್ಟು ಲಾವಣಿಕಾರನ ಆಶಯ ವನ್ನು ಒಪ್ಪಿಕೊಳ್ಳುತ್ತಾನೆ. ಇಲ್ಲಿ ನಾಟಕಕಾರರು ತುಂಬಾ ವಿಶಿಷ್ಟವಾದ ತಂತ್ರ ವೊಂದನ್ನು ಬಳಸಿದ್ದಾರೆ. ಸೂತ್ರಧಾರ ಅನೇಕ ಪ್ರೇಕ್ಷಕರ ಓದುಗರ ಪ್ರತಿನಿಧಿಯಂತಿ ದ್ದರೆ ಲಾವಣಿಕಾರ ನಾಟಕಕಾರನ ಆಶಯವನ್ನು ಪ್ರತಿನಿಧಿಸುತ್ತಾನೆ. ಹೀಗಾಗಿ ನಾಟಕದ ಪ್ರಾರಂಭದಲ್ಲಿ ಸೂತ್ರಧಾರನಿಗೂ–ಲಾವಣಿಕಾರನಿಗೂ ನಡೆಯುವ ಘರ್ಷಣೆ, ಪ್ರೇಕ್ಷಕ ನಾಟಕಕಾರರ ಘರ್ಷಣೆಯಾಗಿ ಕಾಣುತ್ತದೆ. ಸತ್ಯ ಸ್ಪಷ್ಟವಾದಂತೆಲ್ಲಾ

ಸೂತ್ರಧಾರ–ಲಾವಣಿಕಾರನಲ್ಲಿ ಒಂದಾಗುವುದು. ಪ್ರೇಕ್ಷಕರಿಗೆ ಓದುಗರಿಗೆ ಕೊಡುವ ಗೌರವವಾಗಿದೆ.

ಈ ನಾಟಕದಲ್ಲಿ ನಡೆಯುವ ಇನ್ನೊಂದು ಮಹತ್ವದ ಸಂಗತಿಯೆಂದರೆ, ಕೆಲವು ಜಂಗಮರು ತಮ್ಮ ಸ್ವಾರ್ಥಕ್ಕಾಗಿ ರೈತ ಬಂಡಾಯವನ್ನು ಬಳಸಿಕೊಂಡು ಚಿಕ್ಕದೇವರಾಜನ ಪ್ರಧಾನಿ ವಿಶಾಲಾಕ್ಷ ಪಂಡಿತನ ಕೊಲೆ ಮಾಡುತ್ತಾರೆ.

ಹೀಗಾಗಿ ಸಿಗಿಸಿಗಿಸಬೇಕಾಗಿದ್ದ ರೈತ ಬಂಡಾಯ ಇಂತಹ ಸ್ವಾರ್ಥ ಸಂಗತಿಗಳಿಂದ ತಣ್ಣಗಾಗಿ ಬಿಡುತ್ತದೆ. ಜೋಗಿ ಜಂಗಮರ ಮೇಲೂ ತೆರಿಗೆ ಹಾಕಿದ್ದರಿಂದ ತುಂಬಾ ಉಗ್ರವಾಗಿದ್ದ ಜಂಗಮರು ತಮ್ಮ ಸ್ವಾರ್ಥಕ್ಕಾಗಿ ತಮ್ಮಷ್ಟೇ ಸ್ವಾರ್ಥನಾಗಿದ್ದ ಮಂತ್ರಿ ವಿಶಾಲಾಕ್ಷ ಪಂಡಿತನ ಕೊಲೆ ಮಾಡಿಸುವುದು. ಆಮೇಲೆ ತಿರುಮಲಾರ್ಯ ಅಮಾತ್ಯ ಪದವಿ ಪಡಿಸಿಕೊಳ್ಳುವುದು. ರಕ್ತ ಖಚಿತ ಸಿಂಹಾಸನದ ದರ್ಬಾರದಲ್ಲಿ ನೋಡಿದಲ್ಲೆಲ್ಲಾ ಹೆಣ ತೇಲುವುದು, ಇದೆಲ್ಲದರ ನಡುವೆಯೂ ಕೊನೆಗೆ ರೈತರ ಆಶಾದಾಯಕ ಹಾಡಿನ ಧ್ವನಿಯೊಂದಿಗೆ ನಾಟಕ ಮುಕ್ತಾಯವಾಗುವುದು ನಾಟಕಕಾರರ ಹೋರಾಟದ ನಿಜವಾದ ಆಶಯವನ್ನು ಸ್ಪಷ್ಟಪಡಿಸುತ್ತದೆ. ಈ ರೈತ ಬಂಡಾಯದ ವಿಫಲತೆಗೆ ಜಂಗಮರ ಸ್ವಾರ್ಥ ದಾಹವೇ ಪ್ರಮುಖ ಕಾರಣವಾಯಿತೆಂದು ಹೇಳುವಲ್ಲಿ ನಾಟಕಕಾರರ ವಸ್ತುನಿಷ್ಠತೆ ಸ್ಪಷ್ಟವಾಗುತ್ತದೆ.

"ಆದರೆ, ರೈತರ ಬಂಡಾಯದ ವಸ್ತು ನಾಟಕದಲ್ಲಿ ಎಷ್ಟರ ಮಟ್ಟಿನ ಪ್ರಮಾಣದಲ್ಲಿ ಬೆಳೆಯಬೇಕಾಗಿತ್ತೊ ಆ ಪ್ರಮಾಣದಲ್ಲಿ ಬೆಳೆಯುವುದಿಲ್ಲ. ಹಾಗೆ ಬೆಳವಣಿಗೆ ಪಡೆಯುವುದಕ್ಕೆ ಮೊದಲೆ ವಿಫಲವಾಗಿಬಿಡುತ್ತದೆ."[1] ಎಂದು ಈ ನಾಟಕಕ್ಕೆ ಮುನ್ನುಡಿ ಬರೆದ ಎಚ್. ಎಮ್. ಚೆನ್ನಯ್ಯನವರು ಅಭಿಪ್ರಾಯಪಡುತ್ತಾರೆ. ಜಂಗಮರ ಸ್ವಾರ್ಥ ವಿಶಾಲಾಕ್ಷ ಪಂಡಿತ ಮಂತ್ರಿ ಮತ್ತು ಚಿಕ್ಕದೇವರಾಜ ಅರಸರ ಸ್ವಾರ್ಥದಷ್ಟೇ ಪ್ರಧಾನತೆಯನ್ನು ಪಡೆದಾಗ ಹಿಂಸೆ ಅನಿವಾರ್ಯವಾಗುತ್ತದೆ. ಸೈದ್ಧಾಂತಿಕವಾಗಿ ಸಂಘಟನೆಗೊಂಡಿರದ ರೈತರು ಅಂದಿನ ಸಂದರ್ಭದಲ್ಲಿ ಸಹಜವಾಗಿ ಸ್ವಾರ್ಥಿ ಜಂಗಮರ ಪರವಾಗಿ ನಿಲ್ಲುತ್ತಾರೆ. ಜಂಗಮರಿಗೆ ಬೇಕಾದದ್ದು ನಿಜವಾದ ರೈತ ಬಂಡಾಯವಲ್ಲ; ಅವರಿಗೆ ಬೇಕಾದದ್ದು ಅಧಿಕಾರದ ಸ್ಥಾನಮಾನ. ಇಂತಹ ಸ್ವಾರ್ಥ ಒಳ ಸಂಚನ್ನರಿಯದ ಮುಗ್ಧ ರೈತರು ಜೋಗಿ ಜಂಗಮರಂತವರ ಬಲಿಪಶುಗಳಾಗುವುದು ಚರಿತ್ರೆಯುದ್ದಕ್ಕೂ ನಡೆದು ಬಂದ ಸಂಗತಿ. ಎಲ್ಲೆಲ್ಲಿ ಮಾನವನ ಪ್ರಯತ್ನ ಹೋರಾಟ ಚಳವಳಿ ನಡೆದಿವೆಯೋ, ಅಲ್ಲಲ್ಲಿ ಇಂತಹ ಸ್ವಾರ್ಥ ಶಕ್ತಿಗಳ ಕೈವಾಡವೇ ಮೆರೆದಿರುವುದನ್ನು ಚರಿತ್ರೆ ತಿಳಿಸುತ್ತದೆ. ನಾಟಕಕಾರರಿಗೆ ಇಲ್ಲಿ ಪ್ರಸ್ತುತ ಸಾಮಾಜಿಕ ಕಳಕಳಿಯ ಹಾಗೆ, ಚರಿತ್ರೆಯ ವಸ್ತುನಿಷ್ಠತೆಯೂ ಪ್ರಧಾನವಾಗುತ್ತದೆ. ಹೀಗಾಗಿ ಅವರು ಅಲ್ಲಿ ಅವರ ಆಶಯವನ್ನು ತಿಳಿಸಬಲ್ಲರೇ ಹೊರತು, ಸೈದ್ಧಾಂತಿಕ ಶಿಸ್ತಿನಿಂದ ಸಫಲವಾಗದೇ ಇದ್ದ ರೈತ ಬಂಡಾಯವನ್ನು ಸಫಲವಾಗಿದೆಯೆಂದು ಹೇಳುವುದಕ್ಕಾಗುವುದಿಲ್ಲ.

ಬಂಡಾಯದ ಸೋಲಿನ ಹಿಂದಿರುವ ಕಾರಣಗಳನ್ನವರು ಶೋಧಿಸುತ್ತಾರೆ. ಆದ್ದರಿಂದ ಚೆನ್ನಯ್ಯನವರ ಅಭಿಪ್ರಾಯ ಒಂದು ದೃಷ್ಟಿಯಿಂದ ಸರಿಯೆನ್ನಿಸಿದರೂ ಕೂಡಾ ಅದೇ ಸಮರ್ಪಕವಾಗಲಾರದು. ರೈತ ಬಂಡಾಯಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟು ಚಿಕ್ಕದೇವರಾಜ ಮತ್ತು ವಿಶಾಲಾಕ್ಷ ಪಂಡಿತರ ರಾಜಕೀಯ ತಂತ್ರಗಳನ್ನು ನಾಟಕಕಾರ ಹಿಂದೆ ತಳ್ಳಿದ್ದರೆ ಅದು ನಿಜವಾದ ಚರಿತ್ರೆಯ ಪ್ರಕ್ರಿಯೆಯಾಗದೆ ; ಇವತ್ತಿನ ಬೀದಿ ನಾಟಕದ ಹಾಗೆ ಇರುತ್ತಿತ್ತು. ನನಗೆ ತಿಳಿದಂತೆ ಇಲ್ಲಿ ನಾಟಕಕಾರ ತುಂಬಾ ಪ್ರಾಮುಖ್ಯನಾಗಿ ಕಾಣುತ್ತಾನೆ. ಅನೇಕ ಸೂಕ್ಷ್ಮ ಸಂಗತಿಗಳನ್ನು ಪ್ರಕಟಿಸುತ್ತಾನೆ. ರೈತ ಬಂಡಾಯದ ಪರಂಪರೆ ಬೆಳವಣಿಗೆಯ ಬಗೆಗೆ ನಾಟಕಕಾರನಿಗೆ ಅತ್ಯಂತ ಕಾಳಜಿಯಿದೆ. ಅಂತೆಯೇ ಆತ ಐತಿಹಾಸಿಕ ನಾಟಕವೊಂದರಲ್ಲಿ ಅದನ್ನು ಕಾಣಲು ಪ್ರಯತ್ನಿಸುತ್ತಾನೆ. ಆದರೆ ಈ ಬಂಡಾಯ ಸೈದ್ಧಾಂತಿಕ ಶಿಸ್ತಿನಲ್ಲರಳದೆ– ಜೋಗಿ ಜಂಗಮರ ಸ್ವಾರ್ಥದ ಜೋಳಿಗೆಯಲ್ಲಿ ಮುಚ್ಚಿಕೊಂಡು ಬಿಡುತ್ತದೆ. ಈ ಸತ್ಯವನ್ನು ಆತ ನಿರಾಕರಿಸುವಂತಿಲ್ಲ. ಈ ಎಲ್ಲ ಅಂಶಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸುವುದರ ಮೂಲಕ ನಿಜವಾದ ಬಂಡಾಯದ ನೆಲೆಯನ್ನೂ ಆತ ಇಲ್ಲಿ ಪರೋಕ್ಷವಾಗಿ ಪ್ರಕಟಿಸುತ್ತಾನೆ. ಮುನ್ನುಡಿಯ ಕೊನೆಯಲ್ಲಿ ಹೇಳುವ ಚೆನ್ನಯ್ಯನವರ ಮಾತುಗಳು ಈ ನಾಟಕದ ಬಗೆಗಿನ ಸ್ಪಷ್ಟ ಚಿತ್ರಣಗಳಾಗಿವೆ.

"ಹಳಿಮನೆಯವರ ಮೊದಲ ನಾಟಕವಾದ 'ಚಿಕ್ಕದೇವಭೂಪ' ಉಳಿದ ಸಾಂಪ್ರದಾಯಿಕ ಚಾರಿತ್ರಿಕ ನಾಟಕಗಳಿಂದ ಭಿನ್ನವಾಗಿದೆ. ಅವರು ರಾಜತ್ವವನ್ನು ವೈಭವೀಕರಿಸದೆ, ಸಂಸ್ಕೃತಿಯ ವಾರಸುದಾರರು ರಾಜರೇ ಎಂದು ಆದರ್ಶೀಕರಿಸದೆ, ಅವರ ಕೃತ್ಯಗಳನ್ನು ವೀರ ಕಾರ್ಯಗಳೆಂಬಂತೆ ಉತ್ಪ್ರೇಕ್ಷಿಸಿ ಚಿತ್ರಿಸದೆ, ಚರಿತ್ರೆಯನು ಸರಿಯಾದ ಪ್ರಗತಿಪರ ದೃಷ್ಟಿಯಲ್ಲಿ ಕಂಡು ನಾಟಕವಾಡಿಸುವ ಪ್ರಾಮಾಣಿಕ ಪ್ರಯತ್ನದಲ್ಲಿ ತೊಡಗಿರುವುದು ವಿಶಿಷ್ಟ ಅಂಶವಾಗಿದೆ" ಎನ್ನುವಲ್ಲಿ ನಾಟಕದ ಪದಾರ್ಥವನ್ನು ಕುರಿತಂತೆ ಮೂಡಿ ಬಂದ ನೈಜ ವಿಶ್ಲೇಷಣೆಯಾಗಿದೆ.

ಅಂದಿನ ಸಂದರ್ಭದಲ್ಲಿಯೇ ರೈತರು ಜಾಗೃತರಾಗಿ ಪ್ರಭುತ್ವದಿಂದುಂಟಾಗುವ ಅನಾಹುತವನ್ನು ಅರಿತು ದಬ್ಬಾಳಿಕೆಯ ವಿರುದ್ಧ ದನಿ ಎತ್ತಿ ನಿಲ್ಲುವುದು ಇಂದಿಗೂ ಕೂಡ ತುಂಬಾ ಪ್ರಸ್ತುತವೆನಿಸುತ್ತದೆ,

''ಸತ್ತವರು ನಾವಲ್ಲ । ಸಾವೆಂದೂ ನಮಗಿಲ್ಲ ।
ಸತ್ತರೂ ಹುಟ್ಟುವೆವು । ಮತ್ತೆ ಮತ್ತೆ । ಮತ್ತೆ ಮತ್ತೆ''

ಎಂಬಂತಹ ಕಂಸಾಳೆಯ ಹಾಡಿನೊಂದಿಗೆ ಮುಕ್ತಾಯವಾಗುವ ಈ ನಾಟಕದಲ್ಲಿ ನಾಟಕಕಾರರು ಆಶಾದಾಯಕವಾದ ಬೆಳವಣಿಗೆಯನ್ನು ಸೂಚಿಸಿದ್ದಾರೆ. ಇಷ್ಟೆಲ್ಲ ಗೊಂದಲ

ಸ್ವಾರ್ಥಗಳ ನಡುವೆಯೂ ಇಂದಿಲ್ಲ ನಾಳೆ ಹೋರಾಟಕ್ಕೆ ಜಯ ಸಿಗಬಲ್ಲದೆಂಬ ಆಶಯವನ್ನು ಇಲ್ಲಿ ನಾಟಕಕಾರ ವ್ಯಕ್ತಪಡಿಸಿದ್ದಾರೆ.

o o o o o o

ಹಳೆಮನೆಯವರ ಇನ್ನೊಂದು ಐತಿಹಾಸಿಕ ನಾಟಕ '**ಹೈದರ್**'. ಹದಿನೆಂಟನೆಯ ಶತಮಾನದಲ್ಲಿದ್ದ ಮೈಸೂರ ಪ್ರಾಂತ್ಯದ ನವಾಬ ಹೈದರಾಲಿಗೆ ಸಂಬಂಧಿಸಿದ್ದು. ಇಲ್ಲಿಯೂ ಕೂಡ ನಾಟಕಕಾರರು ಕೇವಲ ಹೈದರಾಲಿಯ ವ್ಯಕ್ತಿತ್ವ ವರ್ಣನೆಗೆ ಕೈಹಾಕದೆ ; ಸಾಮಾನ್ಯ ಕುದುರೆ ಸವಾರನ ಮಗನೊಬ್ಬ ನವಾಬನಾಗಿ ಬೆಳೆಯುವ ಕ್ರಮವನ್ನು ಕುರಿತು ಆಲೋಚಿಸುತ್ತಾರೆ. ಅನಕ್ಷರಸ್ಥನಾದ ಹೆಬ್ಬೆಟ್ಟಿನ ಸಹಿ ಹಾಕುವ ಹೈದರ್, ಏಕಕಾಲಕ್ಕೆ ಒಳಗಿನ ಮತ್ತು ಹೊರಗಿನ ಶತ್ರುಗಳನ್ನು ಮೆಟ್ಟಿ ನಿಲ್ಲುತ್ತಾನೆ. ಸಾಮಾನ್ಯ ಸೈನಿಕನೊಬ್ಬ ನಿಷ್ಠೆ, ಪರಾಕ್ರಮ, ಮುಂದಾಲೋಚನೆಯಿಂದ ಹೇಗೆ ಮುಂದೆ ಸಾಗಬಲ್ಲ, ಇತಿಹಾಸದ ವ್ಯಕ್ತಿಯಾಗಬಲ್ಲನೆಂಬುದನ್ನಿಲ್ಲಿ ಒತ್ತು ಕೊಟ್ಟು ಹೇಳಿದ್ದಾರೆ. ಊಳಿಗಮಾನ್ಯ ಸಂಸ್ಕೃತಿಯಲ್ಲಿ ಬೆಳೆದು ನಿಂತಿರುವ ಸ್ವಾರ್ಥ–ದಾಹಗಳ ಪರಿಯನ್ನು ಹೇಳುತ್ತ ಅದಕ್ಕೆ ಉತ್ತರವಾಗಿ ಪ್ರತಿಭಟನೆ,' ಬಂಡಾಯದ ಅಂಶಗಳನ್ನು ಹೈದರನಂತಹ ಒಂದು ಪಾತ್ರನಿಷ್ಠ ಹಿನ್ನೆಲೆಯಲ್ಲಿ ವಿವೇಚಿಸುತ್ತಾರೆ.

ಮೈಸೂರು ಸಂಸ್ಥಾನದ ರಾಜಧಾನಿ ಶ್ರೀರಂಗಪಟ್ಟಣ, ಅಂದು ರಾಜಕೀಯದ ಆಯಕಟ್ಟಿನ ಸ್ಥಳವಾಗಿತ್ತು. ಮರಾಠರು, ನಿಜಾಮ, ಮಲಬಾರಿನ ನಾಯರ್ ಹೀಗೆ ಎಲ್ಲರ ಕಣ್ಣೂ ಮೈಸೂರು ಸಂಸ್ಥಾನದ ಮೇಲೆ. ಇಡೀ ದೇಶದಲ್ಲಿ ಮೊಗಲರು ಕ್ಷೀಣಿಸಿ ಮರಾಠರು ಪ್ರಬಲರಾಗುತ್ತಿದ್ದ ಕಾಲವದು. ಬ್ರಿಟೀಷರ ಆಕ್ರಮಣ ತೀವ್ರವಾಗುತ್ತ. ಅರಸೊತ್ತಿಗೆ ವಂಶ ಪಾರಂಪರ್ಯವಾಗಿದ್ದರಿಂದ ಎಲ್ಲ ಸಿಂಹಾಸನಗಳಲ್ಲಿಯೂ ಹೆಸರಿಗೆ ಮಾತ್ರ ರಾಜ ; ಅಧಿಕಾರ ಇರುವುದು ದಳವಾಯಿಗಳ ಕೈಯಲ್ಲಿ. ಇದಕ್ಕೆ ಮೈಸೂರು ಸಂಸ್ಥಾನವೂ ಹೊರತಾಗಿರಲಿಲ್ಲ. ಇಮ್ಮಡಿ ಕೃಷ್ಣರಾಜ ಹೆಸರಿಗೆ ಮಾತ್ರ ಅರಸ.' ಸದಾ ಕೈಯಲ್ಲಿ ಮದಿರೆ, ಸುತ್ತ–ಮುತ್ತ ಮಾನಿನಿಯರು. ಈ ಸದಾವಕಾಶವನ್ನುಪಯೋಗಿಸಿಕೊಂಡು ಸಂದರ್ಭದ ಲಾಭ ಪಡೆದವರು ಕಳಲೆಯ ನಿವಾಸರಾದ ನಂಜರಾಜ, ಸರ್ವಾಧಿಕಾರಿ ಮತ್ತು ಆತನ ಅಣ್ಣ ದೇವರಾಜ ದಳವಾಯಿ. ಕೋಲಾರದ ಬಳಿಯ ಬೂದಿ ಕೋಟೆಯಲ್ಲಿ ಸಾಮಾನ್ಯ ಸೈನಿಕನೊಬ್ಬನ ಮಗನಾಗಿ ಹುಟ್ಟಿದ ಹೈದರ್ ಬೆಂಗಳೂರ ಸೈನ್ಯದಲ್ಲಿ ಸೈನಿಕನಾಗಿ ಸೇರಿ, ನಂಜರಾಜಯ್ಯ ದೇವನಹಳ್ಳಿಯ ಕೋಟೆಗೆ ಮುತ್ತಿಗೆ ಹಾಕಿದಾಗ ಹೈದರ್ ಆತನ ಪರವಾಗಿ ಹೋರಾಡಿ ನಂಜರಾಜಯ್ಯನನ್ನು ಮೆಚ್ಚಿಸಿ ಮೈಸೂರು ಸಂಸ್ಥಾನಕ್ಕೆ ಬರುವುದು, ಅಲ್ಲಿ ತನ್ನ ಪರಾಕ್ರಮ ಮುಂದಾಲೋಚನೆಯಿಂದ ತಿರುಚಿನಾಪಳ್ಳಿಯನ್ನು ವಶಪಡಿಸಿಕೊಂಡು ಸರ್ವಾಧಿ

ಕಾರಿಯ ಮನ್ನಣೆಗೆ ಪಾತ್ರನಾಗುವುದು, ಮುಳ್ಳನ್ನು ಮುಳ್ಳಿನಿಂದಲೇ ತೆಗೆಯುವ ಉದ್ದೇಶದಿಂದ ಇತ್ತ ಲಕ್ಷ್ಮಮ್ಮಣಿ ಮತ್ತು ಖಂಡೇರಾಯರೊಂದಿಗೆ ಶಾಮೀಲಾಗಿ ನಂಜರಾಜಯ್ಯನನ್ನು ಸರ್ವಾಧಿಕಾರದಿಂದ ಕೆಳಗಿಳಿಸುವುದು. ಖಂಡೇರಾಯ ದ್ರೋಹ ಬಗೆದಾಗ ಸಂಯಮದಿಂದ ಸೈನ್ಯ ಸಜ್ಜುಗೊಳಿಸಿ ಮೈಸೂರು ಪ್ರಾಂತದ ನವಾಬನಾಗುವುದು. ಹೊರಗಡೆಯಿಂದ ಧಾಳಿ ನಡೆಸಲೆತ್ನಿಸಿದ ಬ್ರಿಟೀಷರಿಗೆ ಸಿಂಹ ಸ್ವಪ್ನವಾಗುವದು ಈ ಮುಂತಾದ ನಿರಂತರ ಸಾಧನೆಗಳಲ್ಲಿ ಹೈದರ್ ತನ್ನನ್ನು ತೊಡಗಿಸಿಕೊಳ್ಳುತ್ತಾನೆ. ಹೈದರ್ ತನ್ನ ಕೊನೆಯ ಕಾಲದಲ್ಲಿ ತಾನು ಕೊಳ್ಳೆ ಹೊಡೆದಿರುವ ಹಣವನ್ನು ಸೈನಿಕರಿಗೆ ಹಂಚಿ ಬಿಡುತ್ತಾನೆ. ಟಿಪ್ಪು ಮಲಬಾರಿನಲ್ಲಿ ಯುದ್ಧ ಮಾಡುತ್ತಿದ್ದಾಗ ಹೈದರ್ ಕೊನೆಯುಸಿರೆಳೆಯುವ ಸಂದರ್ಭದಲ್ಲಿ ಟಿಪ್ಪುವೇ ಉತ್ತರಾಧಿಕಾರಿಯಾಗಬೇಕೆಂದು ಪೂರ್ಣಯ್ಯನಲ್ಲಿ ಹೇಳುತ್ತಾನೆ. ಚರಿತ್ರೆಯ ಈ ಎಲ್ಲ ಅಂಶಗಳ ಮುಖಾಂತರ ನಾಟಕಕಾರ ಸಮಕಾಲೀನ ಕಾಳಜಿಗಳ ಕಡೆಗೆ ಗಮನ ಹರಿಸುತ್ತಾರೆ. ಇದನ್ನೆಲ್ಲಾ ಗಮನಿಸಿದಾಗ ಹೈದರ್, ಇವತ್ತಿನ ಒಬ್ಬ ಚಾಣಾಕ್ಷ ರಾಜಕಾರಣಿಯಂತೆ ಕಾಣಿಸುತ್ತಾನೆ. ಹೀಗಾಗಿ ಹೈದರನಿಗೆ ಅನೇಕ ಮಿತಿಗಳಿವೆ. ಇವತ್ತಿನ ಪ್ರಜಾಸತ್ತಾತ್ಮಕ ನೆಲೆಯಲ್ಲಿ ನಿಂತು ಅವನ ವ್ಯಕ್ತಿತ್ವವನ್ನಳೆಯುವಂತಿಲ್ಲ. ಅವತ್ತಿನ ಸಂದರ್ಭದಲ್ಲಿ ರಾಜಸತ್ತೆಯ ಅಹಂಭಾವ, ಸರ್ವಾಧಿಕಾರಿಗಳ ದಬ್ಬಾಳಿಕೆ, ತೀವ್ರವಾಗಿದ್ದ ಸಂದರ್ಭದಲ್ಲಿ ಒಬ್ಬ ಸಾಮಾನ್ಯ ಸೈನಿಕನಾದ ಹೈದರ್ ಹೇಗೆ ಇವೆಲ್ಲ ಸಮಸ್ಯೆಗಳಿಗೆ ಉತ್ತರವಾಗುತ್ತನೆಂಬುದು ಮಾತ್ರ ಮುಖ್ಯವಾಗುತ್ತದೆ. ಈ ಅಂಶವನ್ನೇ ನಾಟಕಕಾರರಿಲ್ಲಿ ವಸ್ತುನಿಷ್ಠವಾಗಿ ವಿಶ್ಲೇಷಿಸಿದ್ದಾರೆ.

"ಚಾಚಾ ಈ ಹೈದರ್‌ಗೆ ಒಳ್ಳೇದು ಮಾಡೋದು, ಕೆಟ್ಟದು ಮಾಡೋದು ಈ ಹೈದರ್ ಮಾತ್ರಾನೇ. ನನ್ ಪಾಲಿಗೆ ಅಲ್ಲಾನೂ ಇಲ್ಲ. ಮುಲ್ಲಾನೂ ಇಲ್ಲ" ಎನ್ನುವ ಹೈದರ್‌ನ ಈ ಮಾತಿನಲ್ಲಿ ಮನುಷ್ಯನ ಸ್ವಪ್ರಯತ್ನದ ಬಗೆಗಿನ ನಂಬಿಕೆಯಿದೆ. ಮತಾಂಧ ಸಮಾಜ ವ್ಯವಸ್ಥೆಯಲ್ಲಿ ಬೆಳೆದು ಬಂದ ಹೈದರ್, ಅಂದಿನ ಸಂದರ್ಭದಲ್ಲಿ ಹೇಳುವ ಈ ಮಾತುಗಳು ಇಂದಿಗೂ ಪ್ರಸ್ತುತವೆನಿಸುತ್ತವೆ. ಅಧಿಕಾರದ ದಾಹ ಎಂತಹ ಕ್ರೂರವಾದದ್ದೆಂಬುದನ್ನು ಇಲ್ಲಿ ಸ್ಪಷ್ಟಗೊಳಿಸಲಾಗಿದೆ. ಸರ್ವಾಧಿಕಾರಿಯಾಗಿದ್ದ ನಂಜರಾಜಯ್ಯನ ಮುಖಾಂತರವೇ ನಾಟಕಕಾರರು ಈ ಮಾತುಗಳನ್ನಾಡಿಸುತ್ತಾರೆ.

"ಅಧಿಕಾರದ ಆಸೆ ಎಂತೆಂಥವರನ್ನೂ ಬಲಿ ತೆಗೆದುಕೊಂಡು ಮಾಡಬಾರದ ಕೆಲಸಗಳನ್ನು ಮಾಡಿಸುತ್ತದೆ. ಈ ವಯಸ್ಸಿನಲ್ಲಿ ಆ ಹಿಂದಿನ ನೆನಪುಗಳ ಭಯದಲ್ಲಿ ನಾನು ಕಾಲ ಕಳೆಯುತ್ತಿದ್ದೇನೆ. ಎಲ್ಲಾ ಸರ್ವಾಧಿಕಾರಿಗಳ ಹಣೆಬರಹವೂ ಹೀಗೆ" ಎಂದು ನಂಜರಾಜಯ್ಯ ಹೈದರನಿಗೆ ಹೇಳುವ ಈ ಮಾತುಗಳ ಮುಖಾಂತರ ನಾಟಕ

ಕಾರ ಇಡೀ ಚರಿತ್ರೆಯನ್ನೇ ಚಲನಶೀಲಗೊಳಿಸುತ್ತಾನೆ. ಸರ್ವಾಧಿಕಾರಿಯಾದವ ನೊಬ್ಬ ವಿಳಾಸವಿಲ್ಲದೆ ಹೋಗುವುದು, ಅಧಿಕಾರ ಕಳೆದುಕೊಂಡ ನಂತರ ತೀವ್ರವಾಗಿ ನರಳುವುದು, ಪಶ್ಚಾತ್ತಾಪ ಪಡುವುದು ಈ ಎಲ್ಲ ಅಂಶಗಳನ್ನು ಯಥಾವತ್ತಾಗಿ ಪ್ರಕಟಿಸುವುದರ ಮೂಲಕ ಪ್ರಸ್ತುತ ಸಮಾಜ ವ್ಯವಸ್ಥೆಯ ಮೇಲೆ ಚರಿತ್ರೆಯ ತೀವ್ರ ಪರಿಣಾಮವನ್ನು ನಾಟಕಕಾರ ಉಂಟುಮಾಡುತ್ತಾನೆ.

ಇತಿಹಾಸದ ಚಕ್ರದಲ್ಲಿ ರಾಜಮಹಾರಾಜರು ಆಳಿ ಹೋಗಿದ್ದಾರೆ. ಅಲ್ಲಲ್ಲಿ ಕೆಲವು ಸಾಮಾನ್ಯರೂ ಅಧಿಕಾರದ ಲಾಭ ಉಂಡಿದ್ದಾರೆ. ಆದರೆ ಒಮ್ಮೆ ಅಧಿಕಾರ ಸಿಕ್ಕ ಮೇಲೆ ಸಿಂಹಾಸನ ದೊರೆತ ಮೇಲೆ ಅದನ್ನೇ ತಿರಸ್ಕರಿಸಿ ಸಮಾಜದಲ್ಲಿ ಸಮಾನತೆ ತರಲು ಪ್ರಯತ್ನಿಸಿದವರು ಬಹಳ ಕಡಿಮೆ. ವಚನಕಾರರು ಮತ್ತು ದಾಸರು ಮಾತ್ರ ಈ ಅಧಿಕಾರದಿಂದ ದೂರವಿದ್ದು ಸಮಾನತೆ ತರಲು ಪ್ರಯತ್ನಿಸಿದರು. ಉಳಿದ ಯಾವುದೇ ಅಳರಸನಾಗಲಿ, ನವಾಬನಾಗಲಿ, ದಳವಾಯಿಯಾಗಲಿ ಎಲ್ಲರೂ ತಮ್ಮ ತಮ್ಮ ಸ್ವಾರ್ಥಕ್ಕಾಗಿ ತಮ್ಮ ತಮ್ಮ ಸುಖಕ್ಕಾಗಿಯೇ ಹೋರಾಡಿದ್ದಾರೆ. ನಾಟಕಕಾರ ಚರಿತ್ರೆಯನ್ನು ಹೀಗೆ ವಸ್ತುನಿಷ್ಠವಾಗಿ ದಾಖಲಿಸುವುದರ ಮೂಲಕ ಈ ಎಲ್ಲ ಅಂಶ ಗಳತ್ತ ಗಮನ ಸೆಳೆಯುತ್ತಾರೆ.

ಇವೆರಡೂ ನಾಟಕಗಳಲ್ಲಿ ತಟಸ್ಥ ಭಾಷೆಯನ್ನು ಬಳಸಲಾಗಿದೆ. ಐತಿಹಾಸಿಕ ನಾಟಕಗಳಿಗೆ ಭಾಷೆ ತಟಸ್ಥವಾಗಿದ್ದಷ್ಟು ಹೆಚ್ಚು ಅನುಕೂಲವೆಂಬುದನ್ನು ನಾಟಕಕಾರ ಮೊದಲೇ ಈ ಭಾಷೆಗೆ ಸಂಬಂಧಿಸಿದಂತೆ ಖಚಿತ ನಿಲುವು ತಾಳಿರುವುದು ಹೆಚ್ಚು ಸೂಕ್ತವಾಗಿ ಕಾಣುತ್ತದೆ. ಈ ನಾಟಕಗಳ ವೈಶಿಷ್ಟ್ಯವೆಂದರೆ ಕಂಸಾಳೆಯ ನಿರೂಪಣಾ ತಂತ್ರವನ್ನು ಕಥೆ ಹೇಳುವುದಕ್ಕಾಗಿ ಬಳಸಿಕೊಂಡಿರುವುದು. ಕಂಸಾಳೆಗೂ ಈ ನಾಟಕ ಗಳಿಗೂ ಸಂಬಂಧವೇ ಇರದಿದ್ದರೂ ಕೂಡ, ಮೈಸೂರು ಪ್ರಾಂತ್ಯದ ಜಾನಪದ ಸೊಗಡಿ ನಿಂದ ಕೂಡಿದ ಕಂಸಾಳೆಯನ್ನು ಇಲ್ಲಿ ಬಳಸಿಕೊಂಡಿರುವುದರಿಂದ ಈ ನಾಟಕಗಳಿಗೆ ಹೆಚ್ಚು ಕಸುವು ದೊರೆತಿದೆ. "ಚಿಕ್ಕದೇವ ಭೂಪ" ಬ್ರೆಕ್ಟ್‌ನ ಎಪಿಕ್ ಥಿಯೇಟರ್ ತಂತ್ರಗಳಿಗೆ ಋಣಿಯಾಗಿದ್ದರೆ, "ಹೈದರ್"ದಲ್ಲಿ ದೂರ ಸಮನ್ವಯದ ತಂತ್ರವನ್ನು ಬಳಸಿಕೊಳ್ಳಲಾಗಿದೆ.

ಕಂಸಾಳೆಯನ್ನು ಬಳಸಿಕೊಳ್ಳುವಲ್ಲಿ ಸಂಭಾಷಣೆಗಳನ್ನು ಹೆಣೆಯುವಲ್ಲಿ, ದೃಶ್ಯ ಗಳ ಜೋಡಣೆಯಲ್ಲಿ ಪಳಿಮನೆಯವರು ಸಾಕಷ್ಟು ಗಮನ ಸೆಳೆಯುತ್ತಾರೆ. ರಂಗ ಭೂಮಿಯೊಂದಿಗೆ ನೇರ ಸಂಪರ್ಕವನ್ನಿಟ್ಟುಕೊಂಡಿರುವ ಪಳಿಮನೆಯವರ ಈ ನಾಟಕ ಗಳು ಪ್ರಯೋಗದ ದೃಷ್ಟಿಯಿಂದಲೂ ಅನುಕೂಲವಾಗಿವೆ. ಚರಿತ್ರೆಯನ್ನು ಅಧಿಕೃತ ವಾಗಿ ದಾಖಲಿಸಿ, ಆ ಮೂಲಕ ಸಮಕಾಲೀನ ಸಾಮಾಜಿಕ ಸಂಗತಿಗಳತ್ತ ಪರೋಕ್ಷ ವಾದ ಬೆಳಕನ್ನು ಮೂಡಿಸುವ ಪಳಿಮನೆ ಇವತ್ತಿನ ಪ್ರಮುಖ ನಾಟಕಕಾರರಾಗಿ ಕಾಣುತ್ತಾರೆ.

ನ್ಯಾಯದ ರೀತಿ

—'ಕಾವ್ಯಜೀವಿ'

ಕಾಗೆಯೊಂದು ಕೋಪಗೊಂಡು
ಕೋಗಿಲೆ ಮರಿಯ ಕತ್ತಿಗೇ ಕುಕ್ಕಿತು.
ಕೋಗಿಲೆಯ ಸ್ವರವೇ–ಒಡೆದು ಕರ್ಕಶವಾಯಿತು.

ಕೋಗಿಲೆಯ ತಾಯಿ
ಖಟ್ಲೆ ಹೂಡಿತು ಕಾಗೆಯ ಮೇಲೆ
'ನಮ್ಮ ದನಿಯೆ ನಮ್ಮ ಆಸ್ತಿ
ಅದುವೆ ಇರದೆ ಬದುಕೆ ನಾಸ್ತಿ
ನಮ್ಮ ಕೊರಳ ಕೊಂದವಗೆ
ಹಾಕಬೇಕು ಜೈಲಿಗೆ'
–ಎಂದು ಹೇಳಿತ್ತು ಜಡ್ಜಿಗೆ !.

ಢವಾಲಿ ಜವಾನ ಮೂರು ಬಾರಿ ಕೂಗಿದ
ಕ್ಲಾರ್ಕು–ಮುಂದಿನ ತೇದಿ ಹೇಳಿದ,
ಅಂತೂ ಇಂತೂ ಕೇಸು ಬಂದು
ವಿಚಾರಣೆಯಾಯಿತು
ಕೋಗಿಲೆ ಮರಿಯ ಕೀರಲು ದನಿಯು
ಸಾಕ್ಷ್ಯ ಕೂಡಾ ಮುಗಿಯಿತು.

ಕಪ್ಪು ಕೋಟುಗಳೆದ್ದು ಕೂತೂ ವಾದವಿಟ್ಟ ಮೇಲೆ
ತುಸುವೆ ಕೆಮ್ಮಿದ ನ್ಯಾಯದೇವ
ಕೇಳಿದ ಪ್ರಶ್ನೆ ಹೀಗೆ–
'ಕಾಗೆಯೊಮ್ಮೆ ಕುಕ್ಕದೆ ಇದ್ದರೆ
ಕೋಗಿಲೆ ಕತ್ತಿನ ಮೇಲೆ,
ಕೋಗಿಲೆ ದನಿ ಜೇನಿಯೆ ಇರುತ್ತಿತ್ತೆನ್ನಲು
ಸಾಕ್ಷ್ಯ ಉಂಟೆ ವಕೀಲರೆ ?'

ತಬ್ಬಿಬ್ಬಾದರು ವಕೀಲರೆಲ್ಲರು ಕೋಗಿಲೆ, ಮರಿ ಕೂಡಾ :
"ಕೋಗಿಲೆ ದನಿ ಹೀಗಿಲ್ಲವು ದೇವರೆ
ಲೋಕದಲ್ಲೆಲ್ಲಿಯೂ ಕೂಡಾ".
"ಹೇಗೆ ಹೇಳುತ್ತೀರಿ ನೀವು
ಹುಡುಕಿದ್ದೀರಾ ಭೂಮಿಯಲಿ ?"
–ನ್ಯಾಯದೇವರ ಎರಡನೆ ಪ್ರಶ್ನೆಗೆ
'ಇಲ್ಲ'ವೆಂದರು ಮೌನದಲಿ :
ಇದ್ದರೆ ಹಾಗೆ, ನಾವಾದರು ಹೇಗೆ
ಶಿಕ್ಷಿಸೋಣ ಹೇಳಿ ಕಾಗೆಗೆ ?
ಅಪರೂಪಕ್ಕೊಮ್ಮೆ ಕೋಗಿಲೆ ದನಿ
ಮೂಡಲೂಬಹುದು ಕಾಗೆಯ ಹಾಗೆ.
ಸಂಶಯ ಲಾಭವು ಕಾಗೆಯ ಪಾಲಿಗೆ
ಬಿಟ್ಟುಬಿಡಿ–ಆವ ಹೋಗಲಿ ಹೊರಗೆ !"
–ತೀರ್ಪನು ಕೊಟ್ಟು ದೇವರು ಎದ್ದು
ಚಾ ಕುಡಿಯಲು ಹೋದರು ಚೇಂಬರಿಗೆ !

ಕೃಷ್ಣಾ ತೀರದ ಕವನಗಳು

—ಜಿ. ಎಂ. ಕುಲಕರ್ಣಿ

೧. ನೆರಳಂತೆ ಉದ್ದಾನುದ್ದ
ಚಾಚಿಕೊಂಡಿರುವ ಈ ಬಂಡೆ
ಗಳ ನಡುವೆ ಚಾಚಿಕೊಂಡಿರುವ
ಮರಳದಂಡೆಯ
ಮೇಲೆ ಕಣ್ಣ ಕಡಾವಿಗೆ
ಯಲ್ಲಿ ಕನಸುಗಳ ಹುರಿಯುತ್ತ
ನಿಂತಿರುವ ನೀನು
ಒಂದು ಮೌನ ದ್ವೀಪದಂತೆ

೨. ಇಲ್ಲಿ ಇದ್ದ
ದಿನ ಪ್ರತಿ ದಿನ ನಿನ್ನ
ಹೆಸರು ಬರೆದರೂ ಈ
ಮರಳ ದಂಡೆಯ ಮೇಲೆ
ಮರುದಿನ ನಿನ್ನ ಹೆಸರಿನ
ಸ್ಥಳದ ಹುಡುಕಾಟ
ನೆನಪಿನ ಜತೆ ನನ್ನ ಹೋರಾಟ
ಕಾಲದ ಜತೆ ವ್ಯರ್ಥ ಸೆಣಸಾಟ

೩. ನದಿಯಲ್ಲಿ ನಾವಿಬ್ಬರೂ ನಿಂತಾಗ
ಕಣ್ಣು ಕಣ್ಣು ಕೂಡಿತು
ಮನಸು ಮನಸು ಮಾತಾಡಿತು
ಹೊರಬಿದ್ದು ಬಂದಾಗ
ತೆರೆಗಳಪ್ಪಳಿಸಿ ದೂರ ದೂರ
ಸರಿಯಿತು

ಪ್ರೇತ

—ಹೊಸೂರು ಮುನಿಶಾಮಪ್ಪ

ನರ ನರಗಳ ಮನೆಕಟ್ಟೋ ಸಾವಿನ ಜೇಡ
ಲಾಲಿಯಾಡುವ ತೂಗುಗತ್ತಿ ಮನುಷ್ಯರಿಗೆ ಜೇಡ
ಮಕರಂದದ ಹೂಗಳೊಳಗೆ ನೆತ್ತರು ಬಸಿವ ಬುಟ್ಟಿ
ರುದ್ರ ಭೂಮಿಗಳೆ ರೌದ್ರ ತಾಳಕೆ
ನಾಚುತ್ತವೆ ಮಣಮಣಗುಟ್ಟಿ

ಅಣು ಅಣು ರಣ ರಣ ರೂಪ ತಾಳಿ ಸಿಡಿದು
ಗಿಲಕಿಯೊಳಗೆ ಢಮ ಢಮ ಸದ್ದು
ಕಡಲು ಆಕಳಿಸಿ ಜೋಸು ಬಾಯಿ ತೆಗೆದು
ಜಿಗಿವ ಮೀನ ನೆಗೆವ ಅಲೆಯ ಹೆಬ್ಬಾವಿನಂತೆ ತಿಂದು
ತಿರಿವ ಅಂಬಿಗರ ಮುಕ್ಕಿ ಹೊಗೆ ಕಕ್ಕಿ ನೊಣೆ ನೊಣೆದು
ಕೂಳಿಲ್ಲದ ಭೂಗೋಳದ ಸುತ್ತಾ ಗಾಳಿ ಸುಳಿಯಲಾರದು

ಕಿಡ್ನಿಯಿಲ್ಲದ ಸಿಡ್ನಿ ; ವಾಸನೆ ತುಂಬಿದ ವಾಷಿಂಗ್‌ಟನ್
ಮಾಸಿಲ್ಲದ ಮಾಸ್ಕೋ ; ಡೋಲಿಲ್ಲದ ಡೆಲ್ಲಿ
ಡೋಲಾಗುತಾವೆ ಜೋಲಾಗುತಾವೆ
ಜಾಲಿ ಮರದ ನೆರಳಾಗುತಾವೆ

ನಾಳೆನೊರೆವ ಕಹಳೆಗಳಿಗೆ
ಲಿಬಿ ಲಿಬಿ ಪಾರಿವಾಳ ಮೂಕಸಾಕ್ಷಿ
ಹೂಣು ತುಂಬಿದ ಕೆರೆಗಳಂತೆ
ಪಿತ ಪಿತ ಹೆಣಗಳ ರಾಶಿ

ಯಾಗ ಭೋಗಗಳು ಲಗಾಮಿಲ್ಲದಾದವು
ಬಾಂಬ್ ದನಿಗೆ ಗರ್ಭಗಳು ಬಿರುಕು ಬಿಟ್ಟವು
ನಭೋ ಮಂಡಲ ಮೊಟ್ಟೆಯಂತೆ
ಫಟೀಂದು ಲಘೋಲಘೋ ರಕ್ತಪಾತ
ಅಳಿದುಳಿದ ಚಿಟ್ಟೆ ಮುಂಡೆಯರ ನೆತ್ತಿ ನೆಕ್ಕೊ ಪ್ರೇತ!

ಹುಟ್ಟುವುದು ನಿಜ ಕವನ

—ಅಳಗುಂಡಿ ಅಂದಾನಯ್ಯ

ಭಾವಚೈತ್ರ ಚುಂಬಿಸಿ ಚಿಗಿತ
ಚಿಗುರು ಮೃದು ಮಧುರ
ಮನದೆಲೆಯ ಮರೆಯಲ್ಲಿ ಕಾವ್ಯ
ಕೋಗಿಲೆ ಕೊರಳೆತ್ತಿ ಹಾಡಿದಾಗ
ಹುಟ್ಟುವುದು ನಿಜ ಕವನ ॥ ೧ ॥

ಅಂಗಳನ ತಂಗಿರಣಗಳ ತೊಡೆ
ಬಳಸಿ ಬಳಿ ಬಂದ
ತಂಗಾಳಿಯಂಗೈ ತಾಕಿದಂಗಾಂಗದಲ್ಲಿ
ಸಳಸಳ ಪುಳಕ ಪುಟಿದೇಳುವಾಗ....
ಹುಟ್ಟುವುದು ನಿಜ ಕವನ ॥ ೨ ॥

ಕನಸುಗಳ ಕಸೂತಿ ಹೆಣೆದ
ಬಾಳ ಬಟ್ಟೆಯ ಮೇಲೆ ಒರೆ
ಕೊಟ್ಟು ಸುಟ್ಟ ಕಟು ವಾಸ್ತವದ
ಕ್ರೌರ್ಯ ಕಂಡುಂಡು ಕಂಗಾಲಾದಾಗ
ಹುಟ್ಟುವುದು ನಿಜ ಕವನ ॥ ೩ ॥

ಒಡಲಾಳದೊಳಗಿನ ವೇದನೆಗಳು
ಸಂವೇದನೆಗಳಾಗಿ ನಿವೇದನೆಗೆ
ನಡಕಟ್ಟಿ ನಿಂತು ಕಟ್ಟೆಚ್ಚರದ ಕೈಯಲ್ಲಿ
ನುಡಿಕಟ್ಟುಗಳ ಜುಟ್ಟು ಒಡಿದಾಗ
ಹುಟ್ಟುವುದು ನಿಜ ಕವನ ॥ ೪ ॥

ಕಾಣದೆ ಕಾಡಿಸಿ, ಕಾಣಿಸಿ ಅಣಗಿಸಿ
ಆಟವನಾಡುವ ಅದ್ಭುತ ಕಿಲಾಡಿ
ಅಗೋಚರ ಧೂರ್ತ ಅಮೂರ್ತ ಭಾವ
ಭಾಷೆಯ ವೇಷ ತೊಟ್ಟಾಗ
ಹುಟ್ಟುವುದು ನಿಜ ಕವನ ॥ ೫ ॥

ನವ್ಯೋತ್ತರ ಸಾಹಿತ್ಯದ ಇತ್ತೀಚಿನ ಒಲವುಗಳು

—ಆರ್. ವಿ. ಭಂಡಾರಿ

"ನವ್ಯೋತ್ತರದ ಸಾಹಿತ್ಯದ ಇತ್ತೀಚಿನ ಒಲವುಗಳು" ಎಂಬ ವಿಚಾರವಾಗಿ ಸಂಕ್ಷಿಪ್ತವಾಗಿ ನನ್ನ ಅಭಿಪ್ರಾಯವನ್ನು ಪ್ರಸ್ತುತಪಡಿಸಲು ನನ್ನನ್ನು ಕೇಳಲಾಗಿದೆ. ಹೀಗೆ ಕೇಳುವಾಗ ನವ್ಯ ಮತ್ತು ನವ್ಯೋತ್ತರ ಎಂದು ಸಾಹಿತ್ಯದಲ್ಲಿಯ ಎರಡು ಮಜಲನ್ನು ಕಾರ್ಯಕರ್ತರು ಗುರುತಿಸಿಕೊಂಡಿದ್ದಾರೆ ಎನ್ನುವುದೊಂದು ಸ್ಪಷ್ಟ. ಅದರೊಟ್ಟಿಗೆ ಇತ್ತೀಚೆಗೆ ಏನೋ ಬದಲಾವಣೆ ಕೂಡ ಬರುತ್ತಿದೆ ಎಂಬ ಅಭಿಪ್ರಾಯ ಈ ಮೇಲಿನ ತಲೆಬರಹದಲ್ಲಿ ಇದೆ ಎಂಬುದು ಅಂತರ್ಗತವಾಗಿ ಹೊಳೆಯುತ್ತದೆ. ಹಾಗಿದ್ದರೆ ಆ ಬದಲಾವಣೆ (?) ಎಂತಹದು ಎಂಬ ಕುತೂಹಲವನ್ನು ಉಂಟುಮಾಡಿದ್ದಾರೆ. ಅದನ್ನು ಒಪ್ಪಿಕೊಂಡೇ ಅದರ ವಿವರಣೆಯನ್ನು ಕೊಡುವುದು ನನ್ನ ಜವಾಬ್ದಾರಿ ಎಂದುಕೊಳ್ಳುತ್ತೇನೆ.

ಸಾಹಿತ್ಯ ತಾನು ಅಸ್ತಿತ್ವಕ್ಕೆ ಬಂದ ಮೇಲೆ ಒಂದು ಸ್ವಾತಂತ್ರ್ಯವನ್ನು ಪಡೆಯುತ್ತದಾದರೂ ಅದರ ಹುಟ್ಟು ತನ್ನಿಂದ ತಾನೇ ಸ್ವಯಂಭೂ ಅಲ್ಲ. ಯಾವುದೇ ಪಣೆಪಟ್ಟಿಯ ಅಡಿಯಲ್ಲಿ ವಿಮರ್ಶಕ ವಿಭಜನೆಗೆ ಒಳಗಾಗುವ ಸಾಹಿತ್ಯದ ಅಡಿಯಲ್ಲಿ ಒಂದು ಚರಿತ್ರೆಯ ಚಲನೆ ಇದ್ದೇ ಇರುತ್ತದೆ. ಚರಿತ್ರೆಯ ಮೂರ್ತರೂಪ ಸಮಾಜವೇ ಆಗಿರುವುದರಿಂದ ಆ ಆ ಕಾಲದ ಸಾಹಿತ್ಯದ ಒಡಲಿನಲ್ಲಿ ಆ ಕಾಲದ ಚರಿತ್ರೆಯ ನಡೆ ಅಥವಾ ಆ ಕಾಲದ ಸಮಾಜದ ಜೀವಂತಿಕೆ ಅಂತರ್ಗತವಾಗೇ ಇರುತ್ತದೆ. ಇದಕ್ಕೆ ನವ್ಯವೂ ಹೊರತಲ್ಲ ; ನವ್ಯೋತ್ತರವೂ ಹೊರತಲ್ಲ. ಆದ್ದರಿಂದ ಸಾಹಿತ್ಯದ ವಿಶ್ಲೇಷಣೆಯೆಂದರೆ ಆ ಕಾಲದ ಸಮಾಜದ ವಿಮರ್ಶೆಯೂ ಆಗಿರುತ್ತದೆ. ಆ ಸಮಾಜದ ತಾತ್ವಿಕತೆ ಕಾಲದ ರಾಜಕೀಯದಲ್ಲಿ ಘನೀಭೂತ ಹೊಂದುವುದರಿಂದ ಸಾಹಿತ್ಯದ ವಿಶ್ಲೇಷಣೆ ಆ ಕಾಲದ ರಾಜಕೀಯದ ವಿಮರ್ಶೆಯೂ ಆಗುತ್ತದೆ. ಹೀಗೆ ಸಾಹಿತ್ಯದ ಉದ್ಭವ ಸಾಂಸ್ಕೃತಿಕ–ತಾತ್ವಿಕತೆ ಮತ್ತು ರಾಜಕೀಯವನ್ನೊಳಗೊಂಡ ಸಾಮಾಜಿಕ ವ್ಯವಸ್ಥೆಯೊಡನೇ ತನ್ನ ಕರುಳುಬಳ್ಳಿ ಸಂಬಂಧ ಸ್ಥಾಪಿಸಿಕೊಳ್ಳುತ್ತದೆ. ಆದರಿಂದ ನವ್ಯ, ನವ್ಯೋತ್ತರವನ್ನು ಅರಿವಾಗ ಆ ಕಾಲದ ರಾಜಕೀಯದ ಒಳಸೆಳೆತಗಳನ್ನು ಅರಿಯದೇ ಗತಿಯಿಲ್ಲ.

'ನವ್ಯ' ಸಾಹಿತ್ಯದ ವಿಮರ್ಶೆ, ವಿಶ್ಲೇಷಣೆ, ವ್ಯಾಖ್ಯಾನ ಚರ್ವಿತ ಚರ್ವಣವಾಗಿ ನಡೆದಿದೆ. ಆದರೂ ಇನ್ನೂ ಅಲ್ಲಿ ಏನೊ ಇದೆ ಎಂದು ನನಗನ್ನಿಸುತ್ತಿದೆ.

ತಮ್ಮನ್ನು ತಾವು ಸಮರ್ಥಿಸಿಕೊಳ್ಳಲೆಂದು ಮಾಡುವ ನವ್ಯರ ವಿಮರ್ಶೆ ಒಂದು ಥರ, ನವ್ಯೋತ್ತರವನ್ನು ಸಮರ್ಥಿಸಿಕೊಳ್ಳಲೆಂದು ನವ್ಯರ ಮೇಲೆ ಮಾಡುವ ವಿಮರ್ಶೆ ಇನ್ನೊಂದು ಥರ, ಆದರೆ ನವ್ಯೋತ್ತರ ಪ್ರಾದುರ್ಭಾವದ ಅವಶ್ಯಕತೆ ಏಕುಂಟಾಯಿತು ಎಂಬ ಆತಂಕದಲ್ಲಿ ತನ್ನನ್ನು ತಾನು ಅರಿತುಕೊಂಡು ತನ್ನ ನಡೆಯನ್ನು ವಿಸ್ತರಿಸಿಕೊಳ್ಳುವ ಜಾಗ್ರತಿಯಲ್ಲಿ ನವ್ಯದ ವಿಮರ್ಶೆಯನ್ನು ನಡೆಸುವುದು ನವ್ಯೋತ್ತರದ ಇತ್ತೀಚಿನ ಪ್ರಬಲ ವಾದ ಬಲವಾಗಿದೆ. ಆದ್ದರಿಂದ ಇತ್ತೀಚಿನ ವಿಮರ್ಶೆ ಏಕಮುಖವಾಗಿರದೇ ತಾನು ಮತ್ತೊಂದರೊಡನೆ ಮುಖಾಮುಖಿಯಾಗುವ ಪಕ್ಕಾತನದ ವಿಧಾನವಾಗಿದೆ. ಈ ದೃಷ್ಟಿಯಿಂದಲೇ ನಾನು ನವ್ಯ ಕಾಲದ ಹಿಂದು ಮುಂದಿನ ಸಾಮಾಜಿಕ ಚಲನವಲನವನ್ನು ನೋಡ ಬಯಸುತ್ತೇನೆ.

ಸ್ವಾತಂತ್ರ್ಯ ಹೋರಾಟದ ನೇತೃತ್ವವನ್ನು ಹಿಡಿದ ಮಹಾತ್ಮಾ ಗಾಂಧೀಜಿ ಭಾರತೀಯರ ಮುಂದೆ ಒಂದು ಹೊಸ ಕನಸನ್ನು ನಿರ್ಮಿಸಿದ್ದರು. ಅವರು ಮುಂದಿಟ್ಟ ರಾಮರಾಜ್ಯದ ಕಲ್ಪನೆಯ ಸ್ಪಷ್ಟರೂಪ ಏನೆಂದು ನನಗೆ ಗೊತ್ತಿಲ್ಲ. ಆದರೆ ಅವರು ಒಂದು ಕಲ್ಯಾಣ ರಾಜ್ಯದ ಕನಸನ್ನು ಕೊಟ್ಟಿದ್ದರು. ಅಲ್ಲಿಯವರೆಗೂ ಉದಯೋನ್ಮು ಬಂಡವಾಳಶಾಹಿ ಮತ್ತು ಪ್ರಬಲವಾಗಿದ್ದ ಜಮೀನ್ದಾರಿ ಪ್ರತಿನಿಧಿಗಳ ಕೈಯಲ್ಲಿದ್ದ ರಾಜಕೀಯವನ್ನು ಗಾಂಧೀಜಿ ರೈತ, ಕೂಲಿಕಾರ, ದೀನ ದಲಿತನ ಮನೆಗೂ ತಂದರು. ಸಮಾಜದ ಕೊನೆಯವರೆಗೂ ಗಾಂಧೀಜಿ ರಾಜಕೀಯ ಪ್ರಜ್ಞೆಯನ್ನು ತಂದರು. ಇಂದಿಗೂ ಭಾರತದಲ್ಲಿ ಉಳಿದೆಡೆಯಾದಂತೆ ಸರ್ವಾಧಿಕಾರವನ್ನು ತರುವದು ಸುಲಭದ ಮಾತೇನೂ ಆಗಿಲ್ಲ ಎಂಬುದು, ಗಾಂಧೀಜಿಯ ರಾಜಕೀಯದ ಶ್ರೇಷ್ಠತೆಯಾಗಿದೆ. ಆದರೆ ಇದಕ್ಕಾಗಿ ಗಾಂಧೀಜಿ ಆರಿಸಿಕೊಂಡ ಮಾರ್ಗ ಮಾತ್ರ ಧಾರ್ಮಿಕವಾದುದು. ಈ ಆದರ್ಶವಾದದ ಸಿದ್ಧಾಂತ ದೇಶದ ಬಂಡವಾಳಶಾಹಿಗಳಿಗೂ, ಜಮೀನ್ದಾರರಿಗೂ, ಮೇಲು ಮಧ್ಯಮ ವರ್ಗಕ್ಕೂ ಅಡ್ಡಿಯೇನೂ ಆಗಿರಲಿಲ್ಲ. ಆಗಲೇ ಟಿಲಕರು ರಾಜಕೀಯ ವಿಮೋಚನೆಗೆ ಧರ್ಮದ ಬೆಂಬಲ ಪ್ರಸ್ತಾಪವಾಗಿಸಿಬಿಟ್ಟಿದ್ದರು. ಗಾಂಧೀಜಿ ಅದನ್ನು ಉದಾರಗೊಳಿಸಿದರು. ಇದರಿಂದ ಸಾಂಸ್ಕೃತಿಕ ಮುಖವಾಣಿಯಾದ ನಮ್ಮ ಕವಿಗಳು 'ಕಟ್ಟುವೆವು ನಾವು ಹೊಸ ನಾಡೊಂದನು' ಎಂದು ಉತ್ಸಾಹಿತವಾಗಿ ಹಾಡಿದವು. ಆದರೆ ಸ್ವಾತಂತ್ರ್ಯ ಬಂದ ಮೇಲೆ ಈ ಕನಸು ನುಚ್ಚುನೂರಾಯಿತು. ಇಲ್ಲಿಯವರೆಗೂ ಹಸುವಿನ ಮುಖದಲ್ಲಿ ಸಭ್ಯವಾಗಿದ್ದ ಹುಲಿಗಳು ತಮ್ಮ ನಿಜರೂಪ ತೋರಿದರು. ಗಾಂಧೀಜಿಯ ಗೌರವಾರ್ಹ ಹಿಂಬಾಲಕರಾದ ಕೊಂಡ ವೆಂಕಟಪ್ಪಯ್ಯ ಗಾಂಧೀಜಿಗೆ ಬರೆದ ಒಂದು ಪತ್ರ ಹೀಗಿದೆ.

....ನನ್ನ ಸಂಸ್ಥಾನದ ಸ್ಥಿತಿ ಚಿಂತಾಜನಕವಾಗಿದೆ. ರಾಜಕೀಯ ಅಧಿಕಾರದ ರುಚಿ ಇವರ ತಲೆಗೆ ಏರಿಬಿಟ್ಟಿದೆ. ಕಾಂಗ್ರೆಸ್ ವಲಯಗಳಲ್ಲಿನ ನಡವಳಿಕೆ, ಸ್ವಂತಕ್ಕಾಗಿ ಹಣ

ಮಾಡಲು ಎಂ. ಎಲ್. ಎ. ಗಳಿಗೂ ಎಂ. ಎಲ್. ಸಿ. ಗಳಿಗೂ ತೋರುತ್ತಿರುವ ವ್ಯಗ್ರತೆ ಮಂತ್ರಿಗಳ ದೌರ್ಬಲ್ಯ ಇವೆಲ್ಲವೂ ಸೇರಿ ಜನರಲ್ಲಿ ತಿರಸ್ಕಾರವನ್ನು ಹುಟ್ಟಿಸಿವೆ. ಇದಕ್ಕಿಂತ ಬ್ರಿಟಿಶ್ ಸರಕಾರ ಚೆನ್ನಾಗಿತ್ತು ಎಂದು ಜನರು ಹೇಳಲಾರಂಭಿಸಿದ್ದಾರೆ. ಕಾಂಗ್ರೆಸ್ಸನ್ನು ಅವರು ಶಪಿಸುತ್ತಿದ್ದಾರೆ. (ಉದ್ಧರಣ: ಸಂಬೂದರಿ ಪಾಡ್, ಕನ್ನಡ ಬಿ. ಮಾಧವ ೧೯೬೮ : ೧೪೨)

ಈ ಕನಸು-ಚೂರು ಚೂರಾದಾಗ ನಮ್ಮ ಬುದ್ಧಿ ಜೀವಿಗಳು ಕಂಗಾಲಾದರು. ನಮ್ಮ ಸಾಹಿತ್ಯಕರಿಗೆ ಈಗ ಜೀವನದ ಭರವಸೆಯೇ ಹೊರಟುಹೋಯಿತು. ಕಲ್ಪನೆ, ಆದರ್ಶಗಳಲ್ಲಿ ಅವರಿಗೆ ಭರವಸೆಯೇ ಇಲ್ಲವಾಯಿತು. ಅವರು ಮನುಷ್ಯನ ವ್ಯಾಗೀ-ಯತೆಯ ಮೂಲ ಪ್ರವೃತ್ತಿಯ ಶೋಧನೆಯಲ್ಲಿ ತೊಡಗಿದರು. ಒಂದು ಕಡೆ ಹೊಸ ನಾಡು ಕಟ್ಟುವ ಕನಸು ಭಂಗವಾದರೆ ಇನ್ನೊಂದು ಕಡೆ ಇಂಗ್ಲೀಷ್ ವಿದ್ಯೆ ಹೊಂದಿದ ಇಂಗ್ಲೀಷ್ ವಿದ್ಯೆ ಎಂದರೆ (ಇಂಗ್ಲೀಷ್‌ಬಲ್ಲವರು ಎಂದೇ ಅಲ್ಲ. ಬ್ರಿಟಿಷ್ ವಿದ್ಯಾಭ್ಯಾಸ ದಿಂದಾಗಿ ಉಂಟಾದ ಹೊಸಜ್ಞಾನ) ಈ ಮಂದಿ ಪ್ರಚಲಿತ ಧಾರ್ಮಿಕ ಸಂಪ್ರದಾಯ ದೊಡನೆ, ಜಾತಿ ಅಸ್ಪೃಶ್ಯತೆಯೊಡನೆ ಸಂಪರ್ಕ ಹೊಂದುವದು ಸಾಧ್ಯವಾಗಿರಲಿಲ್ಲ. ಬಹಳ ಮಂದಿ ನಾಸ್ತಿಕರು ಕೂಡ ಆಗಿದ್ದರು. ಥಿಯೋಸೊಫಿಕಲ್ ಸೊಸ್ಯಾಟಿಯಂಥ ಸಂಘಟನೆಯೂ ಇವರಿಗೆ ಆದರ್ಶವಾಗುವುದು ಸಾಧ್ಯವಿರಲಿಲ್ಲ. ಈ ರೀತಿ ಸಾಂಸ್ಕೃತಿಕ, ರಾಜಕೀಯ ಎಡಬಿಡಂಗಿತನ ಅವರನ್ನು ಒಂಟಿಯನ್ನಾಗಿ ಮಾಡಿತು. ನವ್ಯ ಉದಯ ವಾದದ್ದು ಹೀಗೆ.

ನವ್ಯ ಎಂದೊಡನೆ ಒಂದೇ ಪಡಿಯಚ್ಚಾಗಿ ಗ್ರಹಿಸಬೇಕಿಲ್ಲ. ಐತಿಹಾಸಿಕ ಪ್ರಕ್ರಿಯೆ ಏಕಮುಖವಾದುದೇನೂ ಆಗಿರಲಿಲ್ಲ. ಇಲ್ಲಿ ಅಡಿಗರನ್ನು ಪ್ರತ್ಯೇಕವಾಗೇ ನೋಡಬೇಕಾಗುತ್ತದೆ. ಅಡಿಗರ ಕಾವ್ಯದ ಹಿಂದೆ ಜೀವನವನ್ನು ಕಟ್ಟುವ ತುಡಿತ ಇದ್ದೇ ಇತ್ತು. 'ಹೊಸನಾಡ' ಕಟ್ಟುವ ಹಂಬಲ ಬಲವಾಗಿಯೇ ಇತ್ತು. ಅದಕ್ಕೆ ನಾನು ಮೊದಲೇ ಸೂಚಿಸಿದ ಹಾಗೆ ಸ್ವಾತಂತ್ರ್ಯೋತ್ತರದ ರಾಜಕೀಯ ಗಾಂಧೀಜಿಯ ಕಲ್ಯಾಣ ರಾಜ್ಯದ ಕಲ್ಪನೆ ಆಘಾತಕ್ಕೊಳಗಾಗಿತ್ತು. ಗಾಂಧೀಜಿ ಚುಂಬಕ ಆಗಿದ್ದರು. ಉಳಿದವರು ಕಬ್ಬಿಣವಾಗಿದ್ದರು ಎಂಬ ಭಾವನೆ ಅವರಿಗೆ ಸಹಜವಾಗಿ ಬಂದಿರಬಹುದು. ಆದ್ದರಿಂದ ಈ ಸಭ್ಯತೆಯ ಸಾಮೂಹಿಕ ಸನ್ನಿಧಿಯಿಂದ ದೂರ ಸರಿದರು. ವ್ಯಕ್ತಿ ತನ್ನ ಸತ್ವ-ತತ್ವವನ್ನು ವೈಯಕ್ತಿಕ ಜರೂರಿನಲ್ಲಿ ಸಾಕ್ಷಾತ್ಕರಿಸಿಕೊಳ್ಳಬೇಕೆಂಬ ಛಲಕ್ಕೆ ಒಡ್ಡಿ ಕೊಂಡರು. ಆದ್ದರಿಂದ ಅವರು ಪೂರ್ವಮೀಮಾಂಸಾಕಾಂಡದ ಕಡೆ ತಿರುಗಿದರು. ಪೂರ್ವಮೀಮಾಂಸೆ ಯಜ್ಞ ಪ್ರಾಮುಖ್ಯತೆ ಉಳ್ಳದ್ದು. ತನ್ನ ಅಭೀಷ್ಟವನ್ನು ಯಾವೊಂದು ಮೂರ್ತ ಪೂಜಾರಿಯ ಆರಾಧನೆ [illegible] ಹೊಂದಾದದು. ಯಜ್ಞದ ಮೂಲಕ ಕ್ರಿಯೆಯ ಮೂಲಕ ಫಲದ ಸಾಕ್ಷಾತ್ಕಾರ ಪಡೆ[illegible]ಯಬೇಕಾದುದು. ಗಾಂಧೀಜಿಯ ಹೆಸರು

ಹೇಳಿ ರಾಜಕಾರಣ ಮಾಡುವ ಪ್ರಚಾರಿಗಳದ್ದಲ್ಲ. ಆ ಮೂಲಕ ಚಿತ್ತ ಹುತ್ತುಗಟ್ಟಿ ಆ ಪುರುಷೋತ್ತಮನ (ಗಾಂಧೀಜಿ ?) ಮತ್ತೆ ಬಾರದಂದುಕೊಂಡರು ಕತ್ತಲೆ ಮತ್ತೆ ತಲೆ, ಎಂದುಕೊಂಡು ಬೆಳಕಿನ ಮೇಲೆ ಮಾಡುವ ಕತ್ತಲೆಯ ದಾಳಿಯ ಬಗ್ಗೆ 'ಕೈಕೊಟ್ಟು ಹೋಗುವ' ನಂಬಿಕೆಯ ಬಗ್ಗೆ ಸದಾ ಜಾಗ್ರತರಾಗಿದ್ದುಕೊಂಡವರು.

ಇವರಿಗೆ ಎಲಿಯಟ್ ಹೊಸ ದಾರಿ ತೆರೆದ ಸಮಾನ ಧರ್ಮಿಯಾದದ್ದು ಸಹಜವಾಗಿದೆ. ಅಡಿಗರು ತಮ್ಮ ಕಾವ್ಯಾಭಿವ್ಯಕ್ತಿಗೆ ತಾವು ಬೆಳೆದು ಬಂದ ವೈದಿಕ ಸಾಂಸ್ಕೃತಿಕ ಪರಿಸರದಿಂದಲೇ ಭಾಷೆಯನ್ನು ಸಿದ್ಧಿಸಿಕೊಂಡರು. ಕಾವ್ಯ ಪ್ರೌಢವಾಯಿತು. ರೂಪಕ ಪ್ರತಿಮೆ ಪ್ರತೀಕ, ಎಲ್ಲವೂ ಅದೇ ಮೂಲದಿಂದ ಬಂದುದು ಅವರ ವೈಯಕ್ತಿಕ ಪ್ರತ್ಯೇಕತೆಯ ತುದಿತಕ್ಕೆ ಶಕ್ತಿಯನ್ನೊದಗಿಸಿದವು. ಇದು ಎಲ್ಲಿಗೆ ತಲ್ಪಿತೆಂದರೆ ಅವರ ಕಾವ್ಯ ಜನ ದೂರವಾಯಿತು. ಅಡಿಗರು ಕಾವ್ಯಕ್ಕೆ 'ಮಣ್ಣಿನ ವಾಸನೆ' ತರುತ್ತೇನೆಂದರೂ ಮಣ್ಣೇ ವಾಸನೆ ಕಳಕೊಳ್ಳುವಂತಾಯಿತು. ಮಾತ್ರವಲ್ಲ ಅದು, ಜನವಿರೋಧಿ ಮಜಲಿಗೂ ತಲ್ಪಿತು.

ನವ್ಯದ ಇತರ ಪ್ರಮುಖರನ್ನು ಇನ್ನೊಂದು ದೃಷ್ಟಿಯಿಂದ ಪರಿಶೀಲಿಸುವುದೇ ಹೆಚ್ಚು ಸೂಕ್ತ. ಈ ಗುಂಪಿನಲ್ಲಿ ಅನಂತಮೂರ್ತಿ, ಲಂಕೇಶ್, ಶಾಂತಿನಾಥ ದೇಸಾಯಿ, ಯಶವಂತ ಚಿತ್ತಾಲ, ಚಂದ್ರಶೇಖರ ಕಂಬಾರ, ಪೂರ್ಣಚಂದ್ರ ತೇಜಸ್ವಿ ಮೊದಲಾದವರನ್ನು ಗಮನಿಸಬಹುದು,

ಇವರಲ್ಲಿ ದೇಸಾಯಿ, ಲಂಕೇಶ್, ತೇಜಸ್ವಿ, ಕಂಬಾರ ವೈದಿಕ ಸಂಸ್ಕೃತಿಗೆ ಹೊರಗಿನವರು. ಅಡಿಗರಂತೆ ಆಪ್ತತೆ ಇವರಿಗೆ ಸಾಧ್ಯವಾಗದು. ದೇಸಾಯಿ ತನ್ನ ಮುಂದೇ ದೇಸಾಯಿತ್ವ ಚೂರುಚೂರಾದುದನ್ನು ಕಂಡಿದ್ದರು. ಲಂಕೇಶ್, ತೇಜಸ್ವಿ, ಕಂಬಾರ ಜಮೀನುದಾರಿಯೊಳಗಿಂದ ಬಂದವರು. ಚಿತ್ತಾಲ ರಾಯ್ ಪ್ರಭಾವಕ್ಕೆ ಒಳಗಾದವರು. ಅನಂತಮೂರ್ತಿ ವೈದಿಕ ಸಂಸ್ಕೃತಿಯಿಂದ ಬಂದವರಾದರೂ ಲೋಹಿಯಾ ಸಮಾಜವಾದಿ ಪ್ರಭಾವಕ್ಕೆ ಒಳಗಾದವರು. ಇವರಲ್ಲಿ ಹೆಚ್ಚಿನವರು ಇಂಗ್ಲೀಷ್ ಸಾಹಿತ್ಯದ ಅಭ್ಯಾಸಿಗಳೇ ಆಗಿದ್ದರು. ಇದೇ ಗುಂಪಿಗೆ ಸೇರಬೇಕಾದವರು ಗಿರೀಶ್ ಕಾರ್ನಾಡ್, [illegible] ರಾಮಾನುಜಂ ಒಂದು ಕಡೆ ಇಂಡಿಯಾದ ರಾಜಕೀಯ ಗೊಂದಲಗಳಾದರೆ, ಇನ್ನೊಂದು ಕಡೆ ಕ್ರಿಶ್ಚಿನ್ ಕರುಣೆಯ ಹಿರೋಶಿಮಾ ನಾಗಸಾಕಿಯ ಮೇಲೆ ಸುರಿದ ಅಣುಬಾಂಬು ಮನುಷ್ಯತ್ವವನ್ನು ಛಿದ್ರಗೊಳಿಸಿತ್ತು. ಇವರೆದುರಿಗೇ ರಷಿಯಾ ಸಮಾಜವಾದೀ ರಾಷ್ಟ್ರವಾಗಿ ಸ್ವತಂತ್ರವಾಗಿ ತಲೆ ಎತ್ತಿತ್ತಾದರೂ ಸ್ಟಾಲಿನ್ನನ ಆಡಳಿತ ಭಯವನ್ನುಂಟುಮಾಡಿತ್ತು. ಹಾಗೆ ಕೇಳಿದರೆ ಲೋಹಿಯಾವಾದ ಸಮೂಹ ದೂರವನ್ನು ಛೇದಿಸುವುದಿಲ್ಲ. ಅದು ಸಮಾಜ ಮುಖಿಯಾದುದು. ಆದರೆ ಈ ಹೊಸ ಎಲೈಟ್ ವರ್ಗ, ವರ್ಗಸ್ವಭಾವದಿಂದ ಕೂಡಿತ್ತು. ಇವರು ಜನಾಭಿಮುಖಿಯಾಗಲಿಲ್ಲ

ಇವರಿಗೆ ಸಾರ್ತ್ರೆ, ಫ್ರಾಯ್ಡ್ ತಾತ್ವಿಕವಾಗಿ ಆದರ್ಶಪ್ರಾಯರಾದರೆ ಕಾಫ್ಕ, ಕಾಮು, ಲಾರೆನ್ಸ್ ಮೊದಲಾದ ಯುರೋಪಿನ ನವ್ಯರು ಕಾವ್ಯ ತತ್ವದಿಂದ ಹತ್ತಿರದವರೆನ್ನಿಸಿದರು.

ಈ ವಿವರಣೆ ಅತ್ಯಂತ ಸರಳೀಕರಣಕ್ಕೆ ಒಳಗಾದ ಅಪರಾಧ ನನ್ನದೆಂದು ಒಪ್ಪಿಕೊಳ್ಳುತ್ತೇನೆ. ಜೀವನ ಅದರಲ್ಲೂ ವಸಾಹತುಶಾಹಿ ಸಂದರ್ಭ, ಸ್ವಾತಂತ್ರ್ಯ ನಂತರದ ಗೊಂದಲ ಇಷ್ಟು ಸರಳೀಕರಣಕ್ಕೆ ಶರಣಾಗುವುದಿಲ್ಲ ಎಂಬ ಗ್ರಹಿಕೆ ನನಗೆ ಇದೆ. ಇಗೋ ಅಲ್ಲಿ ಇದ್ದಿ ಎಂದು ಹಿಡಿದರೆ, ಇಗೋ ಇಲ್ಲಿ ಇದ್ದೇನೆ ಎಂದು ಪ್ರಕಟವಾಗುವ ಬದುಕಿನ ಅದಮ್ಯತೆಯ ಬಗ್ಗೆ ಗೌರವ ಕೂಡ ಉಂಟು. ಆದರೂ ನನಗೆ ಉಪಾಯವಿಲ್ಲ.

ಹಾಗಾದರೆ ನವ್ಯದ ಸಾಧನೆ ಕೇವಲ ನಿಷೇಧಾತ್ಮಕ ಮಾತ್ರವೆ ಎಂದು ಇಂದು ನಾವು ಪ್ರಶ್ನಿಸಿಕೊಳ್ಳಬೇಕಾದ ಅವಶ್ಯಕತೆ ಇದೆ.

ನವ್ಯ ಕೆಲ ಮಹತ್ವದ ಸಾಧನೆಯಿಂದ ಇಂದಿನವರ ಲಕ್ಷ್ಯವನ್ನು ತಿಳಿಯದೇ ಹೋಗುವುದಿಲ್ಲ. ಅಂಥ ಹಟಮಾರಿತನವು ಕೂಡ ಅವಶ್ಯವಲ್ಲ.

ಆಗಲೇ ಭಾವಲಂಪಟತೆಗೆ ಪಕ್ಕಾಗುತ್ತಿರುವ ಸಾಹಿತ್ಯ ಪ್ರಕಾರಗಳಲ್ಲಿ ಚಿಂತನೆಯ ಪ್ರಾಮುಖ್ಯತೆಯನ್ನು ನವ್ಯ ಸೇರಿಸಿತು. ಆಕೃತಿಯಲ್ಲಿ ತರ್ಕಬದ್ಧತೆ, ಶಿಲ್ಪದಶಿಸ್ತು ಅನುಭವದ ತಾಜಾತನವನ್ನು ಪ್ರತಿಪಾದಿಸಿತು. ಸಾಹಿತ್ಯಾಕೃತಿಯಲ್ಲಿ ಹೊಸ ಹೊಸ ಆವಿಷ್ಕಾರ ಸಾಧ್ಯತೆಯನ್ನು ತೆರೆಯಿತು. ಮನುಷ್ಯ ಒಳಗನ್ನು ಪೂರ್ತಗೊಳಿಸುವಲ್ಲಿ ಅಪೂರ್ವವಾದ ಸಿದ್ಧಿಯನ್ನು ಸಾಧಿಸಿತು. ಪ್ರತಿಮೆ, ಪ್ರತೀಕ, ಸಂಕೇತಗಳ ಹೊಸ ಹೊಸ ಸೃಷ್ಟಿ ಸಾಹಿತ್ಯ ಭಾಷೆಯನ್ನು ಸಿದ್ಧಪಡಿಸಿಕೊಂಡ ರೀತಿ ಇಂದಿಗೂ ಆಕರ್ಷಕ. ಭಾಷಾ ಬಳಕೆಯಲ್ಲಿ ಅದು ನಮಗೆ ಕಲಿಸಿದ ಅರ್ಥಶಾಸ್ತ್ರ ಹೆಚ್ಚಿನದು. ವಿಮರ್ಶನ ಸೂಕ್ಷ್ಮತೆಯನ್ನು ಅದು ಕಲಿಸಿತು. ಇಂದಿಗೂ ನಮಗೆ ಆ ಕಾಲದ ರಚನೆಗಳಾದ ಅಡಿಗರ ಭೂಮಿಗೀತ, ಭೂತ, ರಾಮನವಮಿಯ ದಿನ, ಹಿಮಗಿರಿಯ ಕಂದರದ ಕೆಲವು ಭಾಗ, ಚಿತ್ತಾಲರ ಮೂರು ದಾರಿಗಳು, ಆಟ, ಪಯಣ, ಅನಂತಮೂರ್ತಿಯವರ ಸಂಸ್ಕಾರ, ನವಿಲುಗರಿ, ಪ್ರಕೃತಿ, ದೇಸಾಯಿಯವರ ಮುಕ್ತಿ, ಕ್ಷಿತಿಜ, ತೇಜಸ್ವಿಯವರ ನಿಗೂಢ ಮನುಷ್ಯರು, ಲಂಕೇಶರ ಅವ್ವ, ರೊಟ್ಟಿ, ಮಾರಲಾಗದ ನೆಲ, ಕಂಬಾರರ ಅಜ್ಜ ಮತ್ತು ಅಸಂಗತ ನಾಟಕಗಳು, ದೇವನೂರರ ಗ್ರಸ್ತದಂತ ಕತೆಗಳು ಗಿರೀಶರ ತುಘಲಕ್ ಮತ್ತೆ ಮತ್ತೆ ಓದಲು ಒತ್ತಾಯಿಸುವ ಶಕ್ತಿ ಯಾವುದು ಎಂದು ನಾವು ಕೇಳಿಕೊಳ್ಳಲೇಬೇಕು.

ಇಷ್ಟಾಗಿಯೂ ಇವರು ಸಮೂಹಕ್ಕೆ ಬೆನ್ನು ತೋರಿದರು. ಕಲಾತ್ಮಕತೆ ಒಂದು ಗೀಳಾಯಿತು. ಸಮೂಹ ವಿಮುಖವಾದ ಏಕಾಕಿತನ ವ್ಯಕ್ತಿ ವೈಶಿಷ್ಟ್ಯದ ಗರಹೊಡೆಸು

ಸಾಹಿತ್ಯಕ್ಕಿರಬೇಕಾದ ಸಾಮಾಜಿಕ ಆಯಾಮವನ್ನು ಮುಕ್ಕುಮಾಡಿತು. ಯಾವ ಸಾಹಿತ್ಯ ಸಾಮಾಜಿಕ ಉಪಯೋಗಿಯಾಗಬೇಕಾಗಿತ್ತೋ ಅದು ಕೆಲವರದೇ ವೈಯಕ್ತಿಕ ಗೀಳಿಗೆ, ತಾತ್ಕಾಲಿಕ ತೆವಲಿಗೆ ಪಕ್ಕಾಯಿತು. ಇದು ಕೂಡ ಚರಿತ್ರೆಯ ಒಂದು ಪ್ರಕ್ರಿಯೆಯೇ.

ಹಾಗಾದರೆ ನವ್ಯರು ಮಾಡಿದ ತಪ್ಪು ಯಾವುದು ? ಇಂದು ನಮಗೆ ಬೇಕಾದ ಮುಖ್ಯ ಅಂಶ ಇದು.

ಗಾಂಧೀಜಿ ಸ್ವಾತಂತ್ರ್ಯ ಹೋರಾಟಕ್ಕೆ ಧಾರ್ಮಿಕ ದೀಕ್ಷೆಯನ್ನೇನೊ ಗಟ್ಟಿ ಮಾಡಿದರು. ಆದರೆ ಅದೇ ಹೊತ್ತಿಗೆ ಸ್ವಾತಂತ್ರ್ಯ ಸಂಗ್ರಾಮದಗುಂಟ ಜನಪರವಾದ ಎಡ ಪಂಥೀಯ ಧೋರಣೆಯೊಂದು ಬೆಳೆಯುತ್ತಲೇ ಇತ್ತು. ಆದರೆ ಗಾಂಧೀಜಿಯ ಕ್ರಿಯಾಶೀಲತೆಯಿಂದ ಅದು ಊನಗೊಂಡಿತು. ಗಾಂಧೀಜಿಯ ಕ್ರಿಯಾಶೀಲತೆ ಅದ್ಭುತವಾದುದೆ. ಶಂಕರಾಚಾರ್ಯರ ಕ್ರಿಯಾಪಟುತ್ವದ ಹಾಗೇ ಅವರದು. ಶಂಕರಾಚಾರ್ಯ ತಮ್ಮ ಅಧಿಕವಾದ ಕ್ರಿಯಾಶೀಲತೆಯಿಂದ ಜನಪರ ಧರ್ಮವಾದ ಬೌದ್ಧಧರ್ಮವನ್ನು ಹೊಸಕಿ ಹಾಕಿದರು. ಹಾಗೆಯೇ ಗಾಂಧೀಜಿ ತಮ್ಮ ಅಪರೂಪದ ಕ್ರಿಯಾಶೀಲತೆಯಿಂದ ಎಡಪಂಥೀಯ ಬೆಳವಣಿಗೆಯನ್ನು ಕ್ಷೀಣಗೊಳಿಸಿದರು. ಇದನ್ನು ನವ್ಯರು ಅರಿಯಲಿಲ್ಲ.

ಇಲ್ಲಿಯ ಬಡ ರೈತ 'ಬಡತನದಲ್ಲೇ ಹುಟ್ಟಿ ಬಡತನದಲ್ಲೇ ಬೆಳೆದು ಬಡತನದಲ್ಲಿ ಸಾಯುತ್ತಾನೆ' ಎಂಬ ಮಾತಿಗೆ ಪಕ್ಕಾಗಿದ್ದ, ಊಳಿಗಮಾನ್ಯ ವ್ಯವಸ್ಥೆಯ ಅಡಿಯಲ್ಲಿ ಜಜ್ಜಿ ಹೋಗಿದ್ದ. ಇಲ್ಲಿಯ ಕಾರ್ಮಿಕ ಉದಯೋನ್ಮುಖ ಬಂಡವಾಳಶಾಹಿಯ ಕಪಿಮುಷ್ಟಿಯಲ್ಲಿ ಹಿಸುಕಲ್ಪಟ್ಟಿದ್ದ. ಕೂಲಿಕಾರರು ನಿರ್ಗತಿಕರಾಗಿದ್ದರು. ದೇಶದ ಜನಸೇಯ ಒಂದು ಭಾಗದ ಜನ ಅಸ್ಪೃಶ್ಯತೆಯ ಕರಾಳ ಕಪ್ಪು ರಾಹುವಿಗೆ ಸಿಕ್ಕು ಊರ ಹೊರಗಾಗಿದ್ದರು. ಮಹಿಳೆಯರು ಪುರುಷ ಯಜಮಾನ ವ್ಯವಸ್ಥೆಯಲ್ಲಿ ವ್ಯಕ್ತಿತ್ವವನ್ನೇ ಕಳೆಕೊಂಡಿದ್ದರು. ಇವರಿಗೂ ಏಕಾಕಿತನ ಕಾಡಿತ್ತು. ಆದರೆ ಅವರು ಒಂಟಿಯಾಗಲಿಲ್ಲ. ಮಹಾತ್ಮಾ ಫುಲೆಯಿಂದ ಹಿಡಿದು, ಡಾ॥ ಭೀಮರಾವ್ ಅಂಬೇಡ್ಕರರವರೆಗಿನ ದಲಿತ ಚಳವಳಿ, ಮಾರ್ಕ್ಸ್‌ವಾದಿ ಚಳವಳಿ, ಡಾ॥ ರಾಮಮನೋಹರ ಲೋಹಿಯಾ ಅವರ ಸಮಾಜವಾದಿ ಚಳವಳಿ ಅವರಿಗೆ ದಾರಿದೀಪವಾಗಿದ್ದವು. ಅವರ ಏಕಾಕಿತನದಲ್ಲಿ ನಿರಾಶೆಯಿರಲಿಲ್ಲ. ಬದಲಾಗಿ ಹೋರಾಟದ ಕೆಚ್ಚಿತ್ತು. ವಾಸ್ತವವನ್ನು ಮೆಟ್ಟಿ ಭವಿಷ್ಯತ್ತನ್ನು ಹಿಡಿಯುವ ಛಲವಿತ್ತು. ನಗರದಲ್ಲಿಯ ಈ ಅತಂತ್ರ ನವ್ಯರಿಗೆ ಇವರ ಸಂಪರ್ಕವೇ ಇರಲಿಲ್ಲ.

ಈ ಛಲ, ಈ ಪ್ರತಿಭಟನೆಯ ಸ್ಫೂರ್ತಿ ಸಾವಿಲ್ಲದ್ದು. ಕರ್ಣಜಿಡ್ಡಿಯ ಹಾಗೆ ಸಿಕ್ಕಿದ್ದರಲ್ಲಿ ಚಿಗುರುವ ಸತ್ವ ಮೂಲವಾದದ್ದು. ಇದು ಚಿಗುರುತ್ತಲೇ ಇತ್ತು. ಹಬ್ಬುತ್ತಲೇ ಇತ್ತು.

ಸ್ವಾತಂತ್ರ್ಯ ನಂತರದ ಮೂರು ದಶಕಗಳಲ್ಲಿ ಸಿಕ್ಕಪಟ್ಟೆ ಆರ್ಥಿಕ ರಾಜಕೀಯ ಮತ್ತು ಶಿಕ್ಷಣ ಸೌಲಭ್ಯದಿಂದಾಗಿ ರೋಷದಿಂದ ಈ ವರ್ಗಗಳು ಮುಂದು ಬರುತ್ತಿದ್ದವು. ಈ ವರ್ಗಗಳಿಗೆ ಅಕ್ಷರ ದಕ್ಕಿದೊಡನೆ ಸಿಂಹಗರ್ಜನೆ ಮಾಡಿ ಮುಂದೆ ಬಂದವು. ಇವು ಗಳ ಪ್ರಾತಿನಿಧಿಕ ಕೂಗಾಗಿ "ಇಕ್ರಲಾ, ಒದಿರಲಾ ಇವರ ಚೊಮ್ಡ ಎಬ್ರಲಾ" ಎಂದು ಸ್ಫೋಟಗೊಂಡಿತು. ಆ ಸಿಡಿಲಿಗೆ ಜನ ಬೆರಗಾಯಿತು. ಇದೇ ಬಂಡಾಯ ಸಾಹಿತ್ಯ ವಾಯಿತು. ಈ ಮುಂದಿನ ಬೆಳವಣಿಗೆಯನ್ನು ನವ್ಯೋತ್ತರ ಎಂದೂ ಕರೆಯುವರು. 'ನವ್ಯೋತ್ತರ' ಎಂಬುದು ಸಾಹಿತ್ಯಕ ಪರಿಭಾಷೆಯ ಹೆಸರಾಯಿತು. ಇದರ ಮುಖ್ಯ ಪ್ರವಾಹ ಬಂಡಾಯ ಸಾಹಿತ್ಯ.

ಯಾವಾಗ ನವ್ಯ ಜನಪರ ಆಶಯದ ಉಸಿರನ್ನು ಹಿಚುಕಿತೊ ಆಗ ಗ್ರಾಮೀಣ ಪ್ರದೇಶದಿಂದ ಬಂದು ನಗರ ಸೇರಿದರು ಗ್ರಾಮೀಣ ಜನತೆಯ ಮಾಸಲು ರುಮಾಲ, ಮಾಸಲು ಧೋತರದ ಸಂಪರ್ಕ ಕಳೆದುಕೊಂಡಿರದ ಚಂದ್ರಶೇಖರ ಪಾಟೀಲ ನವ್ಯದ ಹಂಗು ಹರಿದು ಬಂಡಾಯದ ಮುಂಚೂಣಿಯಲ್ಲಿ ನಿಂತರು. ಲೋಹಿಯಾವಾದದ ಪ್ರಬಲ ಒತ್ತಾಸೆಯಿಂದ ಪೂರ್ಣಚಂದ್ರ ತೇಜಸ್ವಿ ಬಂಡಾಯವಾಗದಿದ್ದರೂ ಸಾಹಿತ್ಯ ಹೊಸಬಗೆಯದೇ ಆಗಬೇಕೆಂದು, ತನಗೆ ಕಾರಂತರ ವೈಜ್ಞಾನಿಕತೆ, ಕುವೆಂಪು ಅವರ ಕಲಾತ್ಮಕತೆ ಮುಖ್ಯ ಎಂದು ಬೇರೆಯಾದರು. ನವ್ಯದವರ ಮಧ್ಯದಲ್ಲೇ ಬೆಳೆದು ಬಂದವರಾದರೂ ತನ್ನ ದಲಿತನದಿಂದಾಗಿ ದೇವನೂರು ಮಹಾದೇವ ಒಡಲಾಳದಂಥ ಕಾದಂಬರಿ ಬರೆಯಬೇಕಾಯಿತು.

ಅಂದರೆ ಬಂಡಾಯ ಸಾಹಿತ್ಯ ಬದ್ಧ ಸಾಹಿತ್ಯ. ಬದ್ಧತೆ ಯಾರೊಟ್ಟಿಗೆ ಬದ್ಧತೆ? ಶೋಷಿತರೊಟ್ಟಿಗೆ, ದಲಿತರೊಟ್ಟಿಗೆ, ಮಹಿಳೆಯರೊಟ್ಟಿಗೆ. ಬಂಡಾಯ ಸಾಹಿತ್ಯ ಲೋಹಿಯಾವಾದ, ಅಂಬೇಡ್ಕರವಾದ ಮತ್ತು ಮಾರ್ಕ್ಸ್‌ವಾದದ ತಾತ್ವಿಕತೆಯಿಂದ ಸ್ಫುರಣಗೊಳ್ಳುತ್ತದೆ. ತನ್ನ ಆಶಯಕ್ಕೆ ತಕ್ಕಂತೆ ಆಕಾರವನ್ನು ಬದಲು ಮಾಡಿಕೊಳ್ಳು ತ್ತದೆ. ಈ ನವ್ಯೋತ್ತರದ ಕುರಿತು ಡಾ॥ ಜಿ. ಎಸ್. ಶಿವರುದ್ರಪ್ಪನವರ ಈ ಮಾತು ಮನನೀಯವಾಗಿದೆ. ಅವರ ಪ್ರಕಾರ "....ಬಂಡಾಯ ಅನ್ನುವದೊಂದು ಮನೋಧರ್ಮ, ಈ ಮನೋಧರ್ಮದ ಮುಖ್ಯ ಲಕ್ಷಣ- ಸಾಮಾಜಿಕ ಅಸಮಾನತೆ, ಹಾಗೂ ಅನ್ಯಾಯಗಳನ್ನು ಒಟ್ಟಾರೆಯಾಗಿ ವಸ್ತು ಸ್ಥಿತಿಯನ್ನು ಪ್ರಶ್ನಿಸುವ ಮತ್ತು ಪರಿಸ್ಥಿತಿಯನ್ನು ಬದಲಾಯಿಸುವ ಉದ್ದೇಶದಿಂದ ಪ್ರತಿಭಟಿಸುವ ಒಂದು ಪ್ರವೃತ್ತಿ.... ಶತಮಾನಗಳ ಕಾಲ ಅಕ್ಷರಜ್ಞಾನದ ಸವಲತ್ತುಗಳಿಂದ ವಂಚಿತನಾಗಿದ್ದು, ಮತ್ತು ಮೇಲಿನ ಎಲ್ಲ ವರ್ಗದವರಿಂದ ತುಳಿತಕ್ಕೆ ಒಳಗಾಗಿದ್ದ ಸಮಾಜದ ಕೆಳಗಿನ ಸ್ತರವೊಂದು ಮಾತನಾಡಲು ಕಲಿತು, ತನ್ನ ಪ್ರತಿಭಟನೆಯನ್ನು ಅಭಿವ್ಯಕ್ತಪಡಿಸತೊಡಗಿದಾಗ ಮೂಡಿ ಬಂದಿತು ಬಂಡಾಯ ಸಾಹಿತ್ಯ" (ಉದ್ಧರಣ : ಮನಜ 'ಸಾಹಿತ್ಯ ಮತ್ತು

ಸಾಮಾಜಿಕ ನಿಲುವು' ೧೯೮೯ ಪು. ೯೨) ಇದರೊಟ್ಟಿಗೆ ಪ್ರೊ : ಜಿ. ಎಚ್. ನಾಯಕರ "ಬಂಡಾಯ ಕಾವ್ಯವು ಇಡಿಯಾಗಿ ಜನಪರ ಕಾವ್ಯವಾಗಿಯೇ ಬೆಳೆಯುತ್ತಿದೆ" (ನಿಜದನಿ ೧೯೮೮ : ೨೪೪) ಎಂಬ ಮಾತೂ ಉಲ್ಲೇಖನೀಯವಾಗಿದೆ.

ಬಂಡಾಯ ಸಾಹಿತ್ಯ ದೇಶಿಯವಾದವನ್ನು ಎತ್ತಿಹಿಡಿಯುತ್ತದೆ. 'ದೇಶೀಯವಾದ' ಎನ್ನುವ ಪದಕ್ಕೆ ವಿವರಣೆ ಅವಶ್ಯ, ಇಲ್ಲದಿದ್ದರೆ ಇದು ಅಪಾರ್ಥಕ್ಕೆ ಎಡೆಮಾಡಿಕೊಡುತ್ತದೆ. ಯಾಕೆಂದರೆ ದೇಶಿಯವಾದದ ಚರ್ಚೆ ಕೊನೆಗೆ ಜಾತಿವಾದವನ್ನೂ, ಧಾರ್ಮಿಕ ಮನೋಭಾವವನ್ನೂ, ಮೌಢ್ಯವನ್ನು ಎತ್ತಿಹಿಡಿಯುವ ಮಟ್ಟಕ್ಕೆ ಹೋಗಿ ನಿಲ್ಲಬಹುದು. ಯಾಕೆಂದರೆ ನಮ್ಮ ದೇಶದ ಒಂದು ಕಣ್ಣೋಟದಲ್ಲೇ ದೇಶೀವಾದದ ಚರ್ಚೆ ಮೂರ್ತಗೊಳ್ಳಬೇಕು ತಾನೆ? ಆದ್ದರಿಂದ ದೇಶಿಯವಾದವೆಂದರೆ ನಮ್ಮ ಇಂದಿನ ಸಂದರ್ಭದಲ್ಲಿ ಬಹಳ ವಿಶಾಲವಾದ ಮತ್ತು ಪ್ರಗತಿಪರವಾದ ಅರ್ಥವನ್ನು ಹೊಂದಿದೆ ಎಂಬುದನ್ನು ಖಾತ್ರಿಪಡಿಸಬೇಕು.

ದೇಶೀಯವಾದವೆಂದರೆ ಸ್ವತಂತ್ರ ದೇಶವಾದ ನಮ್ಮ ಇಂದಿನ ರಾಜಕೀಯ, ಸಾಂಸ್ಕೃತಿಕ ಪರಿಸರದಲ್ಲಿ ಸ್ವಾತಂತ್ರ್ಯ ಸಮಾನತೆ ಭ್ರಾತೃತ್ವವನ್ನು ಹೊಂದಿರುವ ಸಮಾಜಿಕ ವ್ಯವಸ್ಥೆಯನ್ನು ರೂಪಿಸಿಕೊಳ್ಳಲು ತಕ್ಕಾದ ಚಿಂತನೆ ಎಂದೇ ಅರ್ಥ.

ಬ್ರಿಟಿಶರ ಆಡಳಿತದಲ್ಲಿಯ ವಸಾಹತುಶಾಹಿ ಮನೋಧರ್ಮ ಒಂದೋ, ನಮ್ಮನ್ನು ಅವಲಂಬಿಗಳನ್ನಾಗಿಯೋ, ಇಲ್ಲ, ನಮ್ಮದೆಲ್ಲದೂ ಹೊನ್ನು ಎಂಬ ದುರಭಿಮಾನಿಯನ್ನಾಗಿಯೋ ಮಾಡುತ್ತದೆ. ನಮ್ಮ ಸ್ವತಂತ್ರ ವಿಚಾರವನ್ನೇ ಅದು ತೆಗೆದು ಹಿಡಿಯುತ್ತದೆ. ಈ ವಸಾಹತುಶಾಹಿಯ ಮನೋಧರ್ಮ ಅಪ್ರತ್ಯಕ್ಷ ಪ್ರಜ್ಞೆಯಲ್ಲಿ ನಿಂತು ನಮ್ಮನ್ನು ಕಾಡುತ್ತದೆ. ಸ್ವತಾ ತಮಗೆ ಇಂಗ್ಲೀಷ್ ಬಂದಿದ್ದರೂ ಇಂಗ್ಲೀಷ್ ಮಾಧ್ಯಮ ಶಾಲೆಯನ್ನು ವಿಸ್ತರಿಸಬೇಕೆಂದು ಬೇಡಿಕೆಯನ್ನು ಮಂಡಿಸುವ ದಾಗೆ ದಾಸ್ಯವಾಗಿ ಒಂದೆಡೆ ಕಾಡಿದರೆ, ಇನ್ನೊಂದು ದಿಕ್ಕಿನಲ್ಲಿ ಅಯೋಧ್ಯೆಯ ರಾಮಮಂದಿರಕ್ಕೆ ಇಟ್ಟಿಗೆ ಹೊರಲು ಅಹಂಕಾರವಾಗಿ ಕಾಡುತ್ತದೆ. ಆದರೆ ಈ ಎರಡೂ ದೇಶಿಯವಾದವಲ್ಲ. ನನ್ನ ಅರ್ಥದಲ್ಲಿ, ಈ ದಾಸ್ಯ ಮತ್ತು ಅಹಂಕಾರದಿಂದ ಮುಕ್ತವಾಗಿ ವೈಜ್ಞಾನಿಕ ಹಿನ್ನೆಲೆಯಲ್ಲಿ ಸಮಾನತೆಯ ನಾಡನ್ನು ಕಟ್ಟಲು ಸ್ವಾತಂತ್ರ್ಯವನ್ನೀಯುವ ಚಿಂತನೆಯ ಹಿನ್ನೆಲೆ ಆಕಾರ ಪಡೆಯುವುದೇ ದೇಶೀವಾದ. ಈ ದೇಶೀವಾದ ಸಮಾಜದ ಅಂತ್ಯದಲ್ಲಿರುವವರನ್ನು ಸಮಾನತೆಯಲ್ಲಿ ತರುವ ಮುಕ್ತ ಚಿಂತನೆ. ಅದು ಜನಪರವಾದ ದನಿಯಲ್ಲಿಯೇ ಆಕಾರ ಪಡೆಯಬೇಕೆಂಬುದು. ಹಾಗಿರುವಾಗಲೇ ಡಾ : ಅಂಬೇಡ್ಕರರ ಬಗ್ಗೆ ಒಂದು ಕಾವ್ಯಗುಚ್ಛವನ್ನು ತರುವ ನಾವು ಡಾ : ನೆಲ್ಸನ್ ಮಂಡೇಲಾರ ಬಗ್ಗೆ ನಮ್ಮ ಕವಿಗಳು ಮುಕ್ತ ಮನಸ್ಸಿನಿಂದ ಹಾಡಬಲ್ಲವರಾಗಲು ಸಾಧ್ಯ. ಆದ್ದರಿಂದ

ಬಂಡಾಯ ಸಾಹಿತ್ಯ ದೇಶೀಯವಾದುದಾಗಿದೆ. ಅದು ದೇಶವನ್ನು ಕಟ್ಟಿದ ಕೈಗಳು ಬರೆದ ಸಾಹಿತ್ಯ. ಆ ದುಡಿಮೆಯ ಜನರ ಆಶಯಕ್ಕೆ ಆಕಾರ ಕೊಡುವ ಸಾಹಿತ್ಯ ಎಂದೇ ಅರ್ಥ. 'ದೇಶೀ', 'ಮಾರ್ಗ' ಎಂಬ ಪರಿಕಲ್ಪನೆಯ ಹಿಂದಿರುವ ಅರ್ಥವೂ ಇದೇ ತಾನೆ ? ಇವರ ಹೊರತಾಗಿಯೂ ಇಷ್ಟಾಗಿಯೂ ಸಾಮ್ರಾಜ್ಯಶಾಹಿ ಮಾಡ ಬಹುದಾದ ಅಪಾಯದ ಬಗ್ಗೆ ನಮ್ಮ ಜಾಗ್ರತಿ ಸದಾ ಇರಬೇಕಾದುದು.

ಬಂಡಾಯ ಸಾಹಿತ್ಯ ಇಂದಿನ ಮುಖ್ಯ ಪ್ರವಾಹ ಎಂಬುದು ಮುಖ್ಯ. ಅನ್ಯ ಮಾರ್ಗದಲ್ಲಿ ಸಾಹಿತ್ಯ ಬರುತ್ತಲೇ ಇಲ್ಲ ಎಂದೇನೂ ಅಲ್ಲ. ಯಾಕೆಂದರೆ ನವ್ಯದ ಬರಹ ಗಾರರು ಇಂದಿಗೂ ಬರೆಯುತ್ತಿದ್ದಾರೆ. ಹಾಗೆ ಕೇಳಿದರೆ ನವ್ಯದ ಮುಖ್ಯಲೇಖಕರ ಪ್ರತಿಭೆ ದೈತ್ಯ ಪ್ರತಿಭೆ ಎಂದೇ ಹೇಳಬೇಕು. ನವ್ಯರಾದ ಅಡಿಗ, ಅನಂತಮೂರ್ತಿ, ಲಂಕೇಶ್, ಚಿತ್ತಾಲ, ದೇಸಾಯಿ ಮೊದಲಾದ ಸೃಜನಶೀಲ ಲೇಖಕರು, ಜಿ. ಎಚ್. ನಾಯಕರಂಥ ವಿಮರ್ಶಕರು ದೊಡ್ಡ ಶಕ್ತಿಗಳೇ ಆದರೆ ಬಂಡಾಯದ ಬೆಳವಣಿಗೆ ಅವರ ಮೇಲೂ ತನ್ನ ಒತ್ತಾಯವನ್ನು ಹೇರದೇ ಹೋಗಿಲ್ಲ. ದೇವನೂರು ಮಹಾದೇವರ ಕುಸುಮಬಾಲೆಗೆ ಬ್ಲರ್ಬ ಬರೆಯುತ್ತ ಪ್ರೊ : ಜಿ. ಎಚ್. ನಾಯಕರು "ನಮ್ಮ ಮಾನ ದಂಡವನ್ನೇ ಮರುಪರಿಶೀಲನೆಗೆ ಒಳಪಡಿಸಬೇಕೇನೊ" ಎಂಬ ಸಂಶಯ ವ್ಯಕ್ತಪಡಿಸುವ ಮಾತಿನಲ್ಲಿ ಈ ಒತ್ತಡದ ಅಂಶ ಎದ್ದು ಕಾಣುತ್ತದೆ. ಹಾಗೆಯೇ ಡಾ: ಶಾಂತಿನಾಥ ದೇಸಾಯಿವರ 'ಬೀಜ', ಲಂಕೇಶರ ಕಲ್ಲು ಕರಗುವ ಸಮಯ ಚಿತ್ತಾಲರ 'ಪುರುಷೋ ತ್ತಮ' ಮುಂತಾದೆಡೆ ಈ ಬಂಡಾಯದ ತಾತ್ವಿಕ ಒತ್ತಾಯದ ಛಾಯೆ ಕಾಣುತ್ತದೆ. ಇವುಗಳಲ್ಲಿ ನವ್ಯ ತಂತ್ರ, ಕಲೆಗಾರಿಕೆಯ ವಿಶೇಷತೆ ಇರುವುದಾದರೂ ಬಂಧದಲ್ಲಿ ಸಡಿಲಿ ಕೆಯ ಕಡೆಗೆ, ತಾತ್ವಿಕತೆಯಲ್ಲಿ ಜನಸಮ್ಮುಖದ ಕಡೆ ವಾಲಿದಂತೆನಿಸುತ್ತದೆ. ಇವೆಲ್ಲದ ರಿಂದಾಗಿ ಬಂಡಾಯ ಕಾಲದ ಈ ನವ್ಯರ ಸಾಹಿತ್ಯ ಕೃತಿಯನ್ನು ಡಾ : ಡಿ. ಆರ್. ನಾಗರಾಜ "ಪರಿವರ್ತನ ಶೀಲ ನವ್ಯ" ಎಂದು ಕರೆದಿದ್ದಾರೆ. ಈ ಪರಿವರ್ತನೆಗೆ ಕಾರಣ ವಾದ ಸಂದರ್ಭ ಬಹಳ ಮುಖ್ಯವಾದುದು. ಆದ್ದರಿಂದ ನವ್ಯೋತ್ತರದ ಸಾಹಿತ್ಯದಲ್ಲಿ ಬಂಡಾಯದ ಮುಖಾಮುಖಿಯಾಗಿ 'ಪರಿವರ್ತಿತ ಶೀಲ ನವ್ಯ'ವೂ ಬರುತ್ತಿದೆ. ಇದ ರಿಂದ ನವ್ಯೋತ್ತರದಲ್ಲಿ ನವ್ಯ ಪರಿವರ್ತಿತವಾಗಿದೆ ಮತ್ತು ಬಂಡಾಯ ಮುಖ್ಯವಾಗಿದೆ.

ಈಗ ನನ್ನ ಮಂಡನೆಯ ಶೀರ್ಷಿಕೆಯ ಹೆಸರಿನಲ್ಲಿರುವ 'ಇತ್ತೀಚಿನ ಒಲವು' ಏನು ಎಂಬುದನ್ನು ಗಮನಿಸಬಹುದು.

ಬಂಡಾಯ ಸಾಹಿತ್ಯ ಸಂಘಟನೆ ತನ್ನ ದಶಮಾನೋತ್ಸವವನ್ನು ರಾಜ್ಯಮಟ್ಟದಲ್ಲಿ ಬೆಂಗಳೂರಿನಲ್ಲಿ ಆಚರಿಸಿತು. ಆ ಸಂದರ್ಭದಲ್ಲಿ ಪ್ರಸ್ತಾವಿಕ ಭಾಷಣ ಮಾಡುತ್ತ ಶ್ರೀ ಬರಗೂರು ರಾಮಚಂದ್ರಪ್ಪ "ಈಗ ಬಂಡಾಯ ಹತ್ತು ವರ್ಷದಾಟಿದೆ. ತನ್ನ ತಾತ್ವಿಕತೆಯಲ್ಲಿ ಅದು ಗಟ್ಟಿಯಾಗಿದೆ. ಈಗ ನಾವು ನಮ್ಮನ್ನು ಮರುಪರಿಶೀಲನೆಗೆ

ತೊಡಗಿಸಿಕೊಳ್ಳಬೇಕು. ನಾವು ಇಲ್ಲಿಯತನಕ ನವ್ಯವನ್ನು ಸಮರ್ಥಿಸಿಕೊಳ್ಳುವ ಧಾಟಿಯಲ್ಲಿ ವಿಮರ್ಶೆ ಮಾಡಿದೆವು. ಒಂದು ಬಗೆಯಲ್ಲಿ ನಮ್ಮದು ಕಾವ್ಯಮೀಮಾಂಸೆಯಾಗಿತ್ತು. ನಾವು ಏನು ಹೇಳಬೇಕೆಂದು ಹೆಚ್ಚು ಯೋಚಿಸಿದೆವೇ ಹೊರತು ಹೀಗೆ ಹೇಳಬೇಕು ಎಂಬ ಕಡೆ ತುಸು ಅಲಕ್ಷ್ಯ ಮಾಡಿದೆವು. ಆದರೆ ಈಗ ತಾತ್ವಿಕತೆಯನ್ನು ಕಲಾತ್ಮಕತೆಯನ್ನು ಒಂದು ತುಲನೆಯಲ್ಲಿ ನೋಡಬೇಕು" ಎಂಬರ್ಥದ ಮಾತುಗಳನ್ನು ಹೇಳಿದರು. ಚಂಪಾ ಅದನ್ನು ಸಮರ್ಥಿಸಿದರು.

ನಾನು ಪ್ರಾರಂಭದಲ್ಲಿಯೇ ಹೇಳಿದ ಹಾಗೆ ಈಗ ನವ್ಯದ ಪ್ರಗತಿಶೀಲದ ಮತ್ತು ನವೋದಯದ ಸಾಹಿತ್ಯ ಮತ್ತು ವಿಮರ್ಶೆಯನ್ನು ನೇತಾತ್ಮಕವಾಗಿ ನೋಡದೆ ಧನಾತ್ಮಕವಾಗಿ ನೋಡುವ ವಸ್ತುನಿಷ್ಠತೆಯನ್ನು ಕೋರಲಾಗುತ್ತದೆ. ಇದರ ಅರ್ಥ ಮೊದಲಿನ ಬಂಡಾಯದ ವಿಮರ್ಶೆಯಲ್ಲಿ ಸಮರ್ಥನೆಯದು ; ಸಾಹಿತ್ಯವೆಲ್ಲ ಕಲಾತ್ಮಕತೆಯನ್ನು ನಿರಾಕರಿಸಿದ್ದು ಎಂದು ಅರ್ಥವಲ್ಲ. ಸಾಹಿತ್ಯದ ಆಶಯ ಬದಲಾದಾಗ ಅದರ ಆಕಾರ ಬದಲಾಗಲೇಬೇಕಾಗುತ್ತದೆ. ಸಾಹಿತ್ಯ ಜನಮುಖಿಯಾದಾಗ ಬಂಧನದಲ್ಲಿ ಸರಳತೆ ಬರಲೇಬೇಕಾಗುತ್ತದೆ. ಇದನ್ನು ಚಂಪೂ ಸಾಹಿತ್ಯವನ್ನು ವಚನ ಸಾಹಿತ್ಯವನ್ನು ಒಟ್ಟೊಟ್ಟಿಗೆ ಇಟ್ಟು ಕೂಡ ನೋಡಬೇಕು. ಆ ಕಾರಣದಿಂದ ಬಂಡಾಯ ಸಾಹಿತ್ಯದ ವಸ್ತು ಬದಲಾಗಿ ಬಂಧವೂ ಬದಲಾಗಿದೆ. ಕಲಾತ್ಮಕತೆ ಕೂಡ ಬೇರೆ ಬಗೆಯದಾಗಿದೆ. ಆದರೆ ಕಲಾತ್ಮಕತೆಗಿಂತ ವಸ್ತುವಿನ ಕಡೆ ಜೋರು ಇತ್ತು ಎಂದು ಮಾತ್ರ ಅರ್ಥ.

ಆದರೆ ಈಗ ಬಂಡಾಯ ತನ್ನ ತಾತ್ವಿಕತೆಯಲ್ಲಿ ಬದಲಾಗಿಲ್ಲ. ಹಾಗಾಗದೇ ಅವು ಇನ್ನು ಗಟ್ಟಿಯಾಗುತ್ತಿದೆ. ಅದರ ಜನಪರತೆ, ರಾಜಕೀಯ ಬದ್ಧತೆ ಗಂಭೀರವಾಗುತ್ತಿದೆಯೇ ಹೊರತು ಬದಲಾಗುತ್ತಿಲ್ಲ. ಹೊಸ ಕನಸನ್ನು ಕಂಡರಿಸುವ ಅವರ ಆಶಯಕ್ಕೆ ಕುಂದು ಬಂದಿಲ್ಲ. ಜೊತೆಗೆ ಇತ್ತೀಚಿನ ದಿನಗಳಲ್ಲಿ ಬಂಡಾಯ ಸಾಹಿತ್ಯ ತನ್ನ ಕಲಾತ್ಮಕತೆಯನ್ನು ಹೆಚ್ಚಿಸಿಕೊಳ್ಳುತ್ತಿದೆ. ಅಬ್ಬರವಾಗುವ ಬದಲು ಮಂದವಾಗಿ ಆಕಾರವನ್ನು ಪಡೆಯುತ್ತಿದೆ. ಒಳ-ಹೊರವನ್ನು ಸಮತೋಲನ ಗ್ರಹಿಸುವಲ್ಲಿ ಕಾಳಜಿವಹಿಸುತ್ತಿದೆ.

ಈ ಪರಿವರ್ತನಶೀಲ ನವ್ಯದ ಇತ್ತೀಚಿನ ಉದಾಹರಣೆಯಾಗಿ ಯಶವಂತ ಚಿತ್ತಾಲರ 'ಪುರುಷೋತ್ತಮ' ನೋಡಬಹುದು. ಚಿತ್ತಾಲರು ನವ್ಯ ಗದ್ಯಕಾರರಲ್ಲಿ ದೊಡ್ಡ ಹೆಸರು. ಒಂದೊಂದು ವಾಕ್ಯವನ್ನು ತಿದ್ದಿ ತೀಡಿ, ಒರೆಗಲ್ಲಿಗೆ ಹಚ್ಚಿ ಅದು [illegible] ಚಿನ್ನ ಎಂದು ಗೊತ್ತು ಮಾಡಿಕೊಂಡೇ, ಕಾಗದದಲ್ಲಿ ಮೂಡಿಸುವವರು. ಈ ಕುಸುರಿನ ಕಲಾಗಾರಿಕೆ ಪುರುಷೋತ್ತಮದಲ್ಲೂ ಇದೆ. ಪುರುಷೋತ್ತಮ ಬೃಹತ್ ಕಾದಂಬರಿ. ಆದರೆ ಈ ಬೃಹತ್ ಕಾದಂಬರಿಯ ನಡೆಗೆ ಅವರ ಈ ಕುಸುರಿನ ಕೆಲಸವೇ ಓದುಗರಿಗೆ ತುಸು ಕಿರಿ ಕಿರಿ ಉಂಟು ಮಾಡಿದರೆ ಆಶ್ಚರ್ಯವಲ್ಲ. ಇಲ್ಲಿ ಕಾದಂಬರಿಯ ವಿಮರ್ಶೆಗೆ ಇದು ಸರಿಯಾದ ಸ್ಥಾನವಲ್ಲ. ಆದರೆ ಅಲ್ಲಿಯೂ ನವ್ಯ

ಕಲಾಗಾರಿಕೆ, ತನ್ನನ್ನೇ ತಾನು ನೋಡಿ 'ಅಬ್ಬ ಆಹಾ' ಎಂದು ತನತಾನೇ ಬೆರಗು ಪಡೆವ ಗುಣ ಅದೇ ಥೇಟ್ ನವ್ಯದ್ದೆ. ಒಂದು ಕೂಡ್ರುವ ಸ್ಥಳದಿಂದ ಹಿಡಿದು ಮಾತಿನ ಧ್ವನಿಯ ತನಕ ಒಳಗೇ ಹೊರಗನ್ನು ಡಿಕ್ಟೇಟ್ ಮಾಡುತ್ತದೆ. ಆದರೆ ಕಾದಂಬರಿ ಕೊನೆಯಾಗುವದು ಪುರುಷೋತ್ತಮ ತಾನೂ ಗಟ್ಟಿಯಾಗಿ, 'ಜೋಪಡಿಭಾವ'ದ ಕಾರ್ಯದಲ್ಲಿ ಸಹಭಾಗಿಯಾಗುವ ಆಶಾವಾದದಲ್ಲಿ. ಪುರುಷೋತ್ತಮ ತನ್ನ ತಾಯಾದಿಯ ಮರಣದ ಕಾರಣದಿಂದ ಅವನ ಹೆಸರಿನಲ್ಲಿ ಹಾಸ್ಪಿಟಲ್ ತೆರೆಯುವ ಬಂಡವಾಳಶಾಹಿ ಉದಾರವಾದಿತ್ವಕ್ಕೆ ವಾರಸುದಾರನಾಗುವನಾದರೂ ಅದನ್ನು ಮೀರಿ 'ಜೋಪಡಿ ಬಾಬಾ'ನ ಕಡೆಗೆ ತುಡಿಯುವ ಒತ್ತಡ ಒಟ್ಟಲ್ಲಿ, ಅದು ಕಾದಂಬರಿಯ ಧನಾತ್ಮಕ ಅಂಶವಾಗಿದೆ. ಅತ್ಯುತ್ತಮವಾದ ಬೆಳವಣಿಗೆ ಸಹಜ ನಡೆಯಿಂದ ಸಮಾಜಮುಖಿಯಾಗುವುದು ಮಹತ್ವದ ಸಾಧನೆಯಾಗಿದೆ.

ಬಂಡಾಯದ ಇತ್ತೀಚಿನ ಕೃತಿಗಳ ಉದಾಹರಣೆಯಾಗಿ ಕಟ್ಪಾಡಿಯವರ 'ನೋಂಬು' 'ಸರಕುಗಳು' ಕಾ.ತ. ಚಿಕ್ಕಣ್ಣನವರ 'ಮುರಿಜಾವು', ಕೆ. ಸತ್ಯನಾರಾಯಣ ಅವರ ಒಂದು 'ಕಥಾನಕದ ಮೂಲಕ', ಚೆನ್ನಣ್ಣ ವಾಲೀಕಾರರ 'ಹುಲಿಗೆಮ್ಮ'ಗಳನ್ನು ನೋಡಬಹುದು.

ನೋಂಬುವಿನ ಕತೆಯಲ್ಲಿ ಕಟ್ಪಾಡಿ ಸಾಧಿಸಿದ ಕಲಾತ್ಮಕತೆಯ ಯಶಸ್ಸು ಬೆರಗುಗೊಳಿಸುವಂತಹುದು. 'ಮುಸುಕು' ಕತೆಯಲ್ಲಿ ಹುಡುಗಿ ಬುರ್ಖಾ ತೊಡುವಾಗಿನ ವಿಪ್ಲವತೆಯ ಅಭಿವ್ಯಕ್ತಿ, ಹೊರ ಒಳ, ಒಳ ಹೊರ ಒಂದರ ಮೇಲೆ ಒಂದು ಬೆಳಕು ಚೆಲ್ಲುತ್ತ ಸಾಗುವ ರೀತಿ ತುಂಬ ಕಲಾತ್ಮಕವಾಗಿದೆ. ಇಲ್ಲೆಲ್ಲಿಯೂ ಆಕ್ರೋಶದ ಅಬ್ಬರವೇ ಇಲ್ಲ. ಆದರೆ ಕಥೆಯ ಸಾಮಾಜಿಕ ಆಶಯ ನಿಚ್ಚಳವಾಗಿದೆ.

'ಮುರಿಜಾವು' ಕಾದಂಬರಿಯು ಬಂಡವಾಳಶಾಹಿ ವ್ಯವಸ್ಥೆಯ ಅಡಿಯಲ್ಲಿ ಗ್ರಾಮೀಣ ನಗರದ ಆಕ್ರಮಣಕ್ಕೆ ಒಳಗಾಗುತ್ತಿರುವ ರೀತಿ ಅನಾವರಣಗೊಳಿಸುತ್ತದೆ. ಕಾದಂಬರಿಯ ಕಸ್ತೂರಿಯ ಸಿಟ್ಟಿಗೆ ಸಿಕ್ಕಬೇಕಾದ ಒತ್ತು ಸಿಕ್ಕಿಲ್ಲ ಎಂದು ಮುನ್ನುಡಿಯಲ್ಲಿ ಡಾ: ಡಿ. ಆರ್. ನಾಗರಾಜ್ ಮತ್ತು ವಿಮರ್ಶೆಯಲ್ಲಿ ಡಾ: ಆರ್ಕೆ. ಮಣಿಪಾಲ ಸರಿಯಾಗೇ ಗುರುತಿಸಿರುವದು ಹೌದಾದರೂ ಜಾತಿ ಜನರಿಂದ ಹಾಗೂ ಜಮೀನುದಾರಿಕೆಯಿಂದ ಆಘಾತ ಆಗುತ್ತಿರುವುದು ಅದು ನಗರೀಕರಣಕ್ಕೆ ಪೂರಕವಾಗಿರುವುದು ಒಟ್ಟೊಟ್ಟಿಗೆ ಒಂದು ಸಂಕೀರ್ಣ ಸಂದರ್ಭದ ಸೂಕ್ಷ್ಮತೆಯ ನಿರೂಪಣೆಯಾಗಿದೆ. ಲೇಖಕರು ಸಂಭಾಷಣೆಗೂ ವಿವರಣೆಗೂ ಬಳಸಿಕೊಂಡ ಗ್ರಾಮೀಣ ಭಾಷೆಯ ಪಡಿಯಚ್ಚು ಕೂಡ ವಸ್ತುವಿಗೆ ಅವಿಭಾಜ್ಯ ಅಂಗವಾಗಿ ಬಂದಿರುವದು ಮಹತ್ವಾದ್ದಾಗಿದೆ. ಇಲ್ಲಿಯ ಭಾಷೆ ದೇವನೂರು ಮಹಾದೇವರ 'ಒಡಲಾಳ'ದ ಭಾಷಾ ಶಕ್ತಿಯೊಡನೆ ಹೋಲಿಸಬಹುದಾಗಿದೆ. ಒಡಲಾಳದ ಉದಾಹರಣೆ

ಯನ್ನೇ ಯಾಕೆ ಕೊಟ್ಟೆನೆಂದರೆ ಅವರ ಇತ್ತೀಚಿನ ಕೃತಿಯಾದ 'ಕುಸುಮಬಾಲೆ'ಯ
ಕುರಿತು ನನ್ನ ಅಭಿಪ್ರಾಯ ಬಂದ ನಮ್ಮ ವಿಮರ್ಶಕರ ವಿಮರ್ಶೆಗಿಂತ ಭಿನ್ನವಾಗಿದೆ
ಎಂಬ ಕಾರಣಕ್ಕಾಗಿ.

ಚೆನ್ನಣ್ಣ ವಾಲೀಕಾರರ 'ಹುಲಿಗೆಮ್ಮ'ದಲ್ಲಿ ಭಾವಮಯತೆ ತುಸು ಹೆಚ್ಚಾಗಿ
ತೆಂದೇ ನನಗೆ ಅನಿಸಿದರೂ ಹುಲಿಗೆಮ್ಮನ ಚಿತ್ರಣ ಹಾಗೂ ಅಲ್ಲಿ ಪುಟಗೊಂಡು
ಬರುವ ವರ್ಗ ಸ್ವಭಾವ, ವರ್ಗ ಹೋರಾಟದ ನಿಖರತೆ ಇಲ್ಲದಾಗ ವೈಯಕ್ತಿಕ
ಪ್ರತಿಭಟನೆಯನ್ನೇ ಪಕ್ಕಾಗಿಸುವ ರೀತಿ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಹಿಂಸೆಯನ್ನು
ಅಕೃತ್ರಿಮಗೊಳಿಸುವ ರೀತಿಯಿದೆ. ಇಲ್ಲೂ ಆಕ್ರೋಶ ವಾಚ್ಯವಾಗುವುದಿಲ್ಲ.

ಅದರಂತೆ **ಕೆ. ಸತ್ಯನಾರಾಯಣರ** ಒಂದು ಕಥಾನಕದ ಮೂಲಕದಲ್ಲಿ ಬಂಡ
ವಾಳಶಾಹಿ ಉತ್ಪನ್ನ ಮಾಡಿದ ಮೇಲು ಮಧ್ಯಮ ವರ್ಗದ ಮಡಿವಂತಿಕೆಯ ಹಿಂಸೆ.
ಮಾನಸಿಕ ಅನುತಾಪ, ತಾವೇ ರಚಿಸಿಕೊಂಡ ನಿಯಮಕ್ಕೆ ತಾವೆ ಬೆಚ್ಚಿಬೀಳುವ ರೀತಿ
ಯನ್ನು ಸುಜಾತಾಳ ಮಾನಸಿಕ ಆಘಾತ ನಿರುಪರಾಯನ ಅಸಮತೋಲ ವರ್ತನೆಯಲ್ಲಿ
ಸೆರೆಹಿಡಿಯಲಾಗಿದೆ. ಕಾದಂಬರಿಯ ಕೊನೆಗೆ ಎಲ್ಲಾ ಒಂದು ಬಗೆಯಲ್ಲಿ ನಿರೂಪನ
ಭ್ರಮ ನಿರಸನದ ಸಂದರ್ಭದಲ್ಲಿ ಪ್ರಶಾಂತ ಹೇಳುವ ಮಾತು ಬಹಳ ಮುಖ್ಯವಾಗಿದೆ.
"ನಮಗನಿಸಿದ್ದನ್ನು ಇನ್ನೊಬ್ಬರಿಗೆ ಹೇಳೊಕ್ಕಾಗೊಲ್ಲ ; ಎನ್ನುವುದು ಹಾಗೆ ಹೇಳಿದರೂ
ಇನ್ನೊಬ್ಬರಿಗೆ ಅರ್ಥವಾಗಲೊಲ್ಲದು ಅನ್ನುವ ವಿಶ್ವಾಸ ಇಲ್ಲದೇ ಇರೋದು ಎರಡು
ಕೊನೆಗೆ ಮನುಷ್ಯನ ಬಗ್ಗೆ ನಂಬಿಕೆ ಕಳಕೊಂಡ ಸ್ಥಿತಿಯೇ. ನಮ್ಮ ಕುಟುಂಬದ ಸದಸ್ಯ
ರಿಗೋ ನಮ್ಮ ಜಾತಿಯವರಿಗೋ ನಮಗೆ ಬೇಕಾದವರಿಗೆ ಮಾತ್ರವೊ ನಮ್ಮ ಅಂತ-
ರಂಗದ ಕಷ್ಟಗಳನ್ನು ಹೇಳಿಕೊಳ್ಳಬಹುದು. ಅವರಿಗೆ ಮಾತ್ರ ಅರ್ಥವಾಗುತ್ತೆ.
ಅರ್ಥವಾಗೋದು, ಅನ್ನೋದು ಕೂಡ ವಿಶಾಲವಾದ ಅರ್ಥದಲ್ಲಿ ಮನುಷ್ಯರಲ್ಲಿ
ನಂಬಿಕೆ ಕಳಕೊಂಡ ಸ್ಥಿತಿಯೇ. ಹಾಗೆ ನಂಬಿಕೆ ಕಳೆದುಕೊಂಡ ತಕ್ಷಣವೇ ನಾವೇನೂ
ಸ್ವಾವಲಂಬಿಯಾಗೊಲ್ಲ. ಕ್ರಮೇಣ ನಮ್ಮ ಶಕ್ತಿಯಲ್ಲೂ ನಮಗೆ ನಂಬಿಕೆ ಹೋಗಿ
ಬಿಡುತ್ತೆ ಗೊತ್ತಾ ?" (ಪು ೨೧೭) ಹಾಗೇ ಮುಂದುವರಿದು ಮನುಷ್ಯ ಇಡೀ ಮಾನುಷ್ಯ
ಕೋಟಿಯ ಬಗ್ಗೆ ಮನುಷ್ಯಕೋಟಿ ಪ್ರತಿ ಮಾನುಷ್ಯನ ಬಗ್ಗೆ ಭರವಸೆಗಳು ಬಂದಿದ್ದರೆ
ಎನ್ನುವ ಮಾತು ಕಾದಂಬರಿಯ ಐಡಿಯಾಲಾಜಿಯನ್ನು ಕೈಗೆ ತೆಗೆದುಕೊಳ್ಳುತ್ತದೆ.
ಕಥಾ ಹಂದರದ ವ್ಯೂಹ ರಚನೆಯಲ್ಲಿ ಚಿತ್ತಾಲರ ನೆನಪನ್ನು ತರುತ್ತಿರುವಂತೆಯೇ
ತಟ್ಟನೆ ಕಾದಂಬರಿ ತನ್ನ ತಾತ್ವಿಕತೆಯ ಸಮಾಜವಾದಿ ಗುಣವನ್ನು ಮಿಂಚಿಸುವ ರೀತಿ
ಯಲ್ಲಿ ಕಾದಂಬರಿ ಆಕೃತಿಗೊಂಡಿರುವುದು ಒಂದು ಕುತೂಹಲಕಾರಿ ಪ್ರಯೋಗವಾಗಿದೆ.
ಈ ಪ್ರಶಾಂತ ಕಾದಂಬರಿಗುಂಟ ನಿರೂಪಕ ನೇರವಾಗಿ ಯಾಕೆ ಕಾಡಲಿಲ್ಲ ಎಂದು ನಮಗೆ
ಅನ್ನಿಸುವುದಾದರೂ ಈಗಿದ್ದಂತೆ ಇದೊಂದು ಯಶಸ್ವೀ ಪ್ರಯೋಗವಾಗಿದೆ. ಎಲ್ಲಿಯೂ

ಆಕ್ರೋಶದ ಅಬ್ಬರವಿಲ್ಲ. ಹಾಗಂತ ಕೃತಿಯಲ್ಲಿ ಅಬ್ಬರವೇ ಆಕ್ರೋಶವೇ ಇರಲೇ ಬಾರದೆಂದು ನನ್ನ ಅಭಿಪ್ರಾಯವಲ್ಲ. ಯಾಕೆಂದರೆ ಹಾಗೆ ದನಿಗೈಯ್ಯುವ ಧಾಟಿ ಎಲ್ಲಿಗೆ ಹೋಗಿ ತಲ್ಪಬಹುದೆಂಬುದಕ್ಕೆ ಕೆ. ಜಿ. ನಾಗರಾಜಪ್ಪನವರ ಮಾತು ಸೂಕ್ತ ಬೆಳಕು ಚೆಲ್ಲುತ್ತದೆ. ಅವರು "... ಕೆಳವರ್ಗದ ಬರಹಗಾರನ ನಿಷ್ಠೆ ತನ್ನ ಜನಾಂಗದ ಸಂಸ್ಕೃತಿಗೆ ನಾಲಿಗೆಯಾಗುವ ಮತ್ತು ಉಚ್ಚವರ್ಗದ ಕಲಾತ್ಮಕ ಮಾದರಿಯ ಬರಹ ಗಳನ್ನು ಮೈಗೂಡಿಸಿಕೊಳ್ಳುವ ಇಬ್ಬಂದಿತನಕ್ಕೆ ಸಿಲುಕಿ ತೊಳಲುತ್ತದೆ ತುಳಿತದ ವಿರುದ್ಧ ಪ್ರತಿಭಟನೆಯ ದನಿ ಕ್ರಮೇಣ ಶಿಷ್ಟಮಾನ್ಯ ಮುದ್ರೆ ಒತ್ತಿಸಿಕೊಳ್ಳುವ ಪ್ರಯತ್ನದಲ್ಲಿ ಕರಗಿಹೋಗುವ ಅಪಾಯದಿಂದ ಪಾರಾಗಿ ತನ್ನತನವನ್ನು ಕಳಕೊಳ್ಳುವ ಬಗ್ಗೆ ಎಚ್ಚರಿಕೆ ಅಗತ್ಯವಾಗಿದೆ. ಇಲ್ಲದಿದ್ದರೆ ಮತ್ತೆ ಇತಿಹಾಸಕ್ಕೆ ಚಕ್ರಗತಿಯೇ ಸ್ಥಿರ ವಾಗುತ್ತದೆ." (ಸಾಹಿತ್ಯ ಮತ್ತು ಸಾಮಾಜಿಕ ನಿಲುವು-ಮುನ್ನುಡಿ ಕರ್ನಾಟಕ ಸಾಹಿತ್ಯ ಅಕಾಡೆಮಿ ೧೯೮೯) ಎನ್ನುತ್ತಾರೆ. ಇದು ನಮಗೆ ಎಚ್ಚರಿಕೆಯ ಮಾತಾಗಿದೆ.

.... ಬಂಡಾಯ ತನ್ನ ಹತ್ತು ವರ್ಷದಲ್ಲಿ ಮೈಗೂಡಿಸಿಕೊಂಡ ಅರಿವಿನ ಎಚ್ಚರ ದಲ್ಲಿ ಬಂಡಾಯತನ ಹೆಚ್ಚು ಚಿಂತನಶೀಲತೆಯನ್ನು, ಕಲಾತ್ಮಕತೆಯನ್ನು ಒಳಗೊಳ್ಳು ತ್ತಾನೆ. ಸಾಂಸ್ಕೃತಿಕ ಸಂದರ್ಭವನ್ನು ಅಖಂಡವಾಗಿ ಹಿಡಿದಿಡುವ ಭಾಷೆ ಅನುಭವದ ಮುಖಾಂತರವೇ ತಾತ್ವಿಕತೆಯ ಆವಿಷ್ಕಾರಗೊಳಿಸುವಿಕೆ ಅಷ್ಟಾಗಿಯೂ ಆಳದಲ್ಲಿ ಜಾಗ್ರತವಾಗಿರುವ ರಾಜಕೀಯ ಪ್ರಜ್ಞೆ ಬಂಡಾಯ ಸಾಹಿತ್ಯದ ಇತ್ತೀಚಿನ ಬೆಳವಣಿ ಗೆಯ ಧನಾತ್ಮಕ ಅಂಶವಾಗಿದೆ.

(ಉತ್ತರ ಕನ್ನಡ ಜಿಲ್ಲೆಯ ಸಾಹಿತ್ಯ ಪರಿಷತ್ತಿನ ಸಾಹಿತ್ಯ ಸಮ್ಮೇಳನದಲ್ಲಿ ಮಂಡಿಸಿದ ಪ್ರಬಂಧ)

ಚಂದ್ರ ಬಿಂಬ

ಹೇಳಿದ್ದಿಯಾ ನೀ ಆ ದಿನ
ಬೇಕಾದರೆ ಕೇಳು ಚಂದ್ರನ
ತಂದು ಕೊಡುವೆ !
ಕತ್ತಲೆ ರಾತ್ರಿಯಲಿ ಮಾಯವಾಗಿದ್ದು
ಹುಣ್ಣಿಮೆ ರಾತ್ರಿಗೆ ಬಂದಿರುವಿ ನೀ !
ನೀರು ತುಂಬಿದ ಬಟ್ಟಲು
ಕೈಯಲಿ ಹಿಡಿದು
ಅದರಲ್ಲಿಟ್ಟು ಚಂದ್ರನ ಬಿಂಬ ! !

ಹಿಂದಿ : ಅಭಿಮನ್ಯು ಅನತ

ಕನ್ನಡಕ್ಕೆ ; **ನಜೀರ್ ಚಂದಾವರ**

ದಲಿತ ಲೋಕದ ಒಳಗೆ

ಎಲ್. ಹನುಮಂತಯ್ಯನವರ "ದಲಿತ ಲೋಕದ ಒಳಗೆ" ಲೇಖನಗಳ ಸಂಗ್ರಹ, ಹೆಸರೇ ಸೂಚಿಸುವಂತೆ ಇದು ದಲಿತ ಸಂಘಟನೆ, ಹೋರಾಟ, ಸೈದ್ಧಾಂತಿಕ ನಿಲುವು ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿ. ದಲಿತ–ಬಂಡಾಯ ಸಾಹಿತ್ಯಿಕವಾಗಿ ಮತ್ತು ಅದಕ್ಕೆ ಬೆನ್ನೆಲುಬಾದ ಸೈದ್ಧಾಂತಿಕತೆಯ ಬಗ್ಗೆ ಗಂಭೀರವಾಗಿ ವಿಚಾರಿಸಿ ಕೊಂಡು ಹೆಜ್ಜೆ ಇಡಬೇಕಾದ ಅವಶ್ಯಕತೆಯನ್ನು ಈ ದಶಕ ತಂದಿದೆ. ಚಿಂತನೆಗೆ ಬೇಕಷ್ಟು ಕಚ್ಚಾವಸ್ತುವನ್ನು ಒದಗಿಸಿದೆ. ಹೋರಾಟದ ಮಧ್ಯದಿಂದಲೇ ಮೂಡಿಬಂದ ಹನುಮಂತಯ್ಯನವರ ಇಲ್ಲಿನ ಚಿಂತನೆಗಳು ಮಹತ್ವದ ಸ್ಥಾನ ಪಡೆದುಕೊಳ್ಳುತ್ತವೆ. ಯಾಕೆಂದರೆ ಅವರ ಈ ಚಿಂತನೆಗಳು ವಾಸ್ತವತೆಯ ಅಥವಾ ಪ್ರತ್ಯಕ್ಷ ಸಾಕ್ಷಿಯ ರಕ್ತ ಮಾಂಸಗಳನ್ನು ಪಡಕೊಂಡವು.

ಹಾಗಂತ ಇವು ಪರಿಪೂರ್ಣವಾದವು ಎಂದೇನೂ ಅಲ್ಲ. ಅದರ ಅರಿವು ಸ್ವತಃ ಲೇಖಕರಿಗೇ ಇದೆ. "ಇಲ್ಲಿನ ಲೇಖನಗಳು ಕಾಲದ ತುರ್ತಿಗೆ ಬರೆದವು ; ಆದ್ದರಿಂದಲೇ ಈ ಪ್ರಬಂಧಗಳಿಗೆ ಮಿತಿಗಳಿವೆ ಎಂದು ಬಲ್ಲೆ" ಎಂದು ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಇದು ವಿನಯವೂ ಹೌದು, ಸತ್ಯವೂ ಹೌದು. ಆದರೂ ಅದು ತನ್ನ ಮಹತ್ವವನ್ನು ಯಾಕೆ ಕಳೆದುಕೊಳ್ಳಲಿಲ್ಲವೆಂದರೆ ಅವೆಲ್ಲವೂ ಒಂದು ವೈಜ್ಞಾನಿಕ ಅನ್ವೇಷಣೆಯ ವಿಚಾರ ಧಾರೆಗೆ ಒಡೆದ ಟಿಸಿಲುಗಳೇ ಆಗಿವೆ. ಆದ್ದರಿಂದ ಲೇಖನಗಳಲ್ಲಿ ಪ್ರಾರಂಭದಿಂದ ಕೊನೆತನಕ ಪೂರಕತೆಯಿದೆ. ಹಾಗೆಯೇ ಸಾಂದರ್ಭಿಕ ಆವೇಶದಿಂದ ಆಕ್ರೋಶಕ್ಕೆ ಅವಕಾಶವಾಗದೆ ಒಂದು ನಿಧಾನಗತಿಯ ಮತ್ತು ಚಾರಿತ್ರಿಕ ದೃಷ್ಟಿಕೋನದ ತಾರ್ಕಿಕತೆಯನ್ನು ಹೊಂದಿ ಒಂದು ಪ್ರೌಢ ವಿಧಾನವನ್ನು ಅನುಸರಿಸಿದೆ.

ಪ್ರಸ್ತುತ ಸಂದರ್ಭದಲ್ಲಿ ಮತ್ತೆ ಮತ್ತೆ ಚರ್ಚೆಗೊಳಗಾಗುವ ಒಂದು ಪಾರಿಭಾಷಿಕ ಪದ 'ದಲಿತ ಸಾಹಿತ್ಯ'. ಇದರ ನಿರ್ವಚನೆಯನ್ನು ಡಾ|| ಜಿ. ಎಸ್. ಶಿವರುದ್ರಪ್ಪ ಮತ್ತು ಬರಗೂರು ರಾಮಚಂದ್ರಪ್ಪ ಅವರ ಅಭಿಪ್ರಾಯದೊಡನೆ ದಲಿತ ಎಂದರೆ "ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಶೋಷಿತರಾದ ಎಲ್ಲ ಜನವರ್ಗವನ್ನು ಸೇರಿಸಿದರೂ, ಸಾಹಿತ್ಯಕವಾಗಿ ಅಸ್ಪಷ್ಟತೆಯನ್ನು ನಿವಾರಿಸಲು ಅಸ್ಪೃಶ್ಯರು ಮತ್ತು ಇವರಷ್ಟೇ ಶೋಷಣೆಗೊಳಗಾದ ಕೆಳವರ್ಗದ ಜನರು" ಎಂದು ಸ್ಪಷ್ಟಪಡಿಸುತ್ತ ಈ ದಲಿತರು "ತಮ್ಮ ಅನುಭವವನ್ನು ಹೆಚ್ಚು ವಸ್ತುನಿಷ್ಠವಾಗಿ ಹೇಳಬಲ್ಲರು ಮತ್ತು ಅದು ನಿಜವಾಗಿ ದಲಿತ ಸಾಹಿತ್ಯವಾಗಬಲ್ಲದು" ಎಂದು ಹೇಳಿ "ಎಲ್ಲ ಕ್ರಾಂತಿಪರ

ದಲಿತ ಸಾಹಿತಿಗಳೆಲ್ಲ ಬಂಡಾಯ ಸಾಹಿತಿಗಳು" ಎಂದು ಸ್ಪಷ್ಟಪಡಿಸಿದ್ದಾರೆ. ಮತ್ತೆ ದಲಿತ ಸಾಹಿತ್ಯ (ಬಂಡಾಯ ಕೂಡ) ಪ್ರಗತಿಪರವಾಗಿರಬೇಕು. ಪ್ರತಿಭಟನೆಯನ್ನೊಳ ಗೊಂಡಿರಬೇಕು ಎಂಬ ಮುಖ್ಯ ಅಂಶವನ್ನು 'ದಲಿತ ಸಾಹಿತ್ಯದ ರೂಪ ಲಕ್ಷಣಗಳು' ಎಂಬ ಲೇಖನದಲ್ಲಿ ಹೇಳಿ ಪೂರ್ಣಗೊಳಿಸಿದ್ದಾರೆ.

ಲೇಖಕರು ವಿಚಾರ ಮಂಡನೆಯಲ್ಲಿ ತೋರುವ ಸಾವಧಾನತೆ ಮೆಚ್ಚಬಹುದು. ಅವರ ವಿಚಾರ ತಾರ್ಕಿಕತೆಯನ್ನೊಳಗೊಂಡಿರುವುದೇ ಇದಕ್ಕೆ ಕಾರಣವಾಗಿದೆ. ಕುವೆಂಪು, ಗೋರೂರು ಮೊದಲಾದವರ ಕುರಿತು ಲೇಖಕರು ತೋರುವ ಸದಭಿರುಚಿ ಸ್ವಾಗತಾರ್ಹವಾಗಿದೆ. ದಲಿತ ಸಾಹಿತ್ಯ ಮತ್ತು ದಲಿತ ಸಂಘಟನೆಯ ಪ್ರೇರಣೆಯನ್ನು ಅವರು ಚಾರಿತ್ರಿಕ ಆಧಾರದಿಂದ ನಿರೂಪಿಸುತ್ತಾರೆ. ಹೀಗೆ ಮಾಡುವದರಿಂದ ಸಂಘಟನೆಯ ಪ್ರಸ್ತುತೆಯ ಅರ್ಥ ಮತ್ತು ಮುಂದುವರಿಕೆಯ ಸ್ವರೂಪವನ್ನು ನಿರ್ಧರಿಸಲು ಒಂದು ವೈಜ್ಞಾನಿಕ ಸ್ವರೂಪವನ್ನು ತೋರಿದಂತಾಗುತ್ತದೆ.

ಬಂಡಾಯ ಸಾಹಿತ್ಯ ಸಂದರ್ಭ ಹಾಗೂ ಸಾಹಿತ್ಯ ಸಮಾಜ ಮುಖಿಯಾಗುವುದರ ಹಿನ್ನೆಲೆಯನ್ನು ಸರಿಯಾಗಿಯೇ ವಿಶ್ಲೇಷಿಸುತ್ತ ಬಂಡಾಯ ಕಾವ್ಯ ಯಾಕೆ ಪ್ರತಿಭಟನೆಯನ್ನು ಒಳಗೊಂಡಿತು ಎಂಬುದನ್ನು ವಿವರಿಸಿದ್ದಾರೆ. 'ಮೀಸಲಾತಿ ಒಂದು ವಿಶ್ಲೇಷಣೆ' ದಲಿತ ಮನಸ್ಸಿನ ಒಳನೋಟವನ್ನು ಕೊಡುವಲ್ಲಿ ಮಹತ್ವದ್ದಾಗಿದೆ. ದಲಿತರಿಗೆ ಮೀಸಲಾತಿ ಒಂದು ಸೌಭಾಗ್ಯ ಎಂದೋ, ಪುಕ್ಕಟೆ ಸಂಪತ್ತು ಎಂದೋ ಹೀಯಾಳಿಕೆ ಮಾಡುವ ಹನುಮಂತಯ್ಯನವರ ಈ ಮಾತನ್ನು ಗಮನಿಸಬೇಕು. "ಭಾರತದ ಬಂಡವಾಳಶಾಹಿ ಮತ್ತು ಜಮೀನ್ದಾರಿ ಸರ್ಕಾರ ಮತ್ತು ಅದರ ಪೋಷಕರು ಮೀಸಲಾತಿಯನ್ನು ತಮ್ಮ ಸೂಳೆಯನ್ನಾಗಿ ಮಾಡಿಕೊಂಡರು. ಚುನಾವಣೆಯಲ್ಲಿ ಹೆಂಡ ಮತ್ತು ಹಣ ಜೊತೆಯಲ್ಲಿ ಮೀಸಲಾತಿ ಸೇರಿಸಿ ಅದನ್ನು ಮುಂದುವರಿಸುವ ಮೂಲಕ ನಿಮ್ಮ ಪ್ರಗತಿಗೆ ಕಾರಣರಾಗುತ್ತೇವೆಂಬ ಬಣ್ಣ ಬಳಿಯುತ್ತಿದ್ದಾರೆ. ದಿನ ಬೆಳಿಗ್ಗೆ ನಮ್ಮ ಹೆಸರನ್ನು ಜಪಿಸಿ, ಸಮಾಜದ ಉಳಿದ ಜನರಿಂದ ದೂರ ಇರಿಸಿ ಇವರು ಎಂದೂ ಒಂದುಗೂಡದಂತೆ ಎಚ್ಚರಿಕೆ ವಹಿಸಿದರು." ಈ ಮಾತಲ್ಲಿ ಪ್ರಾಮಾಣಿಕತೆಯ ಕತ್ತಿಯ ಅಲಗಿದೆ. ದಲಿತನಿಗೆ ಮೀಸಲಾತಿ ಒಂದು ಊರುಗೋಲಾಗಿ ಬೇಕಿಲ್ಲ. "....ಮೀಸಲಾತಿಯಿಂದ ಈ ದೇಶದ ಹರಿಜನರ ಗಿರಿಜನರ ಅರ್ಥಾತ್ ದಲಿತರ ಬಿಡುಗಡೆ ಇದೆ ಎಂಬುದು ಮೂರ್ಖತನ. ಎಲ್ಲಿಯವರೆಗೆ ನಮ್ಮ ದೇಶದ ಭ್ರಷ್ಟ ವ್ಯವಸ್ಥೆ ಆಮೂಲಾಗ್ರವಾಗಿ ಬದಲಾವಣೆಯಾಗುವುದಿಲ್ಲವೋ ಅಲ್ಲಿಯವರೆಗೆ ನಮ್ಮ ವಿಮೋಚನೆ ಸಾಧ್ಯವಿಲ್ಲ" ಎಂಬ ಎಚ್ಚರ ಇರುವುದು ಲೇಖಕರ ಪ್ರಬುದ್ಧತೆಗೆ ಸಾಕ್ಷಿಯಾಗಿದೆ.

'ಹಿಂಸೆ-ಅಹಿಂಸೆಯ ನಡುವೆ'ಯಲ್ಲಿ ದಲಿತರ ಮೇಲೆ ನಡೆಯುವ ದೌರ್ಜನ್ಯವನ್ನು ವಿಶ್ಲೇಷಿಸುತ್ತಾ ೧) ಭೂ ಸಂಬಂಧಗಳು ೨) ವಿದ್ಯೆ ಮತ್ತು ಕೈಗಾರಿಕೀಕರಣ

ಾ) ಸಾಂಪ್ರದಾಯಸ್ಥ ಗ್ರಾಮೀಣ ಸಮಾಜದ ಹಿನ್ನೆಲೆಯಲ್ಲಿ ಸತರ್ಕವಾಗಿ ವಿಶ್ಲೇಷಿಸಿದ್ದಾರೆ; 'ಅಂಬೇಡ್ಕರ ಮತ್ತು ಗಾಂಧಿ' 'ದಲಿತ ಚಳುವಳಿ ಒಂದು ತಾತ್ವಿಕ ಚಿಂತನೆ' ಮತ್ತು 'ದಲಿತ ನೌಕರರ ಸಂಘಟನೆಗಳ ಜೊತೆ'. ಹೆಚ್ಚು ಮಹತ್ವದ್ದಾಗಿವೆ. ಲೇಖಕರು ಗಾಂಧಿ ಹಾಗೂ ಅಂಬೇಡ್ಕರರ ಸೈದ್ಧಾಂತಿಕತೆಯ ಮುಖಾಮುಖಿ ಮಾಡುತ್ತಾರೆ. ಹಾಗೆಯೇ ಅವರಿಬ್ಬರ ಮಿತಿಯನ್ನೂ ಗುರುತಿಸುತ್ತಾರೆ. ಮೇಲ್ಜಾತಿಯಿಂದ ಬಂದ ಗಾಂಧಿಯ ಆದರ್ಶವಾದ ಕೆಳಜಾತಿಯಿಂದ ಬಂದ ಅಂಬೇಡ್ಕರರ ಆದರ್ಶವಾದದ ಮುಖಾಮುಖಿ ಇನ್ನು ಹೆಚ್ಚಿನ ಚಿಂತನೆಗೆ ದಾರಿ ತೋರುವಂತಹದಾಗಿದೆ. "ದಲಿತ ಚಳುವಳಿಯ ಸ್ಫೂರ್ತಿ ಅಂಬೇಡ್ಕರ್ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೂ ಅದರ ಕೊನೆ ಅಂಬೇಡ್ಕರ್ ಆಗಲು ಸಾಧ್ಯವಿಲ್ಲ" ಎಂಬ ಮಾತೂ ಲೇಖಕರ ವೈಚಾರಿಕತೆಯ ಸಮತೋಲನವನ್ನು ತೋರಿಸುತ್ತದೆ. ದಲಿತ ವಿಮೋಚನೆ ಕೇವಲ ದಲಿತ ಸಂಘದಿಂದ ಮಾತ್ರ ಆಗದೆ ಅದು ಒಟ್ಟು ದುಡಿಯುವ ವರ್ಗದೊಡನೆಯ ಕೂಡು ಹೋರಾಟದಿಂದ ಮಾತ್ರ ಸಾಧ್ಯ ಎನ್ನುವ ಲೇಖಕರ ನಿಲುವು ಅರ್ಥಪೂರ್ಣವಾಗಿದೆ.

ಅಸ್ಪೃಶ್ಯತೆಯ ಕುರಿತಾಗಿ ಕಮ್ಯುನಿಸ್ಟರು ಸೈದ್ಧಾಂತಿಕ ಕಾರ್ಯಕ್ರಮವನ್ನು ರೂಪಿಸಲಿಲ್ಲ ಎಂದು ಲೇಖಕರು ಹೇಳುತ್ತಾರೆ. ಇದೊಂದು ಚರ್ಚೆಯ ಸಂಗತಿ. ಇಂಡಿಯಾದ ಸಂದರ್ಭದಲ್ಲಿ ತಲೆ ತಿನ್ನುವ ಪ್ರಶ್ನೆ ಇದು ಕಮ್ಯುನಿಸ್ಟರನ್ನೂ ಕಾಡಿದೆ. ಕಾಡುತ್ತಲೇ ಇದೆ. ಆದರೆ ಮಾರ್ಕ್ಸ್‌ವಾದಕ್ಕೆ ಒಂದು ಚಾರಿತ್ರಿಕ ಹಾಗೂ ಜಾಗತಿಕ ಹಿನ್ನೆಲೆಯಿದೆ. ವರ್ಗ ಮತ್ತು ಜಾತಿಯನ್ನು ಹೇಗೆ ವಿವರಿಸಿಕೊಳ್ಳಬೇಕು ಎನ್ನುವುದು ಎಲ್ಲಾ ಬುದ್ಧಿಜೀವಿಗಳನ್ನು ಕಾಡುವ ಪ್ರಶ್ನೆಯೇ. ಆದರೆ ಇದು ವೈಚಾರಿಕ ಸಂಗತಿಯೇ ಹೊರತು ಕಮ್ಯುನಿಸ್ಟ್ ಮುಂದಾಳುಗಳು ಮೇಲು ಜಾತಿಯಿಂದ ಬಂದಿರುವುದರಿಂದ ಈ ಸಂಗತಿ ನಿರ್ಲಕ್ಷ್ಯಕ್ಕೆ ಗುರಿಯಾಗಿದೆ ಎನ್ನುವುದು ಸರಿಯಲ್ಲ. ಒಬ್ಬ ದಲಿತನೇ ಆಗಿ, ಸಂಘಟನೆ ಜೊತೆ ಕೆಲಸ ಮಾಡುತ್ತಾ, ನಮ್ಮೆಲ್ಲರ ವಿಮೋಚನೆ ಮಾರ್ಕ್ಸ್‌ವಾದದಲ್ಲಿದೆ ಎಂದು ಗುರುತಿಸಿಕೊಂಡಾಗಲೂ ಮಧ್ಯೆ ನಿಲ್ಲುವ ಅಸ್ಪೃಶ್ಯತೆಯ ಈ ಗೋಡೆಯನ್ನು ಕೆಡಹುವುದು ಹೇಗೆ ಎಂದು ಪ್ರಗತಿಪರರೆಲ್ಲರೂ ಮುಖ್ಯವಾಗಿ ದಲಿತರು ಹಾಗೂ ಮಾರ್ಕ್ಸ್‌ವಾದಿಗಳು ಚಿಂತಿಸಬೇಕಿದೆ. ಈ ಸಮಸ್ಯೆ ಜಟಿಲಕೂಡ. ಆದರೂ ಚರ್ಚೆ ಮುಂದುವರಿಯಬೇಕು. ಈ ಗೋಡೆ ಅಳಿಯಲೇಬೇಕು. ಹೀಗೆ ಗೋಡೆ ಕೆಡಹಿದರೆ ಮಾರ್ಕ್ಸ್ ಸಿದ್ಧಾಂತ, ದಲಿತ ಕ್ರಾಂತಿಕಾರಕ ಶಕ್ತಿ ಒಂದಾಪಂತಾಗುತ್ತದೆ ಮತ್ತು ಅದು ಆಗಬೇಕಾದುದೂ ಹಾಗೆ.

(**ದಲಿತ ಲೋಕದ ಒಳಗೆ** (ಎಲ್. ಹನುಮಂತಯ್ಯ) ಪಾಪಿಸಿ ಪ್ರಕಾಶನ, ಬೆಂಗಳೂರು, **ಬೆಲೆ ರೂ. 15.**)

—ಆರ್. ವಿ. ಭಂಡಾರಿ

ಪುಟ್ಟ ಗುಲಾಬಿ : ಸವೆದ ವಸ್ತುವಿಗೆ ಕಲಾತ್ಮಕತೆಯ ಕವಚ

ಆರು ಕಥೆಗಳನ್ನೊಳಗೊಂಡ ಆರ್. ಡಿ. ಹೆಗಡೆಯವರ 'ಪುಟ್ಟ ಗುಲಾಬಿ ಹೂವೇ' ಕಥಾ ಸಂಕಲನದಲ್ಲಿ ಭಿನ್ನ ವಸ್ತು, ವಿನ್ಯಾಸಗಳ ಕಥೆಗಳಿವೆ. ಮೊದಲ ಕಥೆಯಾದ 'ಮೊಲಾಯಿಸ್ ಕವಿಯ ಸಾವು' ಆಫ್ರಿಕೆಯ ಕ್ರಾಂತಿಕಾರಿ ಕವಿ ಮೊಲಾಯಿಸ್‌ನ ಸಾವು, ಕ್ರಾಂತಿಯನ್ನು ಕೆದಕಿದ್ದು ಕಥೆಗಾರರ ಭಾವನೆಗಳಿಗೆ ಬೀಜವಾಗಿದೆ. ಬದುಕಿನೊಡನೆ ಬೆರೆತ ಭಾವನೆಗಳು ಅನ್ಯಾಯವನ್ನು ಕಂಡಾಗ ಬದುಕಿನಿಂದ ಬದಿಗೆ ಸರಿದು ಸಿಡಿಯಲು ಪ್ರಯತ್ನಿಸುತ್ತಿರುವ ಹಂತದಲ್ಲಿ ಸ್ವಾರ್ಥ ಅದರ ಮೇಲೆ ತಣ್ಣೀರೆರಚಿ ಬಾಯಿಗೆ ಬಿರಟೆ ಒತ್ತುವುದನ್ನು 'ಮೊಲಾಯಿಸ್ ಕವಿಯ ಸಾವು' ಕಥೆ ಧ್ವನಿಸುತ್ತದೆ. ಅನ್ಯಾಯದ ವಿರುದ್ಧ ಕೊರಳೆತ್ತಲು ಮುಂದಾಗುವ ಪ್ರತಿಭಟನಾ ಧ್ವನಿಗಳು ತನ್ನತನವನ್ನುಳಿಸಿಕೊಳ್ಳಲು ಮೌನವಾಗುವ ದೃಶ್ಯ ಹೆಗಡೆಯವರ ಅನುಭವದಲ್ಲಿ ಸಿಲುಕಿಕೊಂಡಂತೆ ಭಾಸವಾಗುತ್ತದೆ.

'ಹೊರಳು ದಾರಿಯಲ್ಲಿ' ಕಥೆಯಲ್ಲಿ ಸ್ವಇಚ್ಛೆಯಿಂದ ಬದುಕನ್ನು ರೂಪಿಸಿಕೊಳ್ಳಲು ಬಯಸುವ ಆಧುನಿಕ ವ್ಯವಸ್ಥೆ ಮತ್ತು ಬೆಳೆಯುವವರ ಕಾಲಿಗೆ ಸರಪಳಿಹಾಕಿ ನಿಯಂತ್ರಿಸಲು ಹೆಣಗುವ ಹಳೆಯ ವ್ಯವಸ್ಥೆಗಳ ನಡುವಿನ ಹೋರಾಟ ಕಾಣುತ್ತದೆ. ವಯಸ್ಸಿಗೆ ಬಂದ ಮಗಳು ತನ್ನ ಬಾಳ ಸಂಗಾತಿಯನ್ನು ಹುಡುಕಿಕೊಂಡಾಗ ತಾಯಿ–ತಂದೆಯರು ನಡುವೆ ಲಕ್ಷ್ಮಣರೇಖೆ ಎಳೆದು ಅವಳ ಸಂಬಂಧ ಕಡಿದುಕೊಂಡು ತವಕಪಡುವುದು ಕಥೆಯ ಅಂತರಾಳವಾಗಿದೆ. ಮಗಳ ಮೇಲಿನ ಸಿಟ್ಟನ್ನು ಆಫೀಸಿನ ನೌಕರನಾದ ಬಂಕುವಿನ ಮೇಲೆ ಪ್ರಯೋಗಿಸಿ ಅವನ ಮಧುರ ದಾಂಪತ್ಯ ಕಂಡು ಕಲ್ಲಾಗಿದ್ದ ಮನಸ್ಸನ್ನು ಕರಗಿಸಿಕೊಂಡು ಮಗಳ ಸಂಬಂಧದ ಕೊಂಡಿತಾಗಿಸಿಕೊಳ್ಳಲು ಹೊರಳುವ ತಂದೆಯ ಚಿತ್ರಣ ಕಥೆಯ ತುಂಬಾ ಹರಡಿಕೊಂಡಿದೆ. ಸಂಪ್ರದಾಯಕ್ಕೆ ಸೋಲೊದಗಿ ಆಧುನಿಕ ವ್ಯವಸ್ಥೆಗೆ ಜಯಲಭಿಸುವುದರ ಕಡೆಗೆ ಕಥೆ ಮುಖಮಾಡಿದೆ.

'ಛಲಗಾರ' ಕಥೆಯು ಹಟ ಸಾಧನೆಯ ವಸ್ತುವನ್ನು ಹೊಂದಿದೆ. ಮನೆಯ ಯಜಮಾನ ತನ್ನತನದ ಬಾವುಟವನ್ನು ಮನೆ ಮಂದಿಯ ಎದೆಗಳ ಮೇಲೆ ನಿಲ್ಲಿಸಲು ಪ್ರಯತ್ನಿಸುವಾಗ ಅದರಡಿ ಸಿಕ್ಕಿ ನರಳುವವರು ಮೌನದಲ್ಲೇ ನೋವು ನುಂಗಿಕೊಳ್ಳುವ ಚಿತ್ರಣ ಕಥೆಯಲ್ಲಿದೆ.

ಮಾನವ ಎಷ್ಟೇ ಸ್ಥಿರ ಮನಸ್ಕನಾದರೂ ಕೆಲವು ಸಂದರ್ಭಗಳಲ್ಲಿ ಪರಿಸ್ಥಿತಿಯ ಒತ್ತೆಯಾಳಾಗಿಹೋಗುತ್ತಾನೆ. ಹೆಗಡೆಯವರ 'ಬಿಡುಗಡೆ' ಕಥೆಯು ಪರಿಸ್ಥಿತಿಗೆ ಮಾರಿಕೊಂಡವರನ್ನು ಪರಿಚಯಿಸುತ್ತದೆ. ಇದರಲ್ಲಿ ಕಾಮದ ಕೈಗೆ ಸಿಕ್ಕ ಪಾತ್ರಗಳು

ಮುಖವಾಡ ಧರಿಸಿ ಸಮಾಜದಲ್ಲಿ ತಲೆಯೆತ್ತಿ ನಡೆದರೂ ಒಳ ಹುದುಗಿದ ಆಸೆಗೆ ರಹಸ್ಯ ಸ್ಥಳಗಳನ್ನು ಹುಡುಕಿಕೊಳ್ಳುತ್ತವೆ.

'ಮಾಗಿ ಮಲ್ಲಿಗೆ' ಕಥೆ ಸಂಕಲನದಲ್ಲೇ ದೀರ್ಘವಾದುದು. ಭೂತ ಘಟನೆಯ ಸುರುಳಿಯು ವರ್ತಮಾನದಲ್ಲಿ ಬಿಚ್ಚಿಕೊಳ್ಳುವ ವಿನ್ಯಾಸದಲ್ಲಿ ಕಥೆಯನ್ನು ಹೆಣೆಯಲಾಗಿದೆ. ಬದುಕಿನ ಬಲೆ ಹೆಣೆದುಕೊಳ್ಳುವ ಮತ್ತು ಬದುಕನ್ನು ಬದಿಗೊತ್ತಲು ಹವಣಿಸುವ ಪಾತ್ರಗಳ ನಡುವಿನ ಸಂಘರ್ಷವನ್ನು ಕಥೆ ಬಿಂಬಿಸುತ್ತದೆ. ಬದುಕಿನ ಸುಳಿಯಿಂದ ಮುಕ್ತವಾಗಲು ಹೋರಾಡುವವರ ಪರವಾಗಿ ಕಥೆಗಾರರ ನಿಲುವಿದೆ. ಆದ್ದರಿಂದಲೇ 'ಮಾಗಿಯ ಮಲ್ಲಿಗೆ'ಯ ಸುವಾಸನೆಯನ್ನು ಅವರಲ್ಲಿ ಹೊಮ್ಮಿಸಿ, ಜನರ ನಡುವೆ ಅವರಿಗೆ ಸ್ಥಿರ ನೆಲೆ ಹುಡುಕಿಕೊಡಲು ಕಥೆಗಾರರು ಪ್ರಯತ್ನಿಸಿದ್ದಾರೆ.

ಕಥಾಸಂಕಲನದ ಶೀರ್ಷಿಕೆಯ ಕಥೆ 'ಪುಟ್ಟ ಗುಲಾಬಿ ಹೂವೇ' ಉಳಿದೆಲ್ಲಾ ಕಥೆಗಳಿಗಿಂತ ಭಿನ್ನವಾಗಿ ನಿಲ್ಲುತ್ತದೆ. ಸಾಂಕೇತಿಕ ಗುಣವನ್ನು ಹೊಂದಿರುವ ಈ ಕಥೆಯು ರೂಪಕ ಕಥೆಗಳ ಗುಂಪಿಗೆ ಸೇರುತ್ತದೆ. ಮಾನವೀಯ ಸಂಬಂಧಗಳಿಗೆ ಕಟ್ಟು ಹಾಕುವ ಪ್ರೀತಿ ಮತ್ತು ತಾಳ್ಮೆಯನ್ನು ಕಥೆಗಾರ ಕಲಾತ್ಮಕವಾಗಿ ಪರಿಚಯಿಸಿದ್ದಾನೆ. ಹೆಗಡೆಯವರು ಈ ಕಥೆಯ ಮೂಲಕ ಉತ್ತಮ ಕಥೆಗಾರರಾಗುವಂತಹ ಲಕ್ಷಣಗಳನ್ನು ಹೊಮ್ಮಿಸಿದ್ದಾರೆ. ಬಿ. ಆರ್. ಲಕ್ಷ್ಮಣರಾವ್ ಅವರು 'ಈ ರೂಪಕ ಕಥೆ ತುಂಬ ಮಾರ್ಮಿಕವಾಗಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿರುವುದನ್ನು ಒಪ್ಪಬಹುದಾಗಿದೆ.

ಆರ್. ಡಿ. ಹೆಗಡೆಯವರ ಕಥೆಗಳ ಒಟ್ಟು ನೋಟದಲ್ಲಿ : ಸವಕಳಿಯಾದ ವಸ್ತುಗಳನ್ನು ಸ್ವೀಕರಿಸಿದ್ದರೂ ಅವುಗಳನ್ನು ಕೊಂಡೊಯ್ಯುವ ಹೊಸಹಾದಿ, ವಸ್ತುವನ್ನು ದುಡಿಸಿಕೊಂಡಿರುವ ಕಲಾತ್ಮಕತೆ, ಆಧುನಿಕ ವ್ಯವಸ್ಥೆಯ ಪರ ಕಥೆಗಾರರ ನಿಲುವು ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ ಪ್ರಯತ್ನ ಕಂಡುಬರುತ್ತದೆ. ಬಿ.ಆರ್. ಲಕ್ಷ್ಮಣರಾವ್ ಅವರು ಹಿನ್ನುಡಿಯಲ್ಲಿ ಹೇಳಿರುವ "ತನ್ನ ಕಕ್ಷೆಗೆ ಒದಗಿ ಬಂದ ಜೀವಾನುಭವಗಳನ್ನು ಮಾನವ ಸಂಬಂಧಗಳ ನೆಲೆಯಲ್ಲಿ ಪರಿಭಾವಿಸಿ, ಸೂಕ್ಷ್ಮವಾಗಿ ವಿಶ್ಲೇಷಿಸಿ ಬೆಲೆ ಕಟ್ಟುವ ಮತ್ತು ಬಾಳಿನ ಅರ್ಥವಂತಿಕೆಯನ್ನು ಶೋಧಿಸುವ ಕಥೆಗಾರನ ಪ್ರಯತ್ನ ಇಲ್ಲಿನ ಎಲ್ಲ ಕಥೆಗಳಲ್ಲೂ ನಿಚ್ಚಳವಾಗಿ ಎದ್ದು ತೋರುತ್ತದೆ" ಎಂಬ ಅಭಿಪ್ರಾಯವನ್ನು ಕಡೆಗಣಿಸುವಂತಿಲ್ಲ. ಆದರೂ ಹೆಗಡೆಯವರು ಕೆಲವು ಸಂದರ್ಭಗಳಲ್ಲಿ ಜನಪ್ರಿಯ ಅಪಾಯ ಕಥೆಗಳ ಸಮೀಪ ಸುಳಿಯಲು ಹೆಜ್ಜೆ ಹಾಕುವುದರ ಕಡೆಗೆ ಎಚ್ಚರಿಕೆವಹಿಸಬೇಕಾಗುತ್ತದೆ. ಸೃಜನಶೀಲ ಹುಡುಕಾಟದ ಕಡೆಗೆ ಅವರ ಭಾವನೆಗಳು ಗರಿಗೆದರಿದರೆ ಕಥೆಗಳಲ್ಲಿ ತನ್ನತನದ ಮುದ್ರೆಯನ್ನು ಅವರು ಬಿತ್ತಬಹುದು. ಮುಂದಿನ ಅವರ ಕಥೆಗಳು ಆ ಆಶಯವನ್ನು ಹೊತ್ತುತರಬಹುದೆಂದು ಭಾವಿಸಿದ್ದೇನೆ.

(**ಪುಟ್ಟ ಗುಲಾಬಿ ಹೂವೇ** (ಕಥಾಸಂಕಲನ) : ಆರ್. ಡಿ. ಹೆಗಡೆ, ಅಲ್ಮನೆ ಪ್ರಕಾಶನ ಕಾನಗೋಡು, ಸಿರ್ಸಿ (ಉ. ಕ.) 1989.)

—ಡಾ॥ ಸೈಯದ್ ಜಮೀರುಲ್ಲಾ ಷರೀಫ್

ಪುಸ್ತಕ ಸ್ವೀಕಾರ

ಕವನ ಸಂಕಲನ

- **ಅಣುಕ್ಷಣ ಚರಿತೆ** : ಎಚ್. ಎಸ್. ಶಿವಪ್ರಕಾಶ, ಪುಟ 170, ಬೆಲೆ ರೂ. 40, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು–560029.
- **ಕನ್ನೆಯ ಸ್ನೇಹ** : ಡಾ॥ ಕಾಳೇಗೌಡ ನಾಗವಾರ, ಪುಟ 72, ಬೆಲೆ ರೂ. 15.
- **ಹೊಕ್ಕಳಲ್ಲಿ ಹೂವಿದೆ** : ರಮಜಾನ್ ದರ್ಗಾ, ಪುಟ 68, ಬೆಲೆ ರೂ. 15. (ಮೇಲಿನ ಎರಡೂ ಪುಸ್ತಕಗಳ ಪ್ರಕಾಶಕರು : **ರಾಗಿ ರೊಟ್ಟಿ ಪ್ರಕಾಶನ,** ನಂ. 1, ಬಸಪ್ಪ ಕಾಲೋನಿ, ಸಂಜಯನಗರ, ಬೆಂಗಳೂರು.)
- **ಕಪ್ಪು ಹುಡುಗನ ಬೆಳಗು** : ಎಸ್. ನಟರಾಜ ಬೂದಾಳ್, ಪುಟ 60. ಬೆಲೆ ರೂ. 12, ವಸುಮತಿ ಪ್ರಕಾಶನ, ಶ್ರೀ ನಿಲಯ, ಊರ್ಡಿಗೆರೆ–572140.
- **ಸಪ್ತ ಶೃಂಗ** : ದೊಡ್ಡರಂಗೇಗೌಡ, ಪುಟ 114, ಬೆಲೆ ರೂ. 14, ಪಂಚಮುಖಿ ಪ್ರಕಾಶನ, ಸುಬ್ರಹ್ಮಣ್ಯನಗರ, ಬೆಂಗಳೂರು–560021.
- **ವಸಂತ ಮೇಘ ಘರ್ಜನೆ** : ಸಂ : ಬಂಜಗೆರೆ ಜಯಪ್ರಕಾಶ್, ಪುಟ 94, ಬೆಲೆ ರೂ. 7, ಬೆಳ್ಳಿ-ಚುಕ್ಕಿ ಪ್ರಕಟಣೆ, ಬೆಂಗಳೂರು–560040.
- **ಚುಕ್ಕಿಗಳು** : ಪ್ರೇಮಸಿರ್ಸಿ, ಪುಟ : 106, ಬೆಲೆ ರೂ. 10, ಆನಂದ ಪ್ರಕಾಶನ, ಬೀದರ್.
- **ಮಿಂಚು ಗೊಂಚಲು** : ಸಂ : ರುದ್ರನಾಥ ಕಲ್ಯಾಣಶೆಟ್ಟಿ, ಪ್ರೊ॥ ಬಸವರಾಜ ಹಣಜಿ, ಪುಟ 56, ಬೆಲೆ ರೂ. 10.
- **ಬೇರುಗಳು** : ಶಂಕರಗೌಡ ಸಾತ್ಮಾರ, ಪುಟ 56, ಬೆಲೆ ರೂ. 8.
- **ವರ್ತಮಾನ** : ಮಾರುತಿ ಭೋಸಲೆ, ಪುಟ 60, ಬೆಲೆ ರೂ. 8.50. ಮೇಲಿನ ಮೂರು ಪುಸ್ತಕಗಳ ಪ್ರಕಾಶಕರು: **ಸಾಹಿತ್ಯ ವೇದಿಕೆ, ನರಗುಂದ** ಧಾರವಾಡ ಜಿಲ್ಲೆ
- **ಚಿತ್ತಾರ** : ಸಂ : ಎಚ್. ಗೋಪಾಲಕೃಷ್ಣ, ಪುಟ 48, ಬೆಲೆ ರೂ. 10. ಕೈಗಾರಿಕಾ ರಂಗದ ಸಾಹಿತ್ಯ ವೇದಿಕೆ, ಬೆಂಗಳೂರು–560013.

ಇತರೆ

- **ಕೆ. ಎಸ್. ನಾ. ನುಡಿಮಲ್ಲಿಗೆ** : ನರಹಳ್ಳಿ ಬಾಲಸುಬ್ರಹ್ಮಣ್ಯ, ಪುಟ : 110, ಬೆಲೆ ರೂ. 12, ಕೃತಿ ಪ್ರಕಾಶನ, ಬೆಂಗಳೂರು–560070.
- **ಆಕಾರ** : ಸಂ: ನ. ರವಿಕುಮಾರ್, ಪುಟ : 32, ಬೆಲೆ ರೂ. 4.
- **ಶ್ರಾವಣ** : ಯುವ ಬರಹಗಾರರು, ಪುಟ 56, ಬೆಲೆ ರೂ. 10. ಮೇಲಿನ ಎರಡೂ ಪುಸ್ತಕಗಳ ಪ್ರಕಾಶಕರು : ಪ್ರತಿಭಾ ಯುವ ವೇದಿಕೆ, 3399, 5ನೇ ಕ್ರಾಸ್, ಗಾಯತ್ರಿನಗರ, ಬೆಂಗಳೂರು–560021.

o **ಕುವೆಂಪು ಯುಗ :** ಕೆ. ಎಸ್. ಭಗವಾನ್, ಪುಟ 206, ಬೆಲೆ ರೂ. 24, ಶ್ರೀ ಕುವೆಂಪು ವಿದ್ಯಾ ಪರಿಷತ್, ಸಹ್ಯಾದ್ರಿ ಪ್ರಕಾಶನ, ಜಯಲಕ್ಷ್ಮಿಪುರಂ, ಮೈಸೂರು–570016.

o **ಅವನತಿಯೆಡೆಗೆ ದೇವರು, ಧರ್ಮ :** ಮೂಲ : ರಾಹುಲ ಸಾಂಕೃತ್ಯಾಯನ, ಅನು : ಜಿ. ಭಾಸ್ಕರಮಯ್ಯ, ಪುಟ 76, ಬೆಲೆ ರೂ. 10, ಜನಸ್ನೇಹ ಪ್ರಕಾಶನ, ವಿಜಯನಗರ 2ನೇ ಹಂತ, ಬೆಂಗಳೂರು–560040.

o **ದೇವಿ ಭೂತ ಕನಸು ಮತ್ತು ವಿಜ್ಞಾನ :** ಡಾ॥ ಐ. ಎ. ಲೋಕಾಪುರ, ಪುಟ 32, ಬೆಲೆ 7, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಘಟಕ ಹರಿಹರ–577601.

o **ಕುಲ್ಡ - ಕುಂಟಿ, ಕೆಪ್ಪ - ಜಾಣರ ಜಾನಪದ ಕತೆಗಳು :** ಸಂ : ಜೀನಹಳ್ಳಿ ಸಿದ್ಧಲಿಂಗಪ್ಪ, ಬೆಲೆ ರೂ. 8, ಪುಟ 72, ಪ್ರೇಮಪ್ರಕಾಶನ, ಜೀನಹಳ್ಳಿ–577223. ಶಿವಮೊಗ್ಗ –ಜಿಲ್ಲೆ.

o **ಶಿಕ್ಷಣಯೋಗಿ ಚನ್ನಬಸಪ್ಪನವರು :** ಸಂ : ವಿದ್ವಾನ್ ಜಿ. ವಿ. ಶಿವಸ್ವಾಮಿ, ಪುಟ 42, ಬೆಲೆ ರೂ. 6. ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–560018.

ಸಣ್ಣ ಕತೆ

o **ವೈಶಾಖ :** 'ಪ್ರಭಾ', ಪುಟ 148, ಬೆಲೆ ರೂ. 18, ಸ್ನೇಹ ಚೈತ್ರ ಪ್ರಕಾಶನ, ವಿದ್ಯಾರಣ್ಯಪುರ ಜಾಲಹಳ್ಳಿ, ಬೆಂಗಳೂರು–560013.

o **ನಿರ್ಣಯ :** ಕೆ. ರಾಜೇಶ್ವರಿ, ಪುಟ 88, ಬೆಲೆ ರೂ. 12, ಭರತ-ಸ್ಮಿತಾ ಪ್ರಕಾಶನ, "ಕಾವ್ಯಶ್ರೀ" ವಿಶ್ವೇಶ್ವರಯ್ಯ ಬಡಾವಣೆ, ಹೊಸಕೋಟೆ–562114.

o **ತಿರುವುಗಳು :** ಸೈಯದ್ ಜಮೀರುಲ್ಲಾ ಷರೀಫ್, ಪುಟ 136, ಬೆಲೆ ರೂ. 15, ಮೆ. ಫೇಮಸ್ ಪಬ್ಲಿಷರ್ಸ್, ಬಾಗಲಕೋಟೆ–587106.

ನಾಟಕ

o **ನರಬಲಿ :** ಜ. ಹೊ. ನಾರಾಯಣಸ್ವಾಮಿ, ಪುಟ 74 ಬೆಲೆ ರೂ. 15, ಮಾನವ ಪ್ರಕಾಶನ, 2064/ಎ, ಉತ್ತರ ಬಡಾವಣೆ, ಹಾಸನ–573201.

o **ಕೆಂಡ ಮಂಡಲ :** ಬಿ. ಚಿನ್ನಸ್ವಾಮಿ, ಪುಟ 68, ಬೆಲೆ ರೂ. 10, ರಂಗಚೇತನ, ಚಾಮರಾಜಪೇಟೆ, ಬೆಂಗಳೂರು-560 018.

o **ಪ್ರವಾಹ** (ಕಾದಂಬರಿ) ಜೆ. ಎಂ. ಪ್ರಹ್ಲಾದ್, ಪುಟ 162, ಬೆಲೆ ರೂ. 18, ಸಿ. ಕೆ. ಪ್ರಕಾಶನ, ಮಹಾಕವಿ ಕುವೆಂಪುರಸ್ತೆ, ಬೆಂಗಳೂರು–560 021.

ಪ್ರಿಯರೆ,

''ಅನ್ವೇಷಣೆ''ಯ ಚಂದಾ ಬಾಕಿ ಕಳುಹಿಸಿ ಎಂದು ವೈಯಕ್ತಿಕವಾಗಿ ಎಲ್ಲಾ ಚಂದಾದಾರರಿಗೂ ಬರೆಯಲು ಸಾಧ್ಯವಾಗಿಲ್ಲ. ನೂರಾರು ಮಿತ್ರರಿಗೆಪತ್ರಿಕೆ ತಲುಪುತ್ತಿದ್ದರೂ 'ಮೌನ'ವಾಗಿರುತ್ತಾರೆ. ಈಗ ಅಂಥವರು ಪತ್ರಿಕೆ ಬೇಕು/ಬೇಡಗಳ ಬಗ್ಗೆ ದಯವಿಟ್ಟು ತಿಳಿಸಿ. ಪತ್ರಿಕೆ ಬೇಕಿದ್ದವರು 'ಬಾಕಿ' ಕಳುಹಿಸುವುದರ ಮೂಲಕ ಪತ್ರಿಕೆ ಉಳಿಸಿ ಬೆಳೆಸಲು ಸಹಕರಿಸಿ ಎಂದು ಈ ಮೂಲಕ ಮನವಿ ಮಾಡಿಕೊಳ್ಳುತ್ತಿರುವೆ.

ಜೊತೆಗೆ ಕಾಲೇಜು ಅಧ್ಯಾಪಕ ಮಿತ್ರರಲ್ಲೊಂದು ಮನವಿ: ನಿಮ್ಮ ಕಾಲೇಜು ಗ್ರಂಥಾಲಯಕ್ಕೆ 'ಅನ್ವೇಷಣೆ ತರಿಸಿಕೊಳ್ಳುವ ವ್ಯವಸ್ಥೆ ಮಾಡಿ-ಬರೆಯಿರಿ.

೧೯೮೧ರ ನಿಮ್ಮ ಚಂದಾ ನವೀಕರಣ ಮಾಡಿ.

—ಸಂಪಾದಕ

ಈ ಸಂಚಿಕೆಯ ಲೇಖಕರು/ವಿಳಾಸ

---

o **ಡಾ॥ ಪ್ರೋಲಂಕಿ ರಾಮಮೂರ್ತಿ,** ಮುಖ್ಯಸ್ಥರು: ಇಂಗ್ಲಿಷ್ ವಿಭಾಗ, ಮಾನಸ ಗಂಗೋತ್ರಿ, ಮೈಸೂರು-570006. o **ಡಾ॥ ಕೇಶವಶರ್ಮ,** ಕನ್ನಡ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಬಿ. ಆರ್. ಪ್ರಾಜೆಕ್ಟ್ – 577115. o **ಡಾ॥ ಬಸವರಾಜ ಸಬರದ,** ರೀಡರ್, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ-585106. o **ಆರ್. ವಿ. ಭಂಡಾರಿ,** ಉಪಾಧ್ಯಾಯರು, ಅರೆ ಅಂಗಡಿ-581330, ಹೊನ್ನಾವರ ತಾ॥ ಉ.ಕ. ಜಿಲ್ಲೆ. o **'ಕಾವ್ಯಜೀವಿ** (ಡಾ॥ ಎಸ್. ಪಿ. ಪದ್ಮಪ್ರಸಾದ್) ಬಿ.ಇಡಿ, ಕಾಲೇಜು, ಇಳಕಲ್, ಬಿಜಾಪುರ-ಜಿಲ್ಲೆ. o **ಜಿ. ಎಂ. ಕುಲಕರ್ಣಿ,** ರಾಜೇಂದ್ರನಗರ, ಪಶ್ಚಿಮ ಬಡಾವಣೆ, ಹಾವೇರಿ - 581110. o **ಹೊಸೂರು ಮುನಿಶಾಮಪ್ಪ** ಕನ್ನಡ ಉಪನ್ಯಾಸಕ, ಎನ್. ಎಂ. ಕೆ. ಆರ್. ವಿ. ಮಹಿಳಾ ಕಿರಿಯ ಕಾಲೇಜು, ಜಯನಗರ, ಬೆಂಗಳೂರು-560011. o **ಅಳಗುಂಡಿ ಅಂದಾನಯ್ಯ,** ಕಾರ್ಯ ನಿರೀಕ್ಷಕರು, ನಗರಸಭಾ ಕಾರ್ಯಾಲಯ, ದಾಂಡೇಲಿ - 581325. ಉ.ಕ. ಜಿಲ್ಲೆ. o **ನಜೀರ್ ಚಂದಾವರ,** ಸಿರಸಿ-581401. ಉ.ಕ. ಜಿಲ್ಲೆ. o **ಡಾ॥ ಸೈಯದ್ ಜಮೀರುಲ್ಲಾ ಷರೀಫ್,** ಅಂಜುಮನ್ ಕಾಲೇಜು, ಭಟ್ಕಳ-581320. (ಉ.ಕ.)

ANVESHANE MAG (5) PRB-DECL 127/85-36

ಅನ್ವೇಷಣೆ ಪ್ರಕಾಶನ, ಬೆಂಗಳೂರು–೫೬೦ ೦೪೦

೧. ಬಂಡಾಯ ಹತ್ತು ವರ್ಷ : ಸಂ : ಆರ್. ಜಿ. ಹಳ್ಳಿ ನಾಗರಾಜ್–ರೂ. 12
೨. ಅಯೋಧ್ಯೆ : ಬಾಬರ್–ಶ್ರೀರಾಮ (ವೈಚಾರಿಕ) ,, ರೂ. 4
೩. ಬೇರು ಬಣಗಿದೆ ಪ್ರೀತಿ (ಕಾವ್ಯ) : ಬಿ. ಎನ್. ಮಲ್ಲೇಶ್ ರೂ. 12
೪. ಮೊದಲು ಗೊತ್ತಿರಲಿಲ್ಲ* (ಕಾವ್ಯ) : ಕೆ. ಎಂ. ಮುನಿಕೃಷ್ಣಪ್ಪ ರೂ. 9

ಮುಂದಿನ ಪ್ರಕಟಣೆ : **ಬಂಡಾಯ ವಿಮರ್ಶೆ**

*ಪ್ರತಿಗಳು ಮುಗಿದಿವೆ.

ವಿವರಗಳಿಗೆ : ಸಂಪಾದಕ, ಅನ್ವೇಷಣೆ ಸಂಪರ್ಕಿಸಿ.

'ಅನ್ವೇಷಣೆ' ಸಾಹಿತ್ಯ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಮೀಸಲಾದ ಪತ್ರಿಕೆ

- ನವ್ಯೋತ್ತರ ಕನ್ನಡ ಸಾಹಿತ್ಯದ ಮಹತ್ವದ ದಾಖಲೆಗಳಿಗೆ
- ಪ್ರಗತಿಪರ ವಿಚಾರಗಳಿಗೆ, ಸೈದ್ಧಾಂತಿಕ ಹಿನ್ನೆಲೆಯ ಮುಕ್ತ ವಿಚಾರಗಳಿಗೆ
- ಹಿರಿ-ಕಿರಿ ಬರಹಗಾರರ ತಾತ್ವಿಕ ವಿಚಾರಗಳ ಸಂವಾದಕ್ಕೆ

ಚಂದಾ ವಿವರ : ವಾರ್ಷಿಕ ಚಂದಾ ರೂ. 35-ವ್ಯಕ್ತಿಗಳಿಗೆ
ರೂ. 50–ಗ್ರಂಥಾಲಯಕ್ಕೆ
ಮೂರು ವರ್ಷಕ್ಕೆ ರೂ. 100–ವ್ಯಕ್ತಿಗಳಿಗೆ
ರೂ. 150–ಗ್ರಂಥಾಲಯಗಳಿಗೆ

ಅಜೀವ ಚಂದಾ ರೂ. 500 ಸಂಸ್ಥೆ/ಗ್ರಂಥಾಲಯಕ್ಕೆ ಮಾತ್ರ

ವಿಳಾಸ ಸಂಪಾದಕ, "ಅನ್ವೇಷಣೆ", 478
11ನೇ ಮುಖ್ಯರಸ್ತೆ, ಎಂ. ಸಿ. ಬಡಾವಣೆ
ವಿಜಯನಗರ, ಬೆಂಗಳೂರು-560 040.

ಸಂಪಾದಕ/ಮುದ್ರಕ : ಆರ್. ಜಿ. ಹಳ್ಳಿ ನಾಗರಾಜ್, ಪ್ರಕಾಶಕರು : ಅರುಣ ಯುವ ಲೇಖಕರ ಬಳಗ, ಬೆಂಗಳೂರು-79. ಚೇತನ ಪ್ರಿಂಟರ್ಸ್, ಎಲ್. ಎನ್. ಪುರಂ, ಬೆಂಗಳೂರು-21